27 June 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಕಾಲಕ್ಕೆ ಸರಿಯಾಗಿ ಏನೂ ಅರ್ಥವಾಗದು! ಅರ್ಥವಾದಾಗ ಕಾಲ ಕಳೆದು ಹೋಗಿರುತ್ತದೆ, ಇದೇ ವಿಪರ್ಯಾಸ!

-ಸ್ನೇಹಾ ಆನಂದ್

info.varthaman@gmail.com



ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಬಂಧನ ರಾಜಕೀಯ ಪಿತೂರಿ ಪುಟ ಸಂ. 2



ಸರ್ಕಾರಿ ಆಸ್ಪತ್ರೆಯಲ್ಲಿ ಹಣ ಕೇಳಿದರೆ ಕ್ರಮ: ಎಚ್.ಡಿ.ರೇವಣ್ಣ ಪುಟ ಸಂ. 2



ಮತಪಟ್ಟಿ ಪರಿಷ್ಕರಣೆ: ಬಿಎಲ್‌ಎಗಳಿಗೆ ಶಾಸಕರ ಮಾರ್ಗಸೂಚಿ ಪುಟ ಸಂ. 2

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 209 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಮುಂಗಾರು ವಿಫಲ: ಬರಗಾಲ ಸ್ಥಿತಿ

## ಎಲ್‌ನಿನೊ ಪರಿಣಾಮ | ರಾಜ್ಯದಲ್ಲಿ ಶೇ.41ರಷ್ಟು ಮಳೆ ಕೊರತೆ

**ಬೆಂಗಳೂರು:** ಕರ್ನಾಟಕದಲ್ಲಿ ಮಾನ್ಸೂನ್ ಆರಂಭವಾದ ನಂತರ ಶೇ.41ರಷ್ಟು ಮಳೆ ಕೊರತೆ ಉಂಟಾಗಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಜ್ಞರು ವಿಫಲ ಮಾನ್ಸೂನ್ ಅವಧಿ ಎಂದು ಕರೆದಿದ್ದಾರೆ.

ಐಎಂಡಿ ದತ್ತಾಂಶದ ಪ್ರಕಾರ ರಾಜ್ಯದಲ್ಲಿ 162.5 ಮಿಮೀ ಬದಲಿಗೆ ಕೇವಲ 95.2 ಮಿಮೀ ಮಳೆಯನ್ನು ದಾಖಲಿಸಿದೆ. ಎಲ್ ನಿನೊ ಪರಿಣಾಮ ಹೆಚ್ಚಾಗಿ ಕಂಡುಬರುತ್ತಿರುವುದರಿಂದ ದೀರ್ಘಾವಧಿಯ ಬರ ನಿರ್ವಹಣಾ ಯೋಜನೆಗಳನ್ನು ರೂಪಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಕಳಪೆ ಮಾನ್ಸೂನ್ ಹಿನ್ನೆಲೆಯಲ್ಲಿ ರಾಜ್ಯದ ಅನೇಕ ಸ್ಥಳಗಳಲ್ಲಿ ತಾಪಮಾನವು ಏರಲು ಪ್ರಾರಂಭಿಸಿದೆ. ಒಟ್ಟಾರೆಯಾಗಿ ಕರ್ನಾಟಕ ಶೇ.42ರಷ್ಟು ಮಳೆ ಕೊರತೆಯನ್ನು ದಾಖಲಿಸಿದೆ. ಕರಾವಳಿ ಕರ್ನಾಟಕದಲ್ಲಿ ಮಾತ್ರ ಇದು ಶೇ.50ರಷ್ಟು ಮತ್ತು ಬೆಂಗಳೂರಿನಲ್ಲಿ ಶೇ.25 ಆಗಿದೆ.

ಮುಂಗಾರು ವಿಫಲವಾಗಲು ಕೇವಲ ಎಲ್ ನಿನೊ ಮಾತ್ರ ಕಾರಣವೆಂದು ತಜ್ಞರು ಉಲ್ಲೇಖಿಸುವುದಿಲ್ಲ. ಅರೇಬಿಯನ್ ಸಮುದ್ರ ಮತ್ತು ಬಂಗಾಳಕೊಲ್ಲಿಯಲ್ಲಿ ಕಡಿಮೆ ಹವಾಮಾನ ವ್ಯವಸ್ಥೆ ರೂಪುಗೊಂಡಿದೆ. ಇದು ರಾಜ್ಯ ಮತ್ತು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದ್ದಾರೆ.

2023ರಲ್ಲಿ ಇದೇ ರೀತಿ ಪರಿಸ್ಥಿತಿಯನ್ನು ಅನುಭವಿಸಲಾಯಿತು. ಅದರ ಅಲೆಗಳ ಪರಿಣಾಮಗಳು 2024ರವರೆಗೆ ಮುಂದುವರೆದವು.

ಬೆಂಗಳೂರಿನಲ್ಲಿ ಜೂನ್ 25ರವರೆಗೆ ಸಾಮಾನ್ಯ ಮುನ್ಸೂಚನೆಯಾದ 89 ಮಿ.ಮೀ. ಬದಲಾಗಿ ಕೇವಲ 66 ಮಿ.ಮೀ. ಮಳೆ ದಾಖಲಾಗಿದೆ ಎಂದು ಐಎಂಡಿ ಹಿರಿಯ ವಿಜ್ಞಾನಿ ಸಿ.ಎಸ್.ಪಾಟೀಲ್ ತಿಳಿಸಿದ್ದಾರೆ.

ಸೂಪರ್ ಎಲ್ ನಿನೊ ಪ್ರಭಾವದಿಂದ ಮುಂಬರುವ ತಿಂಗಳುಗಳಲ್ಲಿ ರಾಜ್ಯದಲ್ಲಿ ಉಂಟಾಗಬಹುದಾದ ಬರಗಾಲದಂತಹ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಚಿವ ಡಾ.ಜಿ.ಪರಮೇಶ್ವರ ಸೂಚಿಸಿದ್ದಾರೆ.



## 10 ರೈತರಿಗೆ 19.69 ಕೋಟಿ ಪರಿಹಾರದ ಚೆಕ್ ವಿತರಣೆ

**ರಾಮನಗರ:** ಬಿಡದಿ ಸಮೀಪದ ಉಪನಗರ ಯೋಜನೆಗೆ ಭೂಮಿ ಕೊಡಲು ಒಪ್ಪಿರುವ ಯೋಜನಾ ಪ್ರದೇಶದ ವಡೇರಹಳ್ಳಿ ಮತ್ತು ಕೆಂಪಯ್ಯನಪಾಳ್ಯದ 10 ಭೂಮಾಲೀಕರಿಗೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಕಚೇರಿಯಲ್ಲಿ 19.69 ಕೋಟಿ ಪರಿಹಾರದ ಚೆಕ್ ವಿತರಿಸಲಾಯಿತು.

ಯೋಜನೆಗೆ ಭೂಮಿ ಕೊಡಲು ಒಪ್ಪಿದವರಿಗೆ ಪರಿಹಾರ ವಿತರಣೆಗೆ ಶಾಸಕ ಎಚ್.ಸಿ.ಬಾಲಕೃಷ್ಣ ಚಾಲನೆ ನೀಡಿದ್ದರು. ಜೂನ್ 24 ರವರೆಗೆ 17 ಭೂ ಮಾಲೀಕರಿಗೆ 13.01 ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜು ಗಾಣಕಲ್ಲು ತಿಳಿಸಿದ್ದಾರೆ.


ವಡೇರಹಳ್ಳಿ 3 ಹಾಗೂ ಕೆಂಪಯ್ಯನಪಾಳ್ಯ 7 ಮಂದಿಗೆ ಪರಿಹಾರದ ಚೆಕ್ ವಿತರಿಸಲಾಗಿದೆ. ರೈತರಿಗೆ ವಿತರಿಸಿರುವ ಪರಿಹಾರದಲ್ಲಿ ಭೂ ಪರಿಹಾರ, ಮರಮಾಲ್ಕಿ ಪರಿಹಾರ ಹಾಗೂ ಪ್ರತಿ ಭೂ ಮಾಲೀಕನಿಗೆ ಜೀವನಾಂಶಕ್ಕಾಗಿ 5 ಲಕ್ಷ ರು. ಇಡುಗಂಟು ಸೇರಿದೆ. ಈ ಪೈಕಿ ಕೆಂಪಯ್ಯನಪಾಳ್ಯದ ಶುಭ ಎಂಬುವರು ಗರಿಷ್ಠ 10.72 ಕೋಟಿ ಪರಿಹಾರ ಪಡೆದಿದ್ದಾರೆ ಎಂದು ಹೇಳಿದರು.

## ಕೇಂದ್ರದಿಂದ ವಾಣಿಜ್ಯ ಗ್ಯಾಸ್ ಸಿಲಿಂಡರ್ ನಿರ್ಬಂಧ ತೆರವು

**ಬೆಂಗಳೂರು:** ರಾಜ್ಯದ ಹೋಟೆಲ್ ಉದ್ಯಮಕ್ಕೆ ಕೇಂದ್ರ ಸರ್ಕಾರ ಗುಡ್ ನ್ಯೂಸ್ ನೀಡಿದೆ. ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆ ಮೇಲೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ತೆರವುಗೊಳಿಸಿದೆ.

ಕರ್ನಾಟಕದಲ್ಲಿ ಹೋಟೆಲ್‌ಗಳು ಮತ್ತೆ ಹಿಂದಿನಂತೆ ಅಡುಗೆ ಕಾರ್ಯಾಚರಣೆ ನಡೆಸಲು ಅನುಕೂಲವಾಗಿದೆ. ಮಧ್ಯಪ್ರಾಚ್ಯದ ಉದ್ವಿಗ್ನ ಪರಿಸ್ಥಿತಿಯಿಂದ ಕಳೆದ ಕೆಲವು ತಿಂಗಳುಗಳಿಂದ ವಾಣಿಜ್ಯ ಎಲ್‌ಪಿಜಿ ಪುಟ 2ಕ್ಕೆ

## ಬಂಡೀಪುರ, ನಾಗರಹೊಳೆಯಲ್ಲಿ ಪೂರ್ಣ ಸಫಾರಿಗೆ 'ಗ್ರೀನ್ ಸಿಗ್ನಲ್'



**ಬೆಂಗಳೂರು:** ತಜ್ಞರು ಮತ್ತು ಅಧಿಕಾರಿಗಳ ತಾಂತ್ರಿಕ ಸಮಿತಿ ಶಿಫಾರಸಿನ ಅನ್ವಯ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಜಂಗಲ್ ಸಫಾರಿ ಪುನರಾರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಬಗ್ಗೆ ತಾಂತ್ರಿಕ ಸಮಿತಿ ನೀಡಿರುವ ವರದಿಯನ್ನು ಅಂಗೀಕರಿಸಲಾಗಿದೆ. ವೈಜ್ಞಾನಿಕ ಮೌಲ್ಯಮಾಪನದ ನಂತರ ಪರಿಣಾಮಕಾರಿ ಸಾಗಣೆ ಸಾಮರ್ಥ್ಯದ ಆಧಾರದ ಮೇಲೆ ಜಂಗಲ್ ಸಫಾರಿಗೆ ಹಸಿರು ನಿಶಾನೆ ನೀಡಲಾಗಿದೆ. ಸಮಿತಿ ಶಿಫಾರಸಿನ ಪ್ರಕಾರ ನಿಯಂತ್ರಿತ ರೀತಿಯಲ್ಲಿ ಜಂಗಲ್ ಸಫಾರಿ ನಡೆಸಲು ಸೂಚನೆ ನೀಡಲಾಗಿದೆ.

ಕರ್ನಾಟಕ ಪರಿಸರ ಪ್ರವಾಸೋದ್ಯಮದಲ್ಲಿ ಅಪಾರ ಸಾಮರ್ಥ್ಯ ಹೊಂದಿದೆ. ಸದಾ ಸುಸ್ಥಿರ ಪ್ರವಾಸೋದ್ಯಮ ಮಾದರಿ ಪಾಲಿಸಿಕೊಂಡು ಬಂದಿದೆ. ಇದು ಸ್ಥಳೀಯ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳ ಸೃಷ್ಟಿಗೆ ಸಹಾಯ ಮಾಡುತ್ತದೆ. ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸಲು ನೆರವಾಗುತ್ತದೆ. ಪರಿಸರ ವ್ಯವಸ್ಥೆಯ ಸಮಗ್ರತೆಯನ್ನು ರಕ್ಷಿಸುವ ಜೊತೆಗೆ, ಪರಿಸರ ಪ್ರವಾಸೋದ್ಯಮ, ವನ್ಯಜೀವಿ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ ಮತ್ತು ಪ್ರವಾಸಿಗರ ಉತ್ತಮ ಅನುಭವಕ್ಕೆ ಪೂರಕವಾದ ಪರಿಸರ ಪ್ರವಾಸೋದ್ಯಮಕ್ಕೆ ಕರ್ನಾಟಕ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಕಚೇರಿ ನೀಡಿರುವ ಮಾಧ್ಯಮ ಪ್ರಕಟಣೆ ತಿಳಿಸಿದೆ.

## ಬೀದಿಯಲ್ಲಿ ಟೌನ್‌ಶಿಪ್ ಚರ್ಚೆ ಅಸಾಧ್ಯ: ಸಚಿವ ಯತೀಂದ್ರ

**ಮೈಸೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಚರ್ಚೆ ನಡೆಸುವುದಾದರೆ ವಿಧಾನಸೌಧಕ್ಕೆ ಬರಲಿ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.




ನಗರದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಯೋಜನೆ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಎಚ್.ಡಿ. ಕುಮಾರಸ್ವಾಮಿ ಇಬ್ಬರೂ ಪತ್ರ ಬರೆದಿದ್ದಾರೆ. ಕುಮಾರಸ್ವಾಮಿ ಮಾತುಕತೆಗೆ ವಿಧಾನ ಸೌಧಕ್ಕೆ ಬರಬೇಕು. ಸರ್ಕಾರ ನಡೆಯುವ ಜಾಗದಲ್ಲಿ ಚರ್ಚೆ ಆಗಬೇಕು. ಬೀದಿಯಲ್ಲಿ ಕುಳಿತು ಚರ್ಚಿಸಲು ಸಾಧ್ಯವಿಲ್ಲ ಎಂದರು. ಪುಟ 2ಕ್ಕೆ

## ಫಾರ್ಮ್ ಹೌಸ್ ನಲ್ಲಿ ನಾಡಬಾಂಬ್ ಸ್ಫೋಟ

**ರಾಮನಗರ:** ಹಾರೋಹಳ್ಳಿ ತಾಲೂಕಿನ ಸುಣ್ಣಘಟ್ಟ ಗ್ರಾಮದ ಫಾರ್ಮ್ ಹೌಸ್ ಮುಂಭಾಗದಲ್ಲಿ ನಾಡಬಾಂಬ್ ಸ್ಫೋಟಗೊಂಡು ವಕೀಲ ಗಾಯಗೊಂಡಿದ್ದಾರೆ. ಗೇಟ್ ಬಳಿ ದುಷ್ಕರ್ಮಿಗಳು ನಾಡಬಾಂಬ್ ಇಟ್ಟಿದ್ದರು ಎನ್ನಲಾಗಿದೆ. ಗೇಟ್ ಓಪನ್ ಮಾಡುತ್ತಿದ್ದಂತೆ ನಾಡಬಾಂಬ್ ಸ್ಫೋಟಗೊಂಡಿದೆ. ಮಾಲೀಕರಾದ ವಕೀಲ ಎನ್.ಸಿ ಮೋಹನ್ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದಾರೆ.

## ತ್ರಿವಳಿ ಕೊಲೆ: ಹಂತಕನ ಬಂಧನ

**ಬೆಂಗಳೂರು:** ರಾಜ್ಯವನ್ನು ಬೆಚ್ಚಿ ಬೀಳಿಸಿದ್ದ ಕೆ.ಆರ್ ಪುರಂ ತ್ರಿವಳಿ ಕೊಲೆ ಪ್ರಕರಣದಲ್ಲಿ ಪೊಲೀಸರು ಶ್ವೇತಾಳ ಪ್ರಿಯಕರ ಕೆನ್ನೆತ್ ನನ್ನು ಬಂಧಿಸಿದ್ದಾರೆ.



ತನ್ನ ತಂದೆ–ತಾಯಿ ಮತ್ತು ತಂಗಿಯನ್ನು ಕೊಂದು ಪರಾರಿಯಾಗಿದ್ದ ಶ್ವೇತಾಳನ್ನು ಬಂಧಿಸಿದ ಮರುದಿನವೇ ಪೊಲೀಸರು ಪ್ರಿಯಕರ ಕೆನ್ನೆತ್ ನನ್ನು ಕೂಡ ಬಂಧಿಸಿದ್ದಾರೆ.

ಕೊಲೆ ಬಳಿಕ ಇಬ್ಬರೂ ಪುದುಚೇರಿಗೆ ಪರಾರಿಯಾಗಿದ್ದರು. ಅಲ್ಲಿ ಬೇರೆ ಬೇರೆಯಾಗಿ ತಲೆಮರೆಸಿಕೊಂಡಿದ್ದರು. ಇಬ್ಬರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ. ತಲೆಮರಿಸಿಕೊಂಡಿದ್ದ ಕೆನೆತ್ ಬಂಧನಕ್ಕಾಗಿ 3 ವಿಶೇಷ ತಂಡಗಳನ್ನು ರಚನೆ ಮಾಡಲಾಗಿತ್ತು. ಪುದುಚೇರಿ ಹಾಗೂ ತಮಿಳುನಾಡಿನ ವಿವಿಧ ಪ್ರದೇಶಗಳಲ್ಲಿ ಶೋಧ ಕಾರ್ಯ ಮುಂದುವರೆದಿತ್ತು.

## ಎನ್'ಸಿಇಆರ್‌ಟಿ ಪಠ್ಯದಲ್ಲಿ 'ಸರ್'

**ನವದೆಹಲಿ:** ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ ಪ್ರಸಕ್ತ ಶೈಕ್ಷಣಿಕ ವರ್ಷದ ಪಠ್ಯಪುಸ್ತಕದಲ್ಲಿ ಚುನಾವಣಾ ಆಯೋಗದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಅಳವಡಿಸಿದೆ.

9ನೇ ತರಗತಿಯ ಹೊಸ ಸಾಮಾಜಿಕ ವಿಜ್ಞಾನ ಅಂಡರ್‌ಸ್ಟ್ಯಾಂಡಿಂಗ್ ಸೊಸೈಟಿ: ಇಂಡಿಯಾ ಆಂಡ್ ಬಿಯಾಂಡ್ ಹೆಸರಿನ ಈ ಹೊಸ ಪುಸ್ತಕದಲ್ಲಿ, ಭಾರತೀಯ ಪ್ರಜಾಪ್ರಭುತ್ವ ಎದುರಿಸಿದ ತುರ್ತು ಪರಿಸ್ಥಿತಿ ಮತ್ತು ವಿಶೇಷ ತೀವ್ರ ಪರಿಷ್ಕರಣೆ ಪಠ್ಯವನ್ನು ಸೇರಿಸಲಾಗಿದೆ.





ಚುನಾವಣೆಗಳು ಅಧ್ಯಾಯದಲ್ಲಿ, ಚುನಾವಣಾ ಆಯೋಗ ಎಸ್‌ಐಆರ್‌ಪ್ರಕ್ರಿಯೆಯ ಮೂಲಕ ಮರಣ ಹೊಂದಿದವರು, ವಾಸಸ್ಥಳ ಬದಲಾಯಿಸಿದವರು, ನಕಲಿ ಹೆಸರು ಹಾಗೂ ಪತ್ತೆಯಾಗದ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲು ಮುಂದಾಗಿದೆ. ಸಾರ್ವಜನಿಕರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿ, ನಂತರವೇ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದೆ.

## ಅಯೋಧ್ಯೆಯಲ್ಲಿ ಕಳವು ಪ್ರಕರಣ: ಟ್ರಸ್ಟಿಂದ ರಾಯ್, ಮಿಶ್ರಾ ಔಟ್

**ಲಕ್ನೋ:** ಅಯೋಧ್ಯೆ ರಾಮಮಂದಿರದಲ್ಲಿ ದೇಣಿಗೆ, ಬೆಳ್ಳಿ, ಚಿನ್ನಾಭರಣ ಕಳವು ಆರೋಪದ ಬೆನ್ನಲ್ಲೇ ರಾಮಮಂದಿರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟಿ ಅನಿಲ್ ಮಿಶ್ರಾ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದಾರೆ.



ವಿಶೇಷ ತನಿಖಾ ತಂಡ (ಎಸ್‌ಐಟಿ) ಪ್ರಾಥಮಿಕ ವರದಿ ಸಲ್ಲಿಸಿದ ನಂತರ ರಾಜೀನಾಮೆ ನೀಡಲಾಗಿದೆ. ದೇಣಿಗೆ ದುರುಪಯೋಗ ಆರೋಪದಲ್ಲಿ ಎಂಟು ಆರೋಪಿಗಳನ್ನು ಬಂಧಿಸಲಾಗಿದೆ.

ದೇವಾಲಯದ ಟ್ರಸ್ಟ್ನ ನಗದು ಎಣಿಕೆ ಸಿಬ್ಬಂದಿ, ಎಣಿಕೆ ಕಾರ್ಯಾಚರಣೆಯ ಮುಖ್ಯಸ್ಥ, ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಿದ ನಿವೃತ್ತ ಬ್ಯಾಂಕರ್ ಮತ್ತು ರಾಮಮಂದಿರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರ ಚಾಲಕ ರಾಮಶಂಕರ್ ಯಾದವ್ ಬಂಧಿತ ಆರೋಪಿಗಳು.

## ಇಡಿ ದಾಳಿ ಅಚ್ಚರಿ: ಸತೀಶ್ ಜಾರಕಿಹೊಳಿ



**ಬೆಂಗಳೂರು:** ಜಾರಿ ನಿರ್ದೇಶನಾಲಯ ನನ್ನ ಬಾಮೈದನ ಮೇಲೆ ದಾಳಿ ನಡೆಸಿರುವುದು ನನಗೆ ಅಚ್ಚರಿ ತಂದಿದೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಅಬಕಾರಿ ಅಧಿಕಾರಿ ವೈ. ಮಂಜುನಾಥ್ ಮೇಲಿನ ಇಡಿ ದಾಳಿಗೆ ಪ್ರತಿಕ್ರಿಯಿಸಿದ ಅವರು, ಲೋಕಾಯುಕ್ತದಲ್ಲಿ ಅವರ ಮೇಲಿರುವ ಕೇಸ್ ಬಗ್ಗೆ ನನಗೆ ಗೊತ್ತಿಲ್ಲ. ಭ್ರಷ್ಟಾಚಾರದ ತನಿಖೆ ನಡೆಸಲು ರಾಜ್ಯ ಸರ್ಕಾರ ಹಾಗೂ ಎಸಿಬಿ/ ಲೋಕಾಯುಕ್ತಗಳಿವೆ. ಕೇಂದ್ರ ಸರ್ಕಾರದ ಕೈಯಲ್ಲಿದ್ದರೆ ಸಿಬಿಐ ತನಿಖೆ ಮಾಡಬೇಕಿತ್ತು. ಆದರೆ ಇಡಿ ದಾಳಿ ಮಾಡಿರುವುದರ ಹಿಂದೆ ರಾಜಕೀಯ ಪ್ರೇರಿತ ಸಂಚು ಇದೆಯೇ ಎಂಬುದನ್ನು ಕಾದು ನೋಡಬೇಕಿದೆ ಎಂದು ಹೇಳಿದರು.

## ರಾಜ್ಯದ 97 ಕ್ಷೇತ್ರಗಳಲ್ಲಿ 'ಸರ್'ಗುರಿ'

### ಬಿಜೆಪಿ ವಿರುದ್ಧ ಸಚಿವ ಎಂ.ಬಿ.ಪಾಟೀಲ್ ಆರೋಪ

**ವಿಜಯಪುರ:** ಕಾಂಗ್ರೆಸ್ ಪ್ರಾಬಲ್ಯ ಇರುವ ಬಬಲೇಶ್ವರ, ವಿಜಯಪುರ ನಗರ ಸೇರಿದಂತೆ ರಾಜ್ಯದ 97 ವಿಧಾನಸಭಾ ಕ್ಷೇತ್ರಗಳನ್ನು ಬಿಜೆಪಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಗುರಿಯಾಗಿಸಿಕೊಂಡಿದೆ ಎಂದು ಸಚಿವ ಎಂ.ಬಿ.ಪಾಟೀಲ್ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಕಾಂಗ್ರೆಸ್ ಏರ್ಪಡಿಸಿದ್ದ ಎಸ್‌ಐಆರ್ ಕುರಿತು ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಬಿಜೆಪಿ ಅನೇಕ ರಾಜ್ಯಗಳಲ್ಲಿ ಎಸ್‌ಐಆರ್ ಮೂಲಕ ಕಾಂಗ್ರೆಸ್ ಮತದಾರರನ್ನು ತೆಗೆದುಹಾಕುವ ಕೆಲಸ ಮಾಡಿದೆ. ನಮ್ಮ ರಾಜ್ಯದಲ್ಲೂ ಎಸ್‌ಐಆರ್ ಪ್ರಕ್ರಿಯೆ ವೇಳೆ ಮತದಾರ ಪಟ್ಟಿಯಿಂದ ಹೆಸರು ತೆಗೆದುಹಾಕುವ ಷಡ್ಯಂತ್ರ ನಡೆಸಿದೆ ಎಂದು ದೂರಿದರು.

ಎಸ್‌ಐಆರ್ ಪ್ರಕ್ರಿಯೆ ವೇಳೆ ಕೈಬಿಟ್ಟು ಹೋಗುವ ಮತದಾರರಿಗೆ ಮುಂದಿನ ದಿನಗಳಲ್ಲಿ ಗ್ಯಾರಂಟಿ ಯೋಜನೆಗಳು, ಪಡಿತರ ಆಹಾರ, ಸಾಮಾಜಿಕ ಪಿಂಚಣಿ ಯೋಜನೆಗಳು ಸಹ ಕೈತಪ್ಪಿ ಹೋಗಲಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಎಸ್‌ಐಆರ್ ಅನ್ನು ಕೆಪಿಸಿಸಿ ಗಂಭೀರವಾಗಿ ಪರಿಗಣಿಸಿದೆ. ಇದರಲ್ಲಿ ಹಾಲಿ, ಮಾಜಿ ಶಾಸಕರ ಹಿತಾಸಕ್ತಿಯೂ



ಅಡಗಿದೆ. ಈ ಬಗ್ಗೆ ಗಮನ ಹರಿಸಬೇಕು. ನೇರವಾಗಿ ಬಿ ಫಾರಂ ತೆಗೆದುಕೊಂಡು ಬಂದು ಚುನಾವಣೆ ನಿಲ್ಲಲು ಆಗಲ್ಲ, ಎಸ್‌ಐಆರ್ ವೇಳೆ ನಮ್ಮ ಮತದಾರರು ಮತದಾನದ ಹಕ್ಕಿನಿಂದ ವಂಚಿತವಾಗದಂತೆ ಜಾಗೃತಿ ವಹಿಸಬೇಕು ಎಂದರು.

## ಟೌನ್‌ಶಿಪ್: ಪರಿಹಾರ ಹೆಚ್ಚಳಕ್ಕೆ ಸಿದ್ಧ

### ರೈತರ ಒಪ್ಪಿಗೆ ಪಡೆದು ಯೋಜನೆ ಜಾರಿ: ಸಚಿವ ಪರಮೇಶ್ವರ್

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆಗೆ ರೈತರ ತೀವ್ರ ವಿರೋಧದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪರಿಹಾರ ಹೆಚ್ಚಳ ಕುರಿತು ಮರುಚಿಂತನೆ ನಡೆಸುವ ಮುನ್ಸೂಚನೆ ನೀಡಿದೆ.

ರೈತರ ಒಪ್ಪಿಗೆ ಇಲ್ಲದೆ ಯಾವುದೇ ಭೂಸ್ವಾಧೀನ ಅಥವಾ ಟೌನ್‌ಶಿಪ್ ನಿರ್ಮಾಣ ಯೋಜನೆಯನ್ನು ಜಾರಿಗೊಳಿಸುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಅಗತ್ಯವಿದ್ದರೆ ಭೂಸ್ವಾಧೀನ ಪರಿಹಾರ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಸಿದ್ಧವಿದೆ ಎಂದು ತಿಳಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರೈತರನ್ನು ಒಕ್ಕಲೆಬ್ಬಿಸಿ ಟೌನ್‌ಶಿಪ್ ನಿರ್ಮಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಯಾವುದೇ ಗೊಂದಲ ಸೃಷ್ಟಿಯಾಗದಂತೆ ರೈತರೊಂದಿಗೆ ಚರ್ಚಿಸಿ, ಒಪ್ಪಿಗೆ ಪಡೆದ ನಂತರವೇ ಯೋಜನೆ ಮುಂದುವರಿಸುತ್ತೇವೆ. ಯಾವುದೇ ಗೊಂದಲ ಅಥವಾ ಸಂಘರ್ಷ ಉಂಟಾಗದ ರೀತಿಯಲ್ಲಿ ಟೌನ್‌ಶಿಪ್ ಅಭಿವೃದ್ಧಿಪಡಿಸುವುದು ಸರ್ಕಾರದ ಉದ್ದೇಶ ಎಂದು ತಿಳಿಸಿದರು.

ಭೂಸ್ವಾಧೀನಕ್ಕೆ ನೀಡುತ್ತಿರುವ ಪರಿಹಾರದ ಬಗ್ಗೆ ರೈತರಿಗೆ ಅಸಮಾಧಾನವಿದ್ದರೆ, ಅದನ್ನು ಸರ್ಕಾರ ಮತ್ತೊಮ್ಮೆ ಪರಿಶೀಲಿಸಲು ಸಿದ್ಧವಿದೆ. ಪರಿಹಾರ ಮೊತ್ತ ಪುಟ 2ಕ್ಕೆ





### ಬೆಂಗಳೂರು ಸುತ್ತಮುತ್ತ ಟೌನ್‌ಶಿಪ್ ನಿರ್ಮಾಣ

ಬೆಂಗಳೂರು ಸಮೀಪದ ತುಮಕೂರು, ಕೋಲಾರ ಸೇರಿದಂತೆ ಇತರೆ ನಗರಗಳನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಿದರೆ ರಾಜಧಾನಿಯ ಮೇಲಿನ ಪುಟ 2ಕ್ಕೆ


## ಬಹುತೇಕ ಅಬಕಾರಿ ಅಧಿಕಾರಿಗಳ ಬಳಿ 'ಬೇನಾಮಿ ಬಾರ್ ಲೈಸೆನ್ಸ್'

**ಬೆಂಗಳೂರು:** ರಾಜ್ಯದ ಅಬಕಾರಿ ಇಲಾಖೆಯ ಬಹುತೇಕ ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಬಾರ್ ಹೊಂದಿದ್ದಾರೆ. ತಮ್ಮ ಸಮೀಪದ ಬಂಧುಗಳು ಮತ್ತು ಕೆಲಸಗಾರರ ಹೆಸರಿನಲ್ಲಿ ಅಕ್ರಮವಾಗಿ ನಡೆಸುತ್ತಿರುವುದು ಇಡಿ ದಾಳಿ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

ಇಡಿ ದಾಳಿ ವೇಳೆ ನೂರಾರು 'ಬೇನಾಮಿ ಬಾರ್ ಲೈಸೆನ್ಸ್'ಗಳು ಪತ್ತೆ ಆಗಿವೆ. ಕರ್ನಾಟಕದಲ್ಲಿ ಅಬಕಾರಿ ಇಲಾಖೆಯ ಬಹುತೇಕ ಅಧಿಕಾರಿಗಳು ತಮ್ಮ ಕುಟುಂಬ ಸದಸ್ಯರು/ ಕುಟುಂಬ ಸದಸ್ಯರಿಂದ ನಿಯಂತ್ರಿಸಲ್ಪಡುವ ವ್ಯಕ್ತಿಗಳ ಹೆಸರಿನಲ್ಲಿ ಮದ್ಯದ ಪರವಾನಗಿಗಳನ್ನು ಪಡೆದಿದ್ದಾರೆ ಮತ್ತು ಅಕ್ರಮವಾಗಿ ಮದ್ಯದ ವ್ಯವಹಾರವನ್ನು ನಡೆಸುತ್ತಿದ್ದಾರೆ ಎಂದು ಇಡಿ ಅಧಿಕಾರಿಗಳು ತಿಳಿಸಿದ್ದಾರೆ.

ಇಡಿ ನಡೆಸಿದ ಪರಿಶೀಲನೆಯ ವೇಳೆ ಮಂಜುನಾಥ್ ಅವರ ಬೆಂಗಳೂರು, ಮೈಸೂರು ಹಾಗೂ ಬೆಳಗಾವಿ ನಿವಾಸಗಳಲ್ಲಿ ನೂರಾರು ಬೇನಾಮಿ ಬಾರ್ ಲೈಸೆನ್ಸ್‌ಗಳು ಹಾಗೂ ಅವುಗಳ ಅಗ್ರಿಮೆಂಟ್ ಬಾಂಡ್‌ಗಳು ಪತ್ತೆಯಾಗಿವೆ.

ಮಂಜುನಾಥ್ ಅವರು ಬೆಳಗಾವಿ, ದಾವಣಗೆರೆ,





ಬಳ್ಳಾರಿ, ಮೈಸೂರು ಮತ್ತು ಬೆಂಗಳೂರಿನಲ್ಲಿ ಬೇನಾಮಿ ಹೆಸರಿನಲ್ಲಿ ದೊಡ್ಡ ಪ್ರಮಾಣದ ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಹೊಂದಿದ್ದಾರೆ. ಈ ಬೇನಾಮಿ ಬಾರ್‌ಗಳಿಂದ ಬರುತ್ತಿದ್ದ ಕೋಟ್ಯಂತರ ರೂಪಾಯಿ ಕಪ್ಪು ಹಣವನ್ನು ಇವರು ವಿದೇಶಗಳಿಗೆ ಅಕ್ರಮವಾಗಿ ವರ್ಗಾವಣೆ (ಹವಾಲಾ ದಂಧೆ) ಮಾಡಿ ಹೂಡಿಕೆ ಮಾಡುತ್ತಿದ್ದರು ಎಂಬ ಶಂಕೆ ಹಿನ್ನೆಲೆಯಲ್ಲಿ ಇಡಿ ದಾಳಿ ನಡೆಸಿತ್ತು.

ವೈ.ಮಂಜುನಾಥ್ ಅವರ ಅಕ್ರಮ ಜಾಲದಲ್ಲಿ ಶಾಮೀಲಾಗಿರುವ ಶಂಕೆಯ ಹಿನ್ನೆಲೆಯಲ್ಲಿ ಅವರ ಆಪ್ತ ವಲಯದ ಇತರ ಅಧಿಕಾರಿಗಳ ಮೇಲೂ ಇಡಿ ಅಧಿಕಾರಿಗಳ ಮೇಲೆಯೂ ದಾಳಿ ನಡೆದಿದೆ. ಪುಟ 2ಕ್ಕೆ

## ಗೃಹಲಕ್ಷ್ಮಿ ಅಕ್ರಮದಲ್ಲಿ 'ಕಾಣದ ಕೈ': ಬಿಜೆಪಿ

**ಬೆಂಗಳೂರು:** ಗೃಹಲಕ್ಷ್ಮಿ ಯೋಜನೆ ಕುರಿತು ಮಹಾಲೆಕ್ಕಪರಿಶೋಧಕರ ವರದಿ (ಸಿಎಜಿ) ವರದಿ ಉಲ್ಲೇಖಿಸಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.

ಇದು ಗೃಹಲಕ್ಷ್ಮಿಯಲ್ಲ, ಕಾಂಗ್ರೆಸ್‌ನ ಹಗರಣಲಕ್ಷ್ಮಿ. ಯೋಜನೆಯ ಅನುಷ್ಠಾನದಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಬಿಜೆಪಿ ಆರೋಪಿಸಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಒಂದೇ ಬ್ಯಾಂಕ್ ಖಾತೆಯ ಮೂಲಕ 19,020 ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಜಮೆಯಾಗಿದೆ. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗೆ ಕನಿಷ್ಠ ಒಂದು ಬ್ಯಾಂಕ್ ಖಾತೆಯಾದರೂ ಪುಟ 2ಕ್ಕೆ







## ಡಿಕೆಶಿ ಜೊತೆ ಹೊಂದಾಣಿಕೆ ಇಲ್ಲ


### ನನ್ನ ವಿರುದ್ಧ ಅಪಪ್ರಚಾರ ಸರಿಯಲ್ಲ: ಬಿ.ವೈ.ವಿಜಯೇಂದ್ರ

**ಧರ್ಮಸ್ಥಳ:** ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರೊಂದಿಗೆ ಯಾವುದೇ ವ್ಯವಹಾರಿಕ ಸಂಬಂಧ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶುಕ್ರವಾರ ಸ್ಪಷ್ಟಪಡಿಸಿದರು.

ದೆಹಲಿ ಪ್ರವಾಸ ಮುಗಿಸಿಕೊಂಡು ಶುಕ್ರವಾರ ನೇರವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿದ ಬಿ.ವೈ. ವಿಜಯೇಂದ್ರ ಅವರು, ಶ್ರೀ ಮಂಜುನಾಥ ಸ್ವಾಮಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮ ವಿರುದ್ಧ ಕೇಳಿಬರುತ್ತಿರುವ ಆರೋಪಗಳಿಗೆ ತಿರುಗೇಟು ನೀಡಿದರು. ಡಿಕೆಶಿ ಜೊತೆ ಆತ್ಮೀಯತೆಯೂ ಇಲ್ಲ. ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ರಾಜಕೀಯ ಸೌಜನ್ಯದಿಂದ ಗೌರವ ನೀಡಿದ್ದೇನೆ. ಅದನ್ನು ಹೊರತುಪಡಿಸಿ ಯಾವುದೇ ವೈಯಕ್ತಿಕ ಅಥವಾ ರಾಜಕೀಯ ಹೊಂದಾಣಿಕೆ ಇಲ್ಲ ಎಂದು ತಿಳಿಸಿದರು.

ರಾಜ್ಯ ಬಿಜೆಪಿ ಅಧ್ಯಕ್ಷರು ಮತ್ತು ಡಿ.ಕೆ.ಶಿವಕುಮಾರ್ ಒಂದಾಗಿದ್ದಾರೆ ಎಂದು ನನ್ನ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ. ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿರು



ವರಿಗೆ ಭಗವಂತ ಒಳ್ಳೆಯ ಬುದ್ಧಿ ನೀಡಲಿ ಎಂದು ಮಂಜುನಾಥ ಸ್ವಾಮಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದರು.

ನಮ್ಮ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆದ್ದಿದ್ದರೂ ಅಡ್ಡಮತದಾನ ನಡೆದಿರುವುದು ನನಗೆ ಮತ್ತು ಲಕ್ಷಾಂತರ ಬಿಜೆಪಿ ಕಾರ್ಯಕರ್ತರಿಗೂ ನೋವು ತಂದಿದೆ. ಶಾಸಕಾಂಗ ಪಕ್ಷದ ಸಭೆಯನ್ನು ಧರ್ಮಸ್ಥಳದಲ್ಲಿ ನಡೆಸಿ ಶಾಸಕರಿಂದ ಆಣೆ–ಪ್ರಮಾಣ ಮಾಡಿಸಬೇಕು ಎಂದು ಭಾವನಾತ್ಮಕವಾಗಿ ಹೇಳಿದ್ದೆ. ಆದರೆ, ಪಕ್ಷದ ಹಿರಿಯರು ನೀಡಿದ ಸಲಹೆಗೆ ಗೌರವ ನೀಡಿ ಆ ನಿರ್ಧಾರವನ್ನು ಪುಟ 2ಕ್ಕೆ

## ನರೇಗಾ ಯೋಜನೆಯೇ ಮುಂದುವರಿಯಲಿ: ಎಂ.ಪುಟ್ಟಮಾದು



**ಭಾರತೀನಗರ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ)ಯನ್ನು ಕೇಂದ್ರ ಸರ್ಕಾರ ಮುಂದುವರಿಸಲು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟಮಾದು ಒತ್ತಾಯಿಸಿದರು.

ಭಾರತೀನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸಿ, ಅದರ ಬದಲಿಗೆ ಜಿ.ರಾಮ್ ಜಿ ಹೆಸರಿನ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿರುವುದು ಗ್ರಾಮೀಣ ಕಾರ್ಮಿಕರ ಪಾಲಿಗೆ ಮರಣಶಾಸನವಾಗಲಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ವಿಕಸಿತ ಭಾರತ-2047' ಹೆಸರಿನಲ್ಲಿ ಬಡತನ ನಿರ್ಮೂಲನೆ, ನಿರುದ್ಯೋಗ ನಿವಾರಣೆ ಹಾಗೂ ಭಾರತವನ್ನು ಶ್ರೀಮಂತ ರಾಷ್ಟ್ರವನ್ನಾಗಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿರುವುದು ಕೇವಲ ಹಗಲು ಕನಸಾಗಿದೆ ಎಂದು ಟೀಕಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ್ ಮಾತನಾಡಿ, 2006ರಲ್ಲಿ ಎಡಪಕ್ಷಗಳ ಒತ್ತಾಯದ ಫಲವಾಗಿ ಉದ್ಯೋಗ ಖಾತರಿ ಯೋಜನೆ ಜಾರಿಯಾಯಿತು. 2008ರಿಂದ ಮಂಡ್ಯ ಜಿಲ್ಲೆಯ ಕಾರ್ಮಿಕ ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದು, ಇಂದಿಗೂ ಕೆಲಸ ಮಾಡುತ್ತಿದ್ದಾರೆ. ಈಗ ಪ್ರಧಾನಿ ನರೇಂದ್ರ ಮೋದಿ ಅವರು ನರೇಗಾ ಯೋಜನೆಯನ್ನು ತೆಗೆದುಹಾಕಿ ಜಿ.ರಾಮ್ ಜಿ ಯೋಜನೆಯನ್ನು ಜಾರಿಗೊಳಿಸುವ ಮೂಲಕ ಬಡವರ ಹೊಟ್ಟೆಯ ಮೇಲೆ ಬರೆ ಎಳೆದಿದ್ದಾರೆ ಎಂದು ಕಿಡಿಕಾರಿದರು.

ಸಂಘದ ಜಿಲ್ಲಾಧ್ಯಕ್ಷ ಶಿವಮಲ್ಲಯ್ಯ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಡಿ.ಕೆ.ಲತಾ, ಮುಖಂಡರಾದ ಬಿ.ಪಿ.ಅರುಣ್ ಕುಮಾರ್, ಶೋಭಾ, ಡಿ.ಎಚ್.ಆನಂದ, ಸುರೇಂದ್ರ, ತಳಗವಾಡಿ ಆನಂದ ಮುಂತಾದವರು ಹಾಜರಿದ್ದರು.

### ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಎಸ್‌ಎಸ್‌ಪಿ ಪೋರ್ಟಲ್ ಮೂಲಕ

## ಅರ್ಜಿ ಆಹ್ವಾನ

ಚಾಮರಾಜನಗರ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಚಾಮರಾಜನಗರ ತಾಲೂಕಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 2026-27ನೇ ಸಾಲಿಗೆ ನೀಡಲಾಗುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ಎಸ್‌ಎಸ್‌ಪಿ (ಸ್ಟೇಟ್ ಸ್ಕಾಲರ್ಶಿಪ್) ಪೋರ್ಟಲ್ ಮೂಲಕ ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಮುನ್ನ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಎನ್‌ಪಿಸಿಐ ಆಧಾರ್ ಸೀಡಿಂಗ್ ಮಾಡಿಸಿರಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ್-1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್‌ಐಆರ್‌ನ ಜಾಗ್ರತೆ ವಹಿಸಿ

## ಮತಪಟ್ಟಿ ಪರಿಷ್ಕರಣೆ: ಬಿಎಲ್‌ಎಗಳಿಗೆ ಶಾಸಕರ ಕರೆ

ಎಚ್.ಡಿ.ಕೋಟೆ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಿಂದಾಗಿ ಹಲವು ಅರ್ಹ ಮತದಾರರ ಹೆಸರುಗಳು ಕೈಬಿಟ್ಟು ಹೋಗುವ ಸಾಧ್ಯತೆಯಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಏಜೆಂಟ್ಗಳು (ಬಿಎಲ್‌ಎ) ಅತ್ಯಂತ ಜವಾಬ್ದಾರಿಯುತವಾಗಿ ಹಾಗೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು. ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಪಕ್ಷದ ಬೂತ್ ಮಟ್ಟದ ಏಜೆಂಟ್ಗಳಿಗಾಗಿ 'ಜಾಗೃತ ಕರ್ನಾಟಕ' ಸಂಘಟನೆಯು ಆಯೋಜಿಸಿದ್ದ ಎಸ್‌ಐಆರ್ ಕುರಿತ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.



### ನಿರಂತರ ಜಾಗೃತಿ ಮತ್ತು ಪ್ರಕ್ರಿಯೆಯ ಗಡುವು

ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ನಾಗರಿಕರಲ್ಲಿ ಅರಿವು ಮೂಡಿಸಲು ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಾಂಗ್ರೆಸ್ ಪಕ್ಷವು ಕಳೆದ ಆರು ತಿಂಗಳುಗಳಿಂದ ವಿವಿಧ ಕಾರ್ಯಕ್ರಮಗಳ ಮೂಲಕ ಈ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ತಾಲೂಕಿನ ಒಟ್ಟು 282 ಬೂತ್ಗಳ ಮತದಾರರ ಮಾಹಿತಿಯನ್ನು ಈಗಾಗಲೇ ಪಕ್ಷದ ಏಜೆಂಟ್ಗಳಿಗೆ ಒದಗಿಸಲಾಗಿದೆ. ಜೂನ್ 30ರಿಂದ ಜುಲೈ 29ರವರೆಗೆ ಎನ್ಯುಮರೇಷನ್ ಫಾರಂ ಭರ್ತಿ ಮಾಡುವ ಪ್ರಕ್ರಿಯೆ ನಡೆಯಲಿದ್ದು, ನಿಯೋಜಿತ ಸರ್ಕಾರಿ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕ ಸಾಧಿಸಿ ಸೂಕ್ತ ದಾಖಲೆಗಳೊಂದಿಗೆ ಹೆಸರು ನೋಂದಾಯಿಸಬೇಕಿದೆ. ಆಗಸ್ಟ್ 5ರಂದು ಸರ್ಕಾರ ಬಿಡುಗಡೆ ಮಾಡುವ ನೂತನ ಕರಡು ಪಟ್ಟಿಯಲ್ಲಿ ಹೆಸರು ಇರುವುದನ್ನು ಪ್ರತಿಯೊಬ್ಬರೂ ಖಚಿತಪಡಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಶಾಸಕರು ವಿವರಿಸಿದರು.

ಕಾರ್ಯಕ್ರಮದಲ್ಲಿ ಪಕ್ಷದ ಪ್ರಮುಖ ಮುಖಂಡರಾದ ಮಾದಪ್ಪ, ಚಲುವರಾಜ್, ಸಂತೋಷ್, ಮಾಜಿ ಜಿ.ಪಂ. ಉಪಾಧ್ಯಕ್ಷೆ ಭಾಗ್ಯಲಕ್ಷ್ಮೀ ನಿಂಗರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಜಾಗತಿಕ ಪರಿಣಾಮ ಮತ್ತು ದಾಖಲೆಗಳ ವಿತರಣೆ

ಜಾಗೃತ ಕರ್ನಾಟಕ ಸಂಘಟನೆಯ ಜಿ.ಕೆ. ಮೋಹನ್ ಅವರು ಮಾಹಿತಿ ಪ್ರಸ್ತುತಿ (ಪಿಪಿಟಿ) ಮೂಲಕ ಮಾತನಾಡಿ, ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಈ ಹೊಸ ನಿಯಮಗಳಿಂದಾಗಿ ಈಗಾಗಲೇ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಸಾವಿರಾರು ಮತದಾರರು ಹಕ್ಕು ವಂಚಿತರಾಗಿದ್ದಾರೆ. ಇದು ಕಾಂಗ್ರೆಸ್ ಪಕ್ಷಕ್ಕೂ ರಾಜಕೀಯವಾಗಿ ಹೊಡೆತ ನೀಡಲಿದ್ದು, ಲಭ್ಯವಿರುವ ಅಲ್ಪ ಅವಧಿಯಲ್ಲಿ ಬಿಎಲ್‌ಎಗಳು ತೀವ್ರವಾಗಿ ಶ್ರಮಿಸಬೇಕಿದೆ ಎಂದರು. ಇದೇ ಸಂದರ್ಭದಲ್ಲಿ ಕೋಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಕಾರ್ಯದರ್ಶಿ ಚಾಮರಾಜ್ ಮತ್ತು ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜು ಅವರು ಬಿಎಲ್‌ಎಗಳಿಗೆ ಬೂತ್ವಾರು 2002 ಹಾಗೂ 2025ರ ಮತದಾರರ ಪಟ್ಟಿ, ಫಾರಂಗಳು ಮತ್ತು ಎಸ್‌ಐಆರ್ ಮಾಹಿತಿ ಪುಸ್ತಕಗಳನ್ನು ವಿತರಿಸಿದರು.

### ಸಹಾಯವಾಣಿ ಸ್ಥಾಪನೆಗೆ ತಜ್ಞರ ಸಲಹೆ

ಸಂವಿಧಾನ ಸಂರಕ್ಷಣಾ ಪಡೆಯ ವಲಯ ಸಂಯೋಜಕ ಹಾಗೂ ಪತ್ರಕರ್ತ ಉಮೇಶ್ ಬಿ. ನೂರಲಕುಪ್ಪೆ ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆಯು ಸಂವಿಧಾನದ ಆಶಯಗಳಿಗೆ ಧಕ್ಕೆ ತರುವಂತದ್ದಾಗಿದ್ದರೂ, ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಹಸಿರು ನಿಶಾನೆ ನೀಡಿರುವುದರಿಂದ ಇದನ್ನು ತಡೆಯಲು ಸಾಧ್ಯವಿಲ್ಲ. ಈ ಪ್ರಕ್ರಿಯೆಯಿಂದ ಬಡ ಮತ್ತು ಗ್ರಾಮೀಣ ಜನರನ್ನು ರಕ್ಷಿಸಲು ವಾಸಸ್ಥಳ ಹಾಗೂ ಜಾತಿ ಪ್ರಮಾಣ ಪತ್ರಗಳು ಸುಲಭವಾಗಿ ಸಿಗುವಂತೆ ಮಾಡಬೇಕು. ಶಾಸಕರ ಮಾರ್ಗದರ್ಶನದಲ್ಲಿ ಸರಗೂರು ಮತ್ತು ಹೆಚ್.ಡಿ.ಕೋಟೆಯಲ್ಲಿ ತಕ್ಷಣವೇ ಸಹಾಯವಾಣಿ ಕೇಂದ್ರಗಳನ್ನು ತೆರೆಯದಿದ್ದರೆ ಕ್ಷೇತ್ರದಲ್ಲಿ ಸುಮಾರು 25 ಸಾವಿರ ಮತದಾರರು ತಮ್ಮ ಮತದಾನದ ಹಕ್ಕಿನಿಂದ ವಂಚಿತರಾಗುವ ಭೀತಿ ಇದೆ ಎಂದು ವಿಷಾದ ವ್ಯಕ್ತಪಡಿಸಿದರು.

ಮೊದಲ ಪುಟದಿಂದ

### ಗ್ಯಾಸ್ ಸಿಲಿಂಡರ್ ನಿರ್ಬಂಧ ತೆರವು

ಸಿಲಿಂಡರ್‌ಗಳ ಪೂರೈಕೆಯಲ್ಲಿ ತೀವ್ರ ಕೊರತೆ ಉಂಟಾಗಿತ್ತು. ರಾಜ್ಯದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಆಹಾರದ ಬೆಲೆ ಏರಿಕೆ ಮಾಡಲಾಗಿತ್ತು. ಇನ್ನು ಮುಂದೆ ಎಲ್ಲವೂ ಸಹಜ ಸ್ಥಿತಿಗೆ ಮರಳುವ ನಿರೀಕ್ಷೆಗಳಿವೆ. ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನು ದಿನಕ್ಕೆ 40 ಟಿಎಂಟಿಗಿಂತ ಹೆಚ್ಚು ಮಟ್ಟದಲ್ಲಿ ಕಾಯ್ದುಕೊಳ್ಳುವ ಕ್ರಮ ಮುಂದುವರಿಯಲಿದೆ ಎಂದು ಮೂಲಗಳು ತಿಳಿಸಿವೆ.

### 'ಬೇನಾಮಿ ಲೈಸೆನ್ಸ್'

ರಾಜ್ಯ ಅಬಕಾರಿ ಇಲಾಖೆಯ ಅಧಿಕಾರಿಗಳು, ಅವರ ಸಹಚರರು ಮತ್ತು ಖಾಸಗಿ ವ್ಯಕ್ತಿಗಳು ಲಂಚ ಸಂಗ್ರಹಕ್ಕಾಗಿ ಸಂಘಟಿತ ಸಿಂಡಿಕೇಟ್ ಮಾಡಿಕೊಂಡು ವ್ಯವಸ್ಥಿತ ಜಾಲದಂತೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಇಡಿ ಅಧಿಕೃತ ಪ್ರಕಟಣೆ ತಿಳಿಸಿದೆ.

### ಪರಿಹಾರ ಹೆಚ್ಚಳ

ಸಾಕಾಗುತ್ತಿಲ್ಲ ಎಂದು ರೈತರು ಅಭಿಪ್ರಾಯಪಟ್ಟರೆ ಮರುಪರಿಶೀಲನೆ ನಡೆಸುತ್ತೇವೆ. ಅಗತ್ಯವಿದ್ದರೆ ಹೆಚ್ಚಿನ ಪರಿಹಾರ ನೀಡುವ ಬಗ್ಗೆಯೂ ಸರ್ಕಾರ ಸಕಾರಾತ್ಮಕವಾಗಿ ನಿರ್ಧಾರ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

### ಟೌನ್‌ಶಿಪ್ ನಿರ್ಮಾಣ

ಜನಸಂಖ್ಯೆ ಮತ್ತು ಸಂಚಾರದ ಒತ್ತಡವನ್ನು ಕಡಿಮೆ ಮಾಡಬಹುದು. ಈ ಉದ್ದೇಶದಿಂದಲೇ ಟೌನ್‌ಶಿಪ್ ಯೋಜನೆಗೆ ಸರ್ಕಾರ ಮುಂದಾಗಿದೆ ಎಂದು ಸಚಿವ ಜಿ.ಪರಮೇಶ್ವರ್ ತಿಳಿಸಿದರು. ಟೌನ್‌ಶಿಪ್ ಯೋಜನೆಯಡಿ ಎಐ (ಕೃತಕ ಬುದ್ಧಿಮತ್ತೆ) ಹಬ್ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಮತ್ತು ಜನಸಂಖ್ಯೆ ಒತ್ತಡ ಹೆಚ್ಚುತ್ತಿದೆ. ಈ ಒತ್ತಡವನ್ನು ಕಡಿಮೆ ಮಾಡಲು ಬೆಂಗಳೂರಿನ ಸುತ್ತಮುತ್ತ ಯೋಜಿತ ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದರು.

### ಫಾಸ್ಟ್ ಫುಡ್, ಸಿಸಿಟಿವಿ ಉಚಿತ ತರಬೇತಿ

## ಅರ್ಜಿ ಆಹ್ವಾನ

ಚಾಮರಾಜನಗರ, ಎಸ್.ಬಿ.ಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಗ್ರಾಮೀಣ ಭಾಗದ ನಿರುದ್ಯೋಗ ಯುವಕ, ಯುವತಿಯರಿಗೆ ಊಟ-ವಸತಿಗಳೊಂದಿಗೆ ಉಚಿತವಾಗಿ ಫಾಸ್ಟ್ ಫುಡ್ ಮತ್ತು ಸಿಸಿ ಟಿವಿ ತರಬೇತಿ ನೀಡಲಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜುಲೈ 1 ರಿಂದ 13 ದಿನಗಳ ಕಾಲ ತರಬೇತಿ ನೀಡಲಾಗುವುದು. ತರಬೇತಿಗೆ ಬರುವಾಗ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನಕಲು ಪ್ರತಿ ಮತ್ತು 4 ಭಾವಚಿತ್ರಗಳನ್ನು ತರಬೇಕು. ಅಭ್ಯರ್ಥಿಗಳು 18 ರಿಂದ 45 ವರ್ಷದೊಳಗಿರಬೇಕು. ತರಬೇತಿಯನ್ನು ಮಾದಾಪುರ ಸಂತೇಮರಳ್ಳಿ ರಸ್ತೆಯ ಪೆಟ್ರೋಲ್ ಬಂಕ್ ಎದುರಿನ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟಲ್ ಕಟ್ಟಡದ ಎಸ್.ಬಿ.ಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ 9606098878, 8722483393, 7676291416 ಸಂಪರ್ಕಿಸಬಹುದು ಎಂದು ತರಬೇತಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲ ಪುಟದಿಂದ

### ಹೊಂದಾಣಿಕೆ ಇಲ್ಲ

ಕೈಬಿಟ್ಟಿದ್ದೇನೆ ಎಂದು ಹೇಳಿದರು. ಧರ್ಮಸ್ಥಳ ಭೇಟಿ ಸಂಪೂರ್ಣವಾಗಿ ಧಾರ್ಮಿಕ ನಂಬಿಕೆ ಮತ್ತು ವೈಯಕ್ತಿಕ ಪ್ರಾರ್ಥನೆಗಾಗಿ. ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸುವತ್ತ ಗಮನಹರಿಸುವುದಾಗಿ ತಿಳಿಸಿದರು. ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನ ವಿವಾದದ ಬೆನ್ನಲ್ಲೇ ಅವರ ಈ ಭೇಟಿ ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

### ಗೃಹಲಕ್ಷ್ಮಿ ಅಕ್ರಮದಲ್ಲಿ 'ಕಾಣದ ಕೈ': ಬಿಜೆಪಿ

ಇರಬೇಕು. ಆದರೆ, ಬ್ಯಾಂಕ್ ಖಾತೆಯೇ ಇಲ್ಲದ 23,262 ಮಂದಿಗೆ ಗೃಹಲಕ್ಷ್ಮಿ ಹಣ ಜಮೆಯಾಗಿದೆ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅಸಾಧ್ಯಗಳೆಲ್ಲವೂ ಸಾಧ್ಯವಾಗಿರುವ ಈ ಹಗರಣದ ಹಿಂದೆ ದೊಡ್ಡವರ 'ಕೈ' ಇರುವುದು ಖಚಿತ-ನಿಶ್ಚಿತ ಅಲ್ಲವೇ? ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

### ಬೀದಿಯಲ್ಲಿ ಚರ್ಚೆ ಅಸಾಧ್ಯ: ಸಚಿವ ಯತೀಂದ್ರ

ಮುಖ್ಯಮಂತ್ರಿಯವರು ಸರಿಯಾದ ಸ್ಥಳಕ್ಕೆ ಅವರನ್ನು ಕರೆದಿದ್ದಾರೆ. ನಿಜವಾಗಿಯೂ ಕುಮಾರಸ್ವಾಮಿ ಅವರ ವಾದದಲ್ಲಿ ಶಕ್ತಿ ಇದ್ದರೆ ಅಲ್ಲಿಗೇ ಬರಲಿ ಎಂದು ಸವಾಲು ಹಾಕಿದರು. ಬಿಡದಿಯಲ್ಲಿ ನಡೆದಿರುವ ಹೋರಾಟದಿಂದ ಸರ್ಕಾರದ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲ. ಯೋಜನೆಗೆ ಕೆಲವು ರೈತರಷ್ಟೇ ವಿರೋಧ ಮಾಡುತ್ತಿದ್ದಾರೆ. ಅಲ್ಲಿನ ಹಲವು ರೈತರು ಟೌನ್‌ಶಿಪ್ ಪರವಾಗಿದ್ದಾರೆ. ಸರ್ಕಾರದಿಂದ ಪರಿಹಾರ ಸಿಗುತ್ತದೆ ಎಂಬ ಖುಷಿಯಲ್ಲಿದ್ದಾರೆ. ಹಿಂದೆ ಕುಮಾರಸ್ವಾಮಿ ಅವರೇ ಭೂಸ್ವಾಧೀನ ಮಾಡಿದ್ದರು ಎಂದು ಹೇಳಿದರು.

# ಮರಳು ಗಣಿಗಾರಿಕೆ ತಡೆಗೆ ಒತ್ತಾಯ

**ಗುತ್ತಿಗೆದಾರರು ತೀವ್ರ ಆಕ್ರೋಶ**
**80 ಲಕ್ಷ ರೂ.ಗೂ ಅಧಿಕ ಮೊತ್ತಕ್ಕೆ ಬಿಡ್**

**ಸಕಲೇಶಪುರ:** ತಾಲೂಕಿನ ಕಣಗಲು ಮನೆ ಮರಳು ಸಂಗ್ರಹ ಕೇಂದ್ರದಲ್ಲಿ ವ್ಯಾಪಕ ಪ್ರಮಾಣದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಯುತ್ತಿರುವ ಆರೋಪ ಕೇಳಿಬಂದಿದ್ದು, ಇದರಿಂದ ಗುತ್ತಿಗೆದಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ವಿವಿಧ ಮರಳು ಸಂಗ್ರಹ ಕೇಂದ್ರಗಳ ಹರಾಜು ಸುಮಾರು ಎರಡು ತಿಂಗಳ ಹಿಂದೆ ನಡೆದಿದ್ದು, ಕಣಗಲು ಮನೆ ಮರಳು ಕೇಂದ್ರವನ್ನು ರಾಜ್ ಕನ್ಸ್ಟ್ರಕ್ಷನ್ ಸಂಸ್ಥೆಯ ಉತ್ತಮ್ ಅವರು 80 ಲಕ್ಷ ರೂ.ಗೂ ಅಧಿಕ ಮೊತ್ತಕ್ಕೆ ಬಿಡ್ ಮಾಡಿ ಸರ್ಕಾರದ ನಿಯಮಾನುಸಾರ ಗುತ್ತಿಗೆ ಪಡೆದಿದ್ದಾರೆ. ಆದರೆ ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯಾರಂಭಕ್ಕೆ ಸಿದ್ಧತೆ ನಡೆಸುತ್ತಿದ್ದ ಸಂದರ್ಭದಲ್ಲೇ ಕೆಲವರು ಅಕ್ರಮವಾಗಿ ಮರಳು ಸಾಗಣೆ ನಡೆಸಿ ಮಾರಾಟ ಮಾಡಿರುವುದಾಗಿ ಆರೋಪಿಸಲಾಗಿದೆ.

ಗುತ್ತಿಗೆದಾರರ ಮಾಹಿತಿ ಪ್ರಕಾರ, ಸುಮಾರು 250ಕ್ಕೂ ಹೆಚ್ಚು ಲಾರಿ ಲೋಡ್ಗಳಷ್ಟು ಮರಳನ್ನು ಅಕ್ರಮವಾಗಿ ಎತ್ತಿ ಸಾಗಿಸಿ ವಿವಿಧ ಕಡೆ ಸಂಗ್ರಹಿಸಿಡಲಾಗಿದೆ ಎನ್ನಲಾಗಿದೆ. ಮಳೆಗಾಲ ಆರಂಭವಾಗಿರುವುದರಿಂದ ಗುತ್ತಿಗೆದಾರರು ಇನ್ನೂ ಅಧಿಕೃತವಾಗಿ ಮರಳು ಗಣಿಗಾರಿಕೆ ಹಾಗೂ ಸಾಗಣೆ ಆರಂಭಿಸದಿದ್ದರೂ, ಅಕ್ರಮ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುವುದು ಆತಂಕಕ್ಕೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಗುತ್ತಿಗೆದಾರ ಉತ್ತಮ್, ಸರ್ಕಾರದ ನಿಯಮ ಪಾಲಿಸಿ ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿ ಗುತ್ತಿಗೆ ಪಡೆದಿದ್ದೇವೆ. ಆದರೆ ಕೆಲವರು ಕಾನೂನು ಉಲ್ಲಂಘಿಸಿ ಅಕ್ರಮವಾಗಿ ಮರಳು ಸಾಗಾಟ ನಡೆಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಆದಾಯ ನಷ್ಟವಾಗುವುದರ ಜತೆಗೆ ಗುತ್ತಿಗೆದಾರರಿಗೂ ಭಾರಿ ಆರ್ಥಿಕ ಹೊರೆ ಉಂಟಾಗಿದೆ ಎಂದು ಆರೋಪಿಸಿದರು.

ಕಣಗಲು ಮನೆ ಮರಳು ಸಂಗ್ರಹ ಕೇಂದ್ರದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗುತ್ತಿಗೆದಾರರು ಆಗ್ರಹಿಸಿದ್ದಾರೆ. ಸರ್ಕಾರದ ಆದಾಯಕ್ಕೆ ಧಕ್ಕೆ ಉಂಟುಮಾಡುವ ಇಂತಹ ಅಕ್ರಮಗಳನ್ನು ತಡೆಯಲು ಜಿಲ್ಲಾಡಳಿತ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.



# ಆಸ್ಪತ್ರೆಯಲ್ಲಿ ಹಣ ಕೇಳಿದರೆ ಕ್ರಮ

## ಶಾಸಕ ಎಚ್.ಡಿ.ರೇವಣ್ಣ ಎಚ್ಚರಿಕೆ | ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿಗಳ ಜತೆ ಸಭೆ

**ಹೊಳೆನರಸೀಪುರ:** ಸಾರ್ವಜನಿಕ ಆಸ್ಪತ್ರೆಯಲ್ಲಿ ಇತ್ತೀಚೆಗೆ ಕೇಳಿಬರುತ್ತಿರುವ ಭ್ರಷ್ಟಾಚಾರದ ಆರೋಪಗಳು ಹಾಗೂ ಗುತ್ತಿಗೆ ನೌಕರರ ಪ್ರತಿಭಟನೆ ಹಿನ್ನೆಲೆಯಲ್ಲಿ ಮಾಜಿ ಸಚಿವ ಹಾಗೂ ಶಾಸಕ ಎಚ್.ಡಿ.ರೇವಣ್ಣ ಅವರು ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳು ಮತ್ತು ಸಿಬ್ಬಂದಿ ಸಭೆ ನಡೆಸಿದರು.

ಆಸ್ಪತ್ರೆಯ ಆಡಳಿತ ಮಂಡಳಿ ಹಾಗೂ ಕೆಲ ಸಿಬ್ಬಂದಿ ಬೇಜವಾಬ್ದಾರಿಯುತ ಕಾರ್ಯವೈಖರಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಕರ್ತವ್ಯ ಲೋಪ ಎಸಗುವ ಹಾಗೂ ಸಾರ್ವಜನಿಕರಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುವ ಸಿಬ್ಬಂದಿ ವಿರುದ್ಧ ತಕ್ಷಣವೇ ಕಠಿಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಆಸ್ಪತ್ರೆಯ ಕೌಂಟರ್ ಸಿಬ್ಬಂದಿಯೊಬ್ಬರು ರೋಗಿಯಿಂದ ನಿಯಮಬಾಹಿರವಾಗಿ 150 ರೂ. ಹಣ ವಸೂಲಿ ಮಾಡಿರುವ ಆರೋಪ ಕುರಿತು ಚರ್ಚೆ ನಡೆಯಿತು. ಈ ಸಂಬಂಧ ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿರುವುದಾಗಿ ಆಡಳಿತ ವೈದ್ಯಾಧಿಕಾರಿಗಳು ತಿಳಿಸಿದರು. ಇದೇ ರೀತಿಯ ಮತ್ತೊಂದು ಪ್ರಕರಣವೂ ಈ ಹಿಂದೆ ನಡೆದಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಸಿಬ್ಬಂದಿಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ರೇವಣ್ಣ ಎಚ್ಚರಿಕೆ ನೀಡಿದರು.

**ಆಸ್ಪತ್ರೆಯ ಅಭಿವೃದ್ಧಿ ಹಾದಿ ನೆನಪಿಸಿದ ರೇವಣ್ಣ:** ಆಸ್ಪತ್ರೆಯ ಬೆಳವಣಿಗೆ ಕುರಿತು ಮಾತನಾಡಿದ ಅವರು, ಈ ಆಸ್ಪತ್ರೆ ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಿರ್ಮಾಣಗೊಂಡಿದ್ದು, ಎಚ್.ಡಿ. ದೇವೇಗೌಡರು ಶಾಸಕರಾಗಿ ಹಾಗೂ ವಿರೋಧ ಪಕ್ಷದ ನಾಯಕರಾಗಿ ಹೋರಾಟ ನಡೆಸಿ ಇದನ್ನು ಅಭಿವೃದ್ಧಿಪಡಿಸಿದರು. ನಂತರ ಕುಮಾರಸ್ವಾಮಿ ಅವರ ಸರ್ಕಾರದ ಅವಧಿಯಲ್ಲಿ 250 ಹಾಗೂ 100 ಹಾಸಿಗೆಗಳ ಹೆಚ್ಚುವರಿ ಸೌಲಭ್ಯ ಮಂಜೂರಾಯಿತು. ನರ್ಸಿಂಗ್ ಕಾಲೇಜು ಆರಂಭವಾದ ಪರಿಣಾಮ ಇಂದು 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

**ಸಿಬ್ಬಂದಿ ಕೊರತೆ ನಿವಾರಣೆಗೆ ಕ್ರಮ:** ಕಳೆದ ಒಂದು ವರ್ಷದಲ್ಲಿ 15 ರಿಂದ 20 ನರ್ಸ್ಗಳು ವರ್ಗಾವಣೆಯಾಗಿರುವುದರಿಂದ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಉಂಟಾಗಿದೆ. ಖಾಲಿ ಇರುವ 18 ನರ್ಸ್ ಹುದ್ದೆಗಳು ಹಾಗೂ ಹೆರಿಗೆ, ಮಕ್ಕಳ, ಚರ್ಮರೋಗ ಮತ್ತು ರೇಡಿಯಾಲಜಿಸ್ಟ್ ಸೇರಿದಂತೆ ನಾಲ್ಕು ತಜ್ಞ ವೈದ್ಯರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡುವಂತೆ ಆರೋಗ್ಯ ಸಚಿವರಿಗೆ ಪತ್ರ ಬರೆಯುವುದಾಗಿ ರೇವಣ್ಣ ತಿಳಿಸಿದರು. ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಮಂಜುಳಾ, ಡಾ. ರಾಜೇಶ್, ಡಾ. ನಟರಾಜ್ ಸೇರಿದಂತೆ ಪ್ರಮುಖ ವೈದ್ಯರು, ಸಿಬ್ಬಂದಿ ಇದ್ದರು.



### 21 ಗುತ್ತಿಗೆ ನೌಕರರ ವಜಾ

ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 70 ಡಿ- ಗ್ರೂಪ್ ಗುತ್ತಿಗೆ ನೌಕರರಲ್ಲಿ 21 ಮಂದಿಯನ್ನು ಯಾವುದೇ ಮುನ್ಸೂಚನೆ ನೀಡದೆ ಕೆಲಸದಿಂದ ತೆಗೆದುಹಾಕಿರುವುದನ್ನು ಪ್ರತಿಭಟನಾಕಾರರು ಸಭೆಯ ಗಮನಕ್ಕೆ ತಂದರು. ಆಸ್ಪತ್ರೆಯ ಇತಿಹಾಸದಲ್ಲಿಯೇ ಇಂತಹ ಪ್ರತಿಭಟನೆ ನಡೆದಿರುವುದನ್ನು ನೋಡಿಲ್ಲ ಎಂದು ಹೇಳಿದ ರೇವಣ್ಣ, ಆಸ್ಪತ್ರೆಯ ಗೌರವಕ್ಕೆ ಧಕ್ಕೆ ತರುವ ಯಾವುದೇ ಬೆಳವಣಿಗೆಯನ್ನು ಸಹಿಸುವುದಿಲ್ಲ ಎಂದರು.

### ಡಿ-ಗ್ರೂಪ್ ನೌಕರರ ಸಮಸ್ಯೆ ಆಲಿಕೆ

ಸಭೆಯ ಬಳಿಕ ಪ್ರತಿಭಟನೆ ನಡೆಸುತ್ತಿದ್ದ ಡಿ-ಗ್ರೂಪ್ ಗುತ್ತಿಗೆ ನೌಕರರನ್ನು ಖುದ್ದಾಗಿ ಭೇಟಿ ಮಾಡಿದ ರೇವಣ್ಣ, ಅವರ ಅಹವಾಲುಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಬಹುಜನ ಸಮಾಜ ಪಕ್ಷದ (ಬಿಎಸ್ಪಿ) ಮುಖಂಡ ತಾರೇಶ್ ಅವರು ನೌಕರರ ಪರವಾಗಿ ಸಮಸ್ಯೆಗಳನ್ನು ವಿವರಿಸಿದರು. ಅಶಿಸ್ತಿನಿಂದ ವರ್ತಿಸುವ ನೌಕರರ ವಿರುದ್ಧ ಕ್ರಮ ಕೈಗೊಳ್ಳಲಿ. ಆದರೆ ಹಲವು ವರ್ಷಗಳಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ನೌಕರರನ್ನು ಕಡೆಗಣಿಸಬಾರದು ಎಂದು ತಾರೇಶ್ ಮನವಿ ಮಾಡಿದರು. ಡಿ-ಗ್ರೂಪ್ ನೌಕರರ ಉದ್ಯೋಗ ಭದ್ರತೆ, ನ್ಯಾಯಯುತ ವೇತನ ಹಾಗೂ ಬಾಕಿ ಇರುವ ಭತ್ಯೆಗಳ ಪಾವತಿ ಕುರಿತಂತೆ ಚರ್ಚೆ ನಡೆಯಿತು. ನೌಕರರ ಬೇಡಿಕೆಗಳನ್ನು ತಾಳ್ಮೆಯಿಂದ ಆಲಿಸಿದ ರೇವಣ್ಣ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರದ ಗಮನಕ್ಕೆ ತಂದು ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

# ಕೆ.ಎಸ್.ಲಿಂಗೇಶ್ ಬಂಧನ ರಾಜಕೀಯ ಪಿತೂರಿ

## ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೇಲೂರು ಘಟಕ ಆರೋಪ

**ಬೇಲೂರು:** ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರ ಬಂಧನವು ರಾಜಕೀಯ ಕುತಂತ್ರ ಹಾಗೂ ಕೆಲ ಅಧಿಕಾರಿಗಳ ಷಡ್ಯಂತ್ರದ ಫಲವಾಗಿದ್ದು, ಅವರನ್ನು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೇಲೂರು ತಾಲೂಕು ಘಟಕ ಆರೋಪಿಸಿದೆ.

ನಗರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಅಧ್ಯಕ್ಷ ಅಡಗೂರು ಬಸವರಾಜು, 2013ರಿಂದ 2023ರ ಅವಧಿಯಲ್ಲಿ ಒಟ್ಟು 2,750 ಅರ್ಜಿಗಳು ವಿಲೇವಾರಿಯಾಗಿದ್ದು, ಲಿಂಗೇಶ್ ಅವರ ಅಧಿಕಾರಾವಧಿಯಲ್ಲಿ ಕೇವಲ 200ರಿಂದ 250 ಅರ್ಜಿಗಳು ಮಾತ್ರ ವಿಲೇವಾರಿಯಾಗಿವೆ. ಈ ಪ್ರಕ್ರಿಯೆಯಲ್ಲಿ ಅವರ



ಯಾವುದೇ ವೈಯಕ್ತಿಕ ತಪ್ಪಿಲ್ಲ ಎಂದರು.

ತಾಲೂಕಿನಲ್ಲಿ ಸುಮಾರು 26 ಸಾವಿರ ಅರ್ಜಿಗಳು ಬಾಕಿ ಇದ್ದು, ಅವುಗಳಲ್ಲಿ 10 ಸಾವಿರ ಅರ್ಜಿಗಳು ತಿರಸ್ಕೃತಗೊಂಡಿದ್ದು, 16 ಸಾವಿರ ಅರ್ಜಿಗಳು ಇನ್ನೂ ವಿಲೇವಾರಿಯಾಗದೆ ಉಳಿದಿವೆ. ಈ ಎಲ್ಲ ಅರ್ಜಿಗಳ ಕುರಿತು ಕ್ರಮ ಕೈಗೊಳ್ಳದ ತಾಲೂಕು ಆಡಳಿತವು ಕೇವಲ ಲಿಂಗೇಶ್ ಅವರ ಮೇಲೆಯೇ ದ್ವೇಷದ ರಾಜಕಾರಣ ನಡೆಸುತ್ತಿರುವುದು ಖಂಡನೀಯ ಎಂದು ದೂರಿದರು.

ರೈತರ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ವ್ಯಕ್ತಿಯ ವಿರುದ್ಧ ಈ ರೀತಿಯ ಕ್ರಮ ಕೈಗೊಳ್ಳುವುದು ನ್ಯಾಯೋಚಿತವಲ್ಲ. ಲಿಂಗೇಶ್ ಅವರನ್ನು ತಕ್ಷಣ ಬಿಡುಗಡೆಗೊಳಿಸಿ, ಅವರಿಗೆ ನ್ಯಾಯ ಒದಗಿಸಬೇಕು ಎಂದು ಸರ್ಕಾರ ಹಾಗೂ ಸಂಬಂಧಿತ ಅಧಿಕಾರಿಗಳನ್ನು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಉಪಾಧ್ಯಕ್ಷ ಯೋಗೇಶ್, ಮಾಜಿ ಶಾಸಕ ಲಿಂಗೇಶ್ ಅವರು ತಮ್ಮ ಅಧಿಕಾರಾವಧಿಯಲ್ಲಿ ರೈತರ ಪರವಾಗಿ ನಿರಂತರ ಹೋರಾಟ ನಡೆಸಿ, ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತ ಬಂದಿದ್ದಾರೆ. ಪ್ರತಿ ಹಂತದಲ್ಲೂ ರೈತರ ಹಿತಕ್ಕಾಗಿ ಹೋರಾಟಗಳಲ್ಲಿ ಭಾಗವಹಿಸಿ ಜನಪರ ಕಾಳಜಿಯನ್ನು ತೋರಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಕ್ರಮ-ಸಕ್ರಮ ದಾಖಲೆಗಳ ಮಂಜೂರಾತಿ ಪ್ರಕ್ರಿಯೆಯಲ್ಲಿ ಯಾವುದೇ ದೊಡ್ಡ ಮಟ್ಟದ ತಪ್ಪುಗಳು ನಡೆದಿಲ್ಲ. ಎಂದು ಆರೋಪಿಸಿದರು. ಮಾಜಿ ಶಾಸಕರ ಬಂಧನವನ್ನು ವೀರಶೈವ ಲಿಂಗಾಯತ ಮಹಾಸಭಾ ತೀವ್ರವಾಗಿ ಖಂಡಿಸಿದ್ದು, ಜನಪರ ಹೋರಾಟಗಾರನ ವಿರುದ್ಧ ಈ ರೀತಿಯ ಕ್ರಮ ಕೈಗೊಳ್ಳುವುದು ನ್ಯಾಯಸಮ್ಮತವಲ್ಲ. ಅಲ್ಲದೆ, ಈ ವಿಷಯವನ್ನು ಪತ್ರಿಕೆಗಳು ಹಾಗೂ ಇತರ ಮಾಧ್ಯಮಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತರಬೇಕು ಎಂದು ಮನವಿ ಮಾಡಿದರು.ಖಜಾಂಚಿ ರಾಜಣ್ಣ, ಪ್ರಧಾನ ಕಾರ್ಯದರ್ಶಿ ಮದನ್ ಬಳ್ಳೂರು, ಯುವ ಘಟಕದ ಅಧ್ಯಕ್ಷ ಚೇತನ್ ಹಳೆಬೀಡು ಇದ್ದರು.

### ಕಾಡು ಹಂದಿ ಮಾಂಸ ಮಾರಾಟ ಯತ್ನ: ಆರೋಪಿ ಬಂಧನ

**ಬೇಲೂರು:** ತಾಲೂಕಿನ ಹಗರೆ ರಕ್ಷಿತ ಅರಣ್ಯ ಪ್ರದೇಶದಲ್ಲಿ ಕಾಡು ಹಂದಿಗಳನ್ನು ಬೇಟೆಯಾಡಿ ಮಾಂಸ ಮಾರಾಟ ಮಾಡಲು ಯತ್ನಿಸಿದ ಆರೋಪಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಸಾಲಗಾಮೆ ಹೋಬಳಿಯ ಬೈಲಹಳ್ಳಿ ಗ್ರಾಮದ ರವಿಕುಮಾರ್ ಬಂಧಿತ ಆರೋಪಿಯಾಗಿದ್ದು, ಆರೋಪಿಯಿಂದ ಎರಡು ಕಾಡು ಹಂದಿಗಳನ್ನು ಬೇಟೆ ಯಾಡಿ ಪಡೆದಿದ್ದ ಸುಮಾರು 11 ಕೆ.ಜಿ. ಹಸಿ ಮಾಂಸವನ್ನು ವಶಪಡಿಸಿಕೊಳ್ಳಲಾಗಿದೆ. ಜೂನ್ 21ರಂದು ವಲಯ ಅರಣ್ಯಾಧಿಕಾರಿ, ಬೇಲೂರು ವಲಯ ಅವರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ಹಗರೆ ರಕ್ಷಿತ ಅರಣ್ಯದ ಗಡಿಯ ಹಗರೆ? ಹೊಲಬಗೆರೆ ರಸ್ತೆಯಲ್ಲಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯ ವೇಳೆ ಒಂದು ಕಿಯಾ ಕಾರು, ಮೂರು ಡಿಬಿಬಿಎಲ್ ಗನ್ಗಳು ಹಾಗೂ ಇತರೆ ಬೇಟೆ ಉಪಕರಣಗಳನ್ನು ವಶಕ್ಕೆ ಪಡೆದು ಅಮಾನತ್ತು ಪಡಿಸಲಾಗಿದೆ. ಪ್ರಕರಣ ಸಂಬಂಧ ಅರಣ್ಯ ಕಾಯ್ದೆಯಡಿ ಮೊಕದ್ದಮೆ ದಾಖಲಿಸಿ ಕೊಂಡು ಮುಂದಿನ ತನಿಖೆ ಕೈಗೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಬೇಲೂರು ವಲಯ ಅರಣ್ಯಾಧಿಕಾರಿ ಆರ್.ಎಫ್.ಯತೀಶ್, ಡಿಆರ್ಎಫ್ ಮೋಹನ್ ಕುಮಾರ್ ಹಾಗೂ ಸಿಬ್ಬಂದಿ ಸತೀಶ್, ಮಂಜುನಾಥ್ ಭಾಗವಹಿಸಿದ್ದರು.

# ಅ.18,19ಕ್ಕೆ ಮೈಸೂರಿನಲ್ಲಿ ಮೊಟ್ಟಮೊದಲ ಕಂಬಳ: ಮಹೋತ್ಸವ

ಮೈಸೂರು: ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಈ ಬಾರಿ ಅಕ್ಟೋಬರ್ 18 ಮತ್ತು 19ರಂದು ಮೈಸೂರಿನಲ್ಲಿ ಮೊಟ್ಟ ಮೊದಲ ಕಂಬಳ ಉತ್ಸವವನ್ನು ಆಯೋಜನೆ ಮಾಡಲಾಗಿದೆ ಎಂದು ಪುತ್ತೂರಿನ ಶಾಸಕ ಅಶೋಕ್ ಕುಮಾರ್ ತಿಳಿಸಿದರು.

ಶುಕ್ರವಾರ ಮೈಸೂರಿಗೆ ಆಗಮಿಸಿದ ಅಶೋಕ್ ರೈ ಅವರು ಕಂಬಳ ನಡೆಸಲು ಸ್ಥಳ ಪರಿಶೀಲನೆಗೆ ಆಗಮಿಸಿ ಮಾತನಾಡಿದ ಅವರು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಈ ಬಾರಿ ಮೈಸೂರಿನ ದಸರಾ ಮಹೋತ್ಸವದಲ್ಲಿ ಕಂಬಳ ಆಯೋಜನೆ ಮಾಡಬೇಕೆಂದುಕೊಂಡಿದ್ದಾರೆ.ಮೈಸೂರಿನಲ್ಲಿ ಸೂಕ್ತ ಜಾಗ ಎಲ್ಲಿದೆ ನೋಡಿ ಸ್ಥಳ ನಿಗಧಿ ಮಾಡಿ ಎಂದು ನನಗೆ ಸೂಚಿಸಿದ್ದಾರೆ. ಹಾಗಾಗಿ ನಾನು ಮೈಸೂರಿಗೆ ಬಂದಿದ್ದೇನೆ. ಈಗ ಮೈಸೂರಿನಲ್ಲಿ ಎರಡು ಕಡೆ ಜಾಗ ಗುರ್ತಿಸಿದ್ದಾರೆ ವಿಜಯನಗರ 1 ನೇ ಹಂತ ಐಶ್ವರ್ಯ ಪೆಟ್ರೋಲ್ ಬಂಕ್ ಎದರು ಇರುವ ಖಾಲಿ ಜಾಗ ಮತ್ತು ನಗರದ ಪೂರ್ವ ಭಾಗದಲ್ಲಿರುವ ಸಾತಗಳ್ಳಿ ರಿಂಗ್ ರಸ್ತೆ ಬಳಿ ಒಂದು ಜಾಗವನ್ನು ಗುರುತಿಸಿದ್ದಾರೆ. ಎರಡು ಜಾಗಗಳಲ್ಲಿ ಯಾವುದೇ ಸೂಕ್ತ ಎಂದು ಚರ್ಚಿಸಿ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ.



ಅಂತಿಮವಾಗಿ ಯಾವ ಜಾಗದಲ್ಲಿ ನಡೆಯಬೇಕು ಎಂದು ಮುಖ್ಯಮಂತ್ರಿಗಳು ಅಂತಿಮಗೊಳಿಸುತ್ತಾರೆ.

ಕಂಬಳ ನಡೆಸಲು ಕನಿಷ್ಠ 20 ಎಕರೆ ಅಷ್ಟು ಸ್ಥಳಾವಕಾಶದ ಅವಶ್ಯಕತೆ ಇದ್ದು ಪೊಲೀಸರು ಸಾತಗಳ್ಳಿ ಬಳಿಯ ಸ್ಥಳ ಸೂಕ್ತ ಎಂದು ಹೇಳುತ್ತಾರೆ.ಯಾಕೆಂದರೆ, ಲಕ್ಷಾಂತರ ಜನ ಸೇರುವುದರಿಂದ ಸೂಕ್ತ ಪಾರ್ಕಿಂಗ್ ಮತ್ತು ಕಂಬಳಕ್ಕೆ ನೀರು ಎಲ್ಲವನ್ನೂ ಒದಗಿಸಲು ವಿಶಾಲವಾದ ಜಾಗ ಬೇಕಿದೆ.ಯುವ ದಸರ ಮಹೋತ್ಸವವೂ ರಿಂಗ್ ರಸ್ತೆಯಲ್ಲೇ ನಡೆ ಯುವುದರಿಂದ ಕಂಬಳವನ್ನೂ ರಿಂಗ್ ರಸ್ತೆಯಲ್ಲೇ ಮಾಡಿದರೆ ಸೂಕ್ತ ಎಂದು ಒಂದಷ್ಟು ಸಲಹೆಗಳು ಬರುತ್ತಿವೆ.ಎರಡು ಸ್ಥಳವನ್ನೂ ಪರಿಶೀಲನೆ ಮಾಡಿ ಸ್ಕೆಚ್ ಸಹಿತ ಮುಖ್ಯಮಂತ್ರಿಗಳಿಗೆ ವರದಿ ಕೊಡಲಾಗುತ್ತದೆ.

ಕಂಬಳದಲ್ಲಿ ಸುಮಾರು 150 ರಿಂದ 200 ಕೋಣಗಳು ಭಾಗಿಯಾಗಲಿದ್ದ ಅಕ್ಟೋಬರ್ 18 ಮತ್ತು19 ರಂದು ಎರಡು ದಿನಗಳ ಕಾಲ ಹಗಲು ರಾತ್ರಿ ಕಂಬಳ ಕೋಣಗಳ ಸ್ಪರ್ಧೆ ಇರುತ್ತದೆ. ಸರಿಸುಮಾರು ಎರಡು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಸುಮಾರು 10 ಲಕ್ಷ ಜನ ಸೇರುವ ನಿರೀಕ್ಷೆ ಇದೆ.ಕೋಣಗಳು ಒಂದು ದಿನ ಮುಂಚಿತವಾಗಿ ಮೈಸೂರಿಗೆ ಆಗಮಿಸಲಿದ್ದು ಬರುವ ಮಾರ್ಗ ಮಧ್ಯೆ ಮಡಿಕೇರಿಯಲ್ಲಿ ಸ್ವಲ್ಪ ಹೊತ್ತು ಕೋಣಗಳಿಗೆ ವಿರಮಿಸಲು ಅವಕಾಶ ಕೊಟ್ಟು ನಂತರ ಮೈಸೂರಿಗೆ ಆಗಮಿಸಲಿವೆ.ಕಂಬಳ ನಡೆಯುವ ಸ್ಥಳದಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಶೈಲಿಯ ಹಾಗೂ ಸ್ಥಳೀಯ ಶೈಲಿಯ ಆಹಾರ ಮೇಳವನ್ನೂ ಆಯೋಜನೆ ಮಾಡಲಾಗುತ್ತದೆ. ಕಂಬಳ ವೀಕ್ಷಣೆಗೆ ಸುಮಾರು 8 ಸಾವಿರ ಜನರಿಗೆ ಆಸನ ವ್ಯವಸ್ಥೆ ಮಾಡಲಾಗುತ್ತದೆ. ಪಕ್ಕದಲ್ಲಿ ಸಾಮಾನ್ಯ ಗ್ಯಾಲರಿಗಳನ್ನು ನಿರ್ಮಿಸಲಾಗುತ್ತದೆ. ಶಿಷ್ಟಾಚಾರದ ಪ್ರಕಾರ ಗಣ್ಯರಿಗೆ ವಿಐಪಿ ಪಾಸ್ ವ್ಯವಸ್ಥೆ ಇರುತ್ತದೆ.ಇನ್ನು ಉಳಿದಂತೆ ಎಲ್ಲಾ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರುತ್ತದೆ. ಈ ಕಂಬಳ ಮಹೋತ್ಸವಕ್ಕೆ ಸರಿಸುಮಾರು 5 ರಿಂದ 8 ಕೋಟಿ ವೆಚ್ಚ ತಗುಲಿದೆ.ಮುಖ್ಯಮಂತ್ರಿಗಳು ವಿಶೇಷ ಅನುದಾನ ಒದಗಿಸಲಾಗುತ್ತದೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ನಡೆದ ಕಂಬಳ ಉತ್ಸವಕ್ಕೆ ಸುಮಾರು 12 ಕೋಟಿ ರೂ ಖರ್ಚಾಗಿತ್ತು ಹಾಗಾಗಿ ಇಲ್ಲಿಯೂ ಕೂಡ ಮೊದಲ ಬಾರಿ ನಡೆಯುವುದರಿಂದ ಸಹಜವಾಗಿ ಹೆಚ್ಚು ಜನರು ಬರುವ ನಿರೀಕ್ಷೆ ಇದೆ.ಕರಾವಳಿಯ ಕಂಬಳವನ್ನು ಕಣ್ತುಂಬಿಕೊಳ್ಳುಲು ಸಹಸ್ರಾರು ಜನರು ಬರುತ್ತಾರೆ.ಯಾರಿಗೂ ಯಾವುದೇ ತೊಂದರೆ ಆಗದಂತೆ ಎಲ್ಲಾ ವ್ಯವಸ್ಥೆ ಮಾಡಲು ಕ್ರಮವಹಿಸಲಾಗುತ್ತದೆ ಎಂದರು. ಇದೇ ವೇಳೆ ರಾಜ್ಯ ಕಂಬಳ ಕಾರ್ಯದರ್ಶಿ ವಿಜಯ್ ಕುಮಾರ್, ಡಿಸಿಪಿಗಳಾದ ಹರ್ಷ ಪ್ರಿಯಂವದಾ, ಸುಂದರ ರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿ ಉಪ ನಿರ್ದೇಶಕ ಸುದರ್ಶನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ

## ವಿಮೆ ವ್ಯಾಪ್ತಿಗೆ ತೋಟಗಾರಿಕೆ ವಿವಿಧ ಬೆಳೆ ಸೇರ್ಪಡೆ

ಚಾಮರಾಜನಗರ, 2026–27ನೇ ಸಾಲಿಗೆ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಜಿಲ್ಲೆಯ ತೋಟಗಾರಿಕೆ ಬೆಳೆಗಳಾದ ಈರುಳ್ಳಿ, ಟೊಮ್ಯಾಟೊ, ಆಲೂಗೆಡ್ಡೆ ಮತ್ತು ಅರಿಶಿಣ ಬೆಳೆಗಳನ್ನು ಬೆಳೆ ವಿಮೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇಂಡೆಮ್ನಿಟಿ ಮಟ್ಟ ಶೇ. 90ರಷ್ಟಿದ್ದು, ನೀರಾವರಿ ಆಶ್ರಿತ ಈರುಳ್ಳಿ ಬೆಳೆಗೆ ಪ್ರತಿ ಹೆಕ್ಟೇರ್ ಗೆ ವಿಮಾ ಮೊತ್ತ 93900 ರೂ. ಇದ್ದು, ಪ್ರತಿ ಎಕರೆಗೆ ರೈತರು ವಿಮಾ ಕಂತಾಗಿ 1900 ರೂ. ಪಾವತಿಸಬೇಕಿದ್ದು, ವಿಮಾ ಕಂತು ಪಾವತಿಸಲು ಜೂನ್ 30 ಕೊನೆಯ ದಿನವಾಗಿದೆ. ಟೊಮ್ಯಾಟೊ ಬೆಳೆಗೆ ಪ್ರತಿ ಹೆಕ್ಟೇರ್ ಗೆ ವಿಮಾ ಮೊತ್ತ 169800 ರೂ. ಇದ್ದು, ಪ್ರತಿ ಎಕರೆಗೆ ರೈತರು ವಿಮಾ ಕಂತಾಗಿ 3436 ರೂ. ಪಾವತಿಸಬೇಕಿದ್ದು, ವಿಮಾ ಕಂತು ಪಾವತಿಸಲು ಜುಲೈ 15 ಕೊನೆಯ ದಿನವಾಗಿದೆ. ನೀರಾವರಿ ಆಶ್ರಿತ ಆಲೂಗಡ್ಡೆ ಬೆಳೆಗೆ ಪ್ರತಿ ಹೆಕ್ಟೇರ್ ಗೆ ವಿಮಾ ಮೊತ್ತ 171300 ರೂ. ಇದ್ದು, ಪ್ರತಿ ಎಕರೆಗೆ ರೈತರು ವಿಮಾ ಕಂತಾಗಿ 3466 ರೂ. ಪಾವತಿಸಬೇಕಿದ್ದು, ವಿಮಾ ಕಂತು ಪಾವತಿಸಲು ಜುಲೈ 15 ಕೊನೆಯ ದಿನವಾಗಿದೆ. ಅರಿಶಿಣ ಬೆಳೆಗೆ ಪ್ರತಿ ಹೆಕ್ಟೇರ್ ಗೆ ವಿಮಾ ಮೊತ್ತ 164200 ರೂ. ಇದ್ದು, ಪ್ರತಿ ಎಕರೆಗೆ ರೈತರು ವಿಮಾ ಕಂತಾಗಿ 3323 ರೂ. ಪಾವತಿಸಬೇಕಿದ್ದು, ವಿಮಾ ಕಂತು ಪಾವತಿಸಲು ಜುಲೈ 31 ಕೊನೆಯ ದಿನವಾಗಿದೆ. ಚಾಮರಾಜನಗರ ತಾಲೂಕಿನ ಕಸಬಾ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಅರಿಶಿನ, ಟೊಮ್ಯಾಟೊ, ಚಂದಕವಾಡಿ, ಸಂತೇಮರಳ್ಳಿ ಮತ್ತು ಹರವೆ ಹೋಬಳಿಗೆ ಅರಿಶಿನ, ಟೊಮ್ಯಾಟೊ, ಹರದನಹಳ್ಳಿ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಅರಿಶಿನ, ನೀರಾವರಿ ಆಶ್ರಿತ ಆಲೂಗಡ್ಡೆ, ಟೊಮ್ಯಟೊ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ. ಗುಂಡ್ಲುಪೇಟೆ ತಾಲೂಕಿನ ಕಸಬಾ ಹೋಬಳಿಗೆ ಅರಿಶಿನ, ಟೊಮ್ಯಾಟೊ, ತೆರಕಣಾಂಬಿ ಮತ್ತು ಬೇಗೂರು ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಅರಿಶಿನ, ಟೊಮ್ಯಾಟೊ, ಹಂಗಳ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಅರಿಶಿನ, ನೀರಾವರಿ ಆಶ್ರಿತ ಆಲೂಗಡ್ಡೆ, ಟೊಮ್ಯಾಟೊ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ. ಕೊಳ್ಳೇಗಾಲ ತಾಲೂಕಿನ ಕಸಬಾ ಮತ್ತು ಪಾಳ್ಯ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಅರಿಶಿನ, ಟೊಮ್ಯಾಟೊ ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ. ಹನೂರು ತಾಲೂಕಿನ ರಾಮಾಪುರ ಹೋಬಳಿಗೆ ನೀರಾವರಿ ಆಶ್ರಿತ ಈರುಳ್ಳಿ, ಅರಿಶಿನ, ಬೆಳೆ ವಿಮೆ ವ್ಯಾಪ್ತಿಗೆ ಒಳಪಡಲಿದೆ.

# 32.70 ಕೋಟಿ ಭೂ ಪರಿಹಾರ ವಿತರಣೆ

## ಗಾಣಕಲ್ ನಟರಾಜ್ ಮಾಹಿತಿ । ಬಿಡದಿ ಸಮಗ್ರ ನಗರ ಯೋಜನೆ

ರಾಮನಗರ: ಬಿಡದಿ ಸಮಗ್ರ ನಗರ ಯೋಜನೆಯ ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿರುವ 27 ಮಂದಿ ಭೂ ಮಾಲೀಕರಿಗೆ ಇಲ್ಲಿಯವರೆಗೆ 32 ಕೋಟಿ 70 ಲಕ್ಷ ರೂ ಪರಿಹಾರ ವಿತರಿಸಲಾಗಿದೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್ ತಿಳಿಸಿದರು.

ಕಂದಾಯ ಭವನದಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿದ 10 ಮಂದಿ ರೈತರಿಗೆ 19,69,72,342 ರುಪಾಯಿ ಭೂ ಪರಿಹಾರದ ಚೆಕ್ ಗಳನ್ನು ವಿತರಿಸಿ ಮಾತನಾಡಿದ ಅವರು, ಈಗ 409 ರೈತರು ಪರಿಹಾರ ಬೇಕೆಂದು ಕೇಳಿದ್ದು, ಅದರಲ್ಲಿ 169 ರೈತರು ಭೂ ಪಾಲುದಾರಿಕೆ ಕೇಳಿದ್ದಾರೆ ಎಂದರು. ಅಂತಿಮ ಭೂಸ್ವಾಧೀನ ಅಧಿಸೂಚನೆ ಹೊರಡಿಸಿರುವ ಹಾರೋಹಳ್ಳಿ ತಾಲೂಕಿನ ವಡೇರಹಳ್ಳಿಯ 3 ಮತ್ತು ಬಿಡದಿ ಹೋಬಳಿಯ ಕೆಂಪಯ್ಯನಪಾಳ್ಯ ಗ್ರಾಮದ 7 ಮಂದಿ ಸೇರಿ ಒಟ್ಟು 10 ಭೂ ಮಾಲೀಕರು ತಮ್ಮ ಭೂಮಿಯನ್ನು ಭೂಸ್ವಾಧೀನಕ್ಕೆ ಒಳಪಡಿಸಲು ಒಪ್ಪಿಗೆ ಸೂಚಿಸಿದ್ದಾರೆ. ಇವರಿಗೆ ಇಡುಗಂಟು 5 ಲಕ್ಷ, ಮರಮಾಲ್ಕಿ ಸೇರಿದಂತೆ ಒಟ್ಟು 19,69,72,342 ರು. ಭೂ ಪರಿಹಾರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಕಳೆದ ವಾರ ಮಾಗಡಿ ಕ್ಷೇತ್ರ ಶಾಸಕ ಎಚ್.ಸಿ. ಬಾಲಕೃಷ್ಣರವರು ಸಾಂಕೇತಿಕವಾಗಿ ಏಳು ಮಂದಿ ರೈತರಿಗೆ ಒಟ್ಟು 2 ಎಕರೆ 9 ಗುಂಟೆ ಜಮೀನಿಗೆ ಭೂ ಪರಿಹಾರವಾಗಿ 4,14,60,000 ರು., ಇಡಗಂಡು 5 ಲಕ್ಷ ಹಾಗೂ ಮರ ಮಾಲ್ಕಿ ಸೇರಿ ಒಟ್ಟು 5,23,70,18 ರು. ಪರಿಹಾರ ಮೊತ್ತದ ಚೆಕ್‌ಗಳನ್ನು ವಿತರಿಸಲಾಗಿತ್ತು



ಎಂದು ಹೇಳಿದರು. ಈ ಯೋಜನೆ ಅನುಷ್ಠಾನ ಮಾಡಲು ಬೇಕಾದ ಹಣಕಾಸು ಪ್ರಾಧಿಕಾರದಲ್ಲಿ ಲಭ್ಯವಿದೆ. ರೈತರು ಯಾವುದೇ ಕಾರಣಕ್ಕೂ ವದಂತಿಗಳಿಗೆ ಕಿವಿಗೊಡಬಾರದು. ನಿಗದಿತ ಸಮಯದಲ್ಲಿ ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸುವ ಎಲ್ಲರಿಗೂ ಪರಿಹಾರ ಮೊತ್ತವನ್ನು ಒಂದೇ ಕಂತಿನಲ್ಲಿ ವಿತರಣೆ ಮಾಡುತ್ತೇವೆ ಎಂದು ತಿಳಿಸಿದರು. ಭೂ ಪರಿಹಾರ ವಿತರಣೆ ಸಂಬಂಧ ಸಾಮಾಜಿಕ ಜಾಲತಾಣಗಳಲ್ಲಿ ಜೆಡಿಎಸ್ ಪಕ್ಷದವರು ನಡೆಸುತ್ತಿರುವ ಅಪಪ್ರಚಾರಗಳನ್ನು ನಂಬಬೇಡಿ. ರೈತರು ಭೂ ಪರಿಹಾರಕ್ಕೆ ಬದಲು ಭೂ ಪಾಲುದಾರಿಕೆ ಪಡೆಯುವುದು ಉತ್ತಮ ನಿರ್ಧಾರ. ಸುಮಾರು ಭವಿಷ್ಯದಲ್ಲಿ ನಿಮ್ಮ ಉಳಿದ ಭೂಮಿಯ ಬೆಲೆ 10 ಪಟ್ಟು ಹೆಚ್ಚಾಗಲಿದೆ ಎಂದು ಹೇಳಿದರು.

### ಅಪಪ್ರಚಾರ ಮಾಡುವವರ ವಿರುದ್ಧ ದೂರು

ಜಿಬಿಡಿಎ ನೀಡಿದ ಭೂಸ್ವಾಧೀನ ಪರಿಹಾರದ ಚೆಕ್ ಅನ್ನು ಸುಳ್ಳು ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ರೈತ ಹೋರಾಟಗಾರರೆಂದು ಹೇಳಿಕೊಳ್ಳುತ್ತಿರುವ ಕೆಲವರು ಹಾಗೂ ಜೆಡಿಎಸ್ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿಗಳನ್ನು ಹಾಕಿ ಜನರನ್ನು ದಾರಿತಪ್ಪಿಸುತ್ತಿದ್ದಾರೆ ಎಂದು ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜ್ ಆಕ್ರೋಶ ವ್ಯಕ್ತಪಡಿಸಿದರು. ಮೊದಲ ದಿನ 7 ಮಂದಿ ರೈತರಿಗೆ ಸಾಂಕೇತಿಕವಾಗಿ ಚೆಕ್ ವಿತರಣೆ ಮಾಡಲಾಯಿತು. ಅದರಲ್ಲಿ ದಿನಾಂಕ 19.06.2026 ಎಂದು ನಮೂದಾಗಿದೆ. ಆ ದಿನಾಂಕವನ್ನು 19.06.2024 ಎಂದು ತಿದ್ದಲಾಗಿದೆ. ಇಂತಹ ಕೀಳುಮಟ್ಟದ ಅಪಪ್ರಚಾರಕ್ಕೆ ಯಾರೂ ಇಳಿಯಬಾರದು ಎಂದರು. ಜೆಡಿಎಸ್‌ನ ಪಕ್ಷದ ನಾಯಕರು ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಇಂತಹ ಪಕ್ಷದ ಜೆಡಿಎಸ್ ಕರ್ನಾಟಕ ಅಧಿಕೃತ ಪೇಜ್‌ನಲ್ಲಿ ಈ ರೀತಿ ಸುಳ್ಳು ಅಪಪ್ರಚಾರ ಮಾಡುತ್ತಿರುವುದು ಎಷ್ಟು ಸರಿ. ಆ ನಾಯಕರು ಜನರಿಗೆ ಉತ್ತಮ ಸಂದೇಶ ನೀಡಬೇಕೇ ಹೊರತು ಗೊಂದಲ ಸೃಷ್ಟಿಸುವ ಕೆಲಸ ಮಾಡಬೇಡಿ ಎಂದು ಮನವಿ ಮಾಡಿದರು. ಈ ಬಗ್ಗೆ ರಾಮನಗರ ಪೊಲೀಸ್ ಕ್ರೈಮ್ ವಿಭಾಗ ಹಾಗೂ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಈ ಪೋಸ್ಟ್ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಲಾಗಿದೆ ಎಂದು ಗಾಣಕಲ್ ನಟರಾಜ್ ತಿಳಿಸಿದರು.

## ಸಾಲ: ಕೇಂದ್ರದ ಹಿಡಿತ ಹೆಚ್ಚಾಗಿದೆ



ಗುಂಡ್ಲುಪೇಟೆ: ರೈತರಿಗೆ ಸಾಲ ನೀಡಲು ಕೆಲವು ನಿಬಂಧನೆಗಳನ್ನು ಕೇಂದ್ರ ಸರ್ಕಾರ ಹಾಕುತ್ತಿದೆ ಮೊದಲಿಗಿಂತ ಕೇಂದ್ರದ ಹಿಡಿತ ಹೆಚ್ಚಾಗಿದೆ ಸಿಬಿಲ್ ಸಮಸ್ಯೆ ಇರುವವರಿಗೂ ಸಾಲ ಸಿಗದಂತಾಗುತ್ತಿದೆ ಅಲ್ಲದೆ ಹೆಚ್ಚಿನ ಸಾಲ ನೀಡಲು ಹಣ ನೀಡುತ್ತಿಲ್ಲ ಎಂದು ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಹಾಗೂ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಆರೋಪಿಸಿದರು.

ತಾಲ್ಲೂಕಿನ ಸೋಮಹಳ್ಳಿ ಗ್ರಾಮದಲ್ಲಿ ಕೃಷಿಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಮಾತನಾಡಿ ಹೊಸ ಸಾಲಗಳನ್ನು ರೈತರಿಗೆ ನಿಡಲಾಗುತ್ತಿದೆ ಅಲ್ಲದೆ ಸಾಲ ಪಡೆದ ರೈತರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದಾಗ ಮಾತ್ರ ಸಹಕಾರ ಸಂಘ ಬೆಳವಣಿಗೆ ಸಾಧ್ಯ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹಾಗಿದ್ದಾಗ ಚಾಮರಾಜನಗರ ಭಾಗಕ್ಕೆ ಹೆಚ್ಚಿನ ಹಣ ನೀಡಬೇಕು ಎಂದು ಕೇಳಲಾಗಿತ್ತು ಅವರು ಒಪ್ಪಿದರು ಇವಾಗ ಡಿಕೆ ಶಿವಕುಮಾರ್ ಸಹಕಾರ ನೀಡಲಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಸಾಲ ನೀಡುವುದಾಗಿ ತಿಳಿಸಿದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್ ಎಸ್ ನಂಜುಂಡಪ್ರಸಾದ್ ಮಾತನಾಡಿ, ದಿ.ಮಹದೇವಪ್ರಸಾದ್ ಅವರು ಪ್ರತಿ ಗ್ರಾ.ಪಂ ವ್ಯಾಪ್ತಿಯಲ್ಲಿ ಸಹಕಾರ ಸಂಘ ಸ್ಥಾಪಿಸಲು ಶ್ರಮ ವಹಿಸಿದರು, ಅವರ ಅವದಿಯಲ್ಲಿಯೇ ನಮ್ಮ ತಾಲ್ಲೂಕಿನಲ್ಲಿ 35 ಪಿಎಸಿಸಿ ಸಂಘಗಳಾಗಿದೆ ಮೊದಲು ಕೃಷಿ ಚಟುವಟಿಕೆಗೆ ಸೀಮಿತವಾಗಿದ್ದ ಸಂಘ ಇವಾಗ ವಿವಿಧ ಉದ್ದೇಶಗಳ ಚಟುವಟಿಕೆಗೂ ಸಂಘ ಬೆಳವಣಿಗೆಗೆ ಸಹಕಾರಿ ಯಾಗಿದೆ ಎಂದರು.

ಈ ಸಂದರ್ಭದಲ್ಲಿ ಸೋಮಹಳ್ಳಿ ಪಿಎಸಿಸಿ ವತಿಯಿಂದ ಕ್ಲಿಯರ್ ಮೆಡಿ ಮಲ್ಟಿ ಸ್ಪೆಷಾಲಿಟಿ ಅಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು 80 ಕ್ಕೂ ಹೆಚ್ಚಿನ ಜನರು ಪರೀಕ್ಷೆಯಲ್ಲಿ ಭಾಗಿಯಾದರು, ಇಸಿಜಿ, ಕಣ್ಣು ತಪಾಸಣೆ, ಬಿಪಿ ಶುಗರ್, ಸೇರಿದಂತೆ ಮತ್ತಿತರ ತಪಾಸಣೆ ಮಾಡಲಾಯಿತು ಹಿರಿಯ ನಾಗರೀಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಪಿಎಸಿಸಿ ಅಧ್ಯಕ್ಷ ಶಿವನಾಗಪ್ಪ, ಮಾಜಿ ತಾ.ಪಂ ಅಧ್ಯಕ್ಷ ಮಧುಶಂಕರ್,ಪಿಎಸಿಸಿ ಉಪಾಧ್ಯಕ್ಷ ಚಿಕ್ಕನಂಜಪ್ಪ, ನಿರ್ದೇಶಕರಾದ ಶಿವಕುಮಾರಸ್ವಾಮಿ, ಹೆಚ್.ಎಂ. ಮಹದೇವಪ್ಪ, ಕೆ.ಸಿ. ಶಿವಪ್ಪ, ಆರತಿ, ನೀಲಮ್ಮ, ಕೂಸಪ್ಪಶೆಟ್ಟಿ, ಪರಶಿವಮೂರ್ತಿ,ಎಸ್. ನಾಗರಾಜು,ಶಿವಮೂರ್ತಿನಾಯಕ ಗುರುಪ್ರಸಾದ್ ಜಿ. ಬ್ಯಾಂಕ್ ಪ್ರತಿನಿಧಿ ಕಾರ್ತಿಕ್, ಪಿಎಸಿಸಿ ಸಿಇಓ ಮಹದೇವಪ್ರಸಾದ್ , ಸಿಬ್ಬಂದಿಗಳಾದ ಸತೀಶ್, ಸುಮಾ ಮತ್ತಿತರರಿದ್ದರು.

## ಮುಮ್ಮಡಿ ನಿರ್ವಾಣ ಮಹಾಸ್ವಾಮೀಜಿಗೆ ಶ್ರದ್ಧಾಂಜಲಿ

**ಚಾಮರಾಜನಗರ,** ಕನಕಪುರದ ಶ್ರೀ ದೇಗುಲ ಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳ ಲಿಂಗೈಕ್ಯರಾದ ಹಿನ್ನೆಲೆಯಲ್ಲಿ ನಗರದ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಮುಂಭಾಗ ಶ್ರೀಗಳಿಗೆ ಭಕ್ತಿಪೂರ್ವಕವಾಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶ್ರೀ ಮಠದ ಮುಂಭಾಗ ಜಿಲ್ಲಾ ಬಸವ ಬಳಗಗಳ ಒಕ್ಕೂಟ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು, ಕದಳಿ ಮಹಿಳಾ ವೇದಿಕೆ, ಶರಣ ಸಾಹಿತ್ಯ ಪರಿಷತ್ ಸೇರಿದಂತೆ ಅನೇಕ ಬಸವ ಪರ ಸಂಘಟನೆಗಳ ಮುಖಂಡರು ಶ್ರೀಗಳ ಭಾವಚಿತ್ರವಿಟ್ಟು ಪೂಜೆ ಸಲ್ಲಿಸುವ ಜೊತೆಗೆ ಶ್ರೀಗಳಿಗೆ ಭಕ್ತಿ ಪೂರ್ವಕವಾಗಿ ನುಡಿ ನಮನ ಸಲ್ಲಿಸಿದರು.

ನುಡಿ ನಮನ ಕಾರ್ಯಕ್ರಮ ನಡೆಯಿತು.

' ಜಿಲ್ಲಾ ಬಸವ ಕೇಂದ್ರದ ಅಧ್ಯಕ್ಷರಾದ ಎನ್ ರಿಚ್ ಮಹದೇವಸ್ವಾಮಿಮಾತನಾಡಿ, ಸುಮಾರು 700 ವರ್ಷಗಳ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ದೇಗಲು ಮಠದ ಅಧ್ಯಕ್ಷರಾಗಿದ್ದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು ತ್ರಿವಿಧ ದಾಸೋಹದ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮಠದ ಸೇವೆಯನ್ನು ತಲುಪಿಸಿದ ಮಹಾನ್ ಸಮಾಜಮುಖಿ ಸಂತರು ಎಂದು ಸ್ಮರಿಸಿದರು. ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ಶಿಕ್ಷಣ ಸೌಲಭ್ಯ ಕಲ್ಪಿಸುವ ಮೂಲಕ ಸಾವಿರಾರು ಕುಟುಂಬಗಳ ಬದುಕಿನಲ್ಲಿ ಬೆಳಕು ಮೂಡಿಸಿದವರು. ಅವರ ಜೀವನವು ಸೇವೆ, ಸರಳತೆ ಮತ್ತು ಸಮಾನತೆಯ ಸಂದೇಶದ ಪ್ರತೀಕವಾಗಿತ್ತು ಎಂದು ನುಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ಕೆ. ರವಿಕುಮಾರ್ ಮಾತನಾಡಿ, ಪೂಜ್ಯಶ್ರೀಗಳು 1943ರ ಮೇ 20ರಂದು ಮೈಸೂರು ಜಿಲ್ಲೆಯ ಟಿ. ನರಸೀಪುರ



ತಾಲೂಕಿನ ಕುರುಬೂರು ಗ್ರಾಮದಲ್ಲಿ ಜನಿಸಿದರು. ಶ್ರೀಗಳು ಬಾಲ್ಯದಿಂದಲೇ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳಿಗೆ ಬದ್ಧರಾಗಿದ್ದರು. 1970ರಲ್ಲಿ ಮಳವಳ್ಳಿ ತಾಲೂಕಿನ ನೆಲ್ಲಿಗೆರೆ ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡು, 1977ರಲ್ಲಿ ಕನಕಪುರದ ಐತಿಹಾಸಿಕ ಶ್ರೀ ದೇಗುಲ ಮಠದ 11ನೇ ಪೀಠಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಅನ್ನ, ಅಕ್ಷರ ಮತ್ತು ಅರಿವು ದಾಸೋಹದ ಮೂಲಕ ಸಮಾಜದಲ್ಲಿ ಆಧ್ಯಾತ್ಮಿಕ ಜಾಗೃತಿ ಮೂಡಿಸಿದ ಅಪರೂಪದ ಯತಿಗಳಾಗಿದ್ದರು ಎಂದು ಅವರ ಸೇವೆಯನ್ನು ಗುಣಗಾಣ ಮಾಡಿದರು.

ಜಿಲ್ಲಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ. ವೀರಭದ್ರಸ್ವಾಮಿ ಮಾತನಾಡಿ, ದೇಗಲು ಮಠದ ಶ್ರೀಗಳು ಜಾತಿ, ಮತ, ಪಂಥಗಳ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಕಾಣುತ್ತಾ ಸಮಾಜದಲ್ಲಿ ಸೌಹಾರ್ದ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಲು ಶ್ರಮಿಸಿದ ಮಹಾನ್ ಸಂತರು.ಅವರ ಅಗಲಿಕೆಯಿಂದ ನಾಡಿನ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದರು.

ಬಸವ ಸಂಸ್ಕೃತಿ ಅಭಿಯಾನದ ಜಿಲ್ಲಾಧ್ಯಕ್ಷ ಕೋಡಿಮೋಳೆ ರಾಜಶೇಖರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಟೇಶ್, ಶಿವಸ್ವಾಮಿ ಹೆಗ್ಗೋಠಾರ, ಮೂಡ್ಲುಪುರ ಮಂಜೇಶ್, ಬಿಸಲವಾಡಿ ಉಮೇಶ್ ಕಾವುದವಾಡಿ ಗುರು ಸ್ಟೈಲ್ ಮಂಜಣ್ಣ, ಅಂಬಳೆ ಚಂದ್ರಪ್ಪ, ಕದಳಿ ಮಹಿಳಾ ವೇದಿಕೆಯ ಜಿಲ್ಲಾಧ್ಯಕ್ಷೆ ವಸಂತಮ್ಮ, ರತ್ನಮ್ಮ ಬಸವರಾಜು, ಎಂ. ಸುಂದರ್, ಬೂದಂಬಳ್ಳಿ ಶಂಕರ್, ಆರ್.ಎಸ್. ಲಿಂಗಸ್ವಾಮಿ, ತೊರವಳ್ಳಿ ಕುಮಾರ್, ಕೋಣನೂರು ಬಸವಣ್ಣ, ಬಸವರಾಜು ಮೊದಲಾದವರು ಇದ್ದರು.


### ಜಿಎಸ್‌ಟಿ ಸಹಾಯಕ ಆಯುಕ್ತ ಟಿ.ಜಿ. ಸುರೇಶ್ ಹೇಳಿಕೆ । ಸಂವಾದ ಕಾರ್ಯಕ್ರಮ

## ನಕಲಿ ಜಿಎಸ್‌ಟಿ ಖಾತೆಗಳ ಬಗ್ಗೆ ಮಾಹಿತಿ ನೀಡಲು ಮನವಿ

ಚಾಮರಾಜನಗರ, ದೇಶದ ಆರ್ಥಿಕ ಪ್ರಗತಿಗೆ ಭದ್ರ ಬುನಾದಿಯಾಗಿರುವ ಜಿಎಸ್‌ಟಿ ಜಾರಿಯಾಗಿ 9 ವರ್ಷಗಳಾಗಿದ್ದು, ನಕಲಿ ಜಿಎಸ್‌ಟಿ ಖಾತೆಗಳನ್ನು ತಡೆಯಲು ಲೆಕ್ಕ ಪರಿಶೋಧಕರು, ತೆರಿಗೆ ಪಾವತಿದಾರರು ಮಾಹಿತಿ ನೀಡಬೇಕು ಎಂದು ಜಿಎಸ್‌ಟಿ ಚಾ.ನಗರ ವಿಭಾಗದ ಸಹಾಯಕ ಆಯುಕ್ತ ಟಿ.ಜಿ. ಸುರೇಶ್ ತಿಳಿಸಿದರು.

ನಗರದ ಭುಂಜಗೇಶ್ವರ ಬಡಾವಣೆಯಲ್ಲಿರುವ ಚಾ.ನಗರ ಜಿಎಸ್‌ಟಿ ಕಚೇರಿಯಲ್ಲಿ ಜಿಎಸ್‌ಟಿ ಜಾರಿ ದಿನದ ಅಂಗವಾಗಿ ಏರ್ಪಡಿಸಿದ್ದ ಜಿಎಸ್‌ಟಿ ತೆರಿಗೆ ಪಾವತಿದಾರರು ಹಾಗೂ ಲೆಕ್ಕಪರಿಶೋಧಕರಿಗೆ ಒಂದು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜಿಎಸ್‌ಟಿ ಜಾರಿಯಾಗಿ ಜು. 1ಕ್ಕೆ ಹತ್ತನೇ ವರ್ಷಕ್ಕೆ ಕಾಲಿಟ್ಟಿದ್ದು, ದೇಶದ ಅಭಿವೃದ್ಧಿಗೆ ಉತ್ತಮ ಯೋಜನೆಯಾಗಿದೆ. ತೆರಿಗೆಯ ಸೋರಿಕೆಯನ್ನು ತಡೆಯಲು ಹಾಗೂ ದೇಶದ ಅಭಿವೃದ್ಧಿ ದೃಷ್ಟಿಯಿಂದ ಜಿಎಸ್‌ಟಿಯನ್ನು ಜಾರಿ ಮಾಡಲಾಯಿತು. ಪ್ರತಿಯೊಬ್ಬರು ತೆರಿಗೆದಾರರು ಕಟ್ಟುವ ಹಣವು ನೇರವಾಗಿ ದೇಶದ ಅಭಿವೃದಿಗೆ ವಿನಿಯೋಗವಾಗುತ್ತಿದೆ. ಇದರ ಮಧ್ಯೆ ತೆರಿಗೆಯನ್ನು ವಂಚಿಸುವವರು ಇರುತ್ತಾರೆ. ಇಂಥವರನ್ನು ಪತ್ತೆ ಮಾಡಲು ಇಲಾಖೆಯೊಂದಿಗೆ ತಾವುಗಳು ಸಹ ಹೆಚ್ಚಿನ ಸಹಕಾರ ನೀಡಬೇಕು ಎಂದರು.




ಫೇಕ್ ಜಿಎಸ್‌ಟಿ ಖಾತೆಗಳ ಬಗ್ಗೆ ಲೆಕ್ಕಪರಿಶೋಧಕರು ನಿಗಾ ವಹಿಸಬೇಕು. ಇಂಥವರ ಬಗ್ಗೆ ಎಚ್ಚರಿಕೆ ವಹಿಸಿ, ಜಿಎಸ್‌ಟಿ ವಂಚಿಸುತ್ತಿರುವ ಜಾಲದ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದರೆ ಅಂಥವರ ಹೆಸರನ್ನು ಗೌಪ್ಯವಾಗಿಡುವ ಜೊತೆಗೆ ಬಹುಮಾನವನ್ನು ನೀಡುತ್ತೇವೆ. ಇದರಿಂದ ತೆರಿಗೆ ಕಡಿತವಾಗುವುದು ತಪ್ಪುತ್ತದೆ. ಸಾರ್ವಜನಿಕರು ಮತ್ತು ತೆರಿಗೆದಾರರು ಜಾಗೃತರಾಗಬೇಕು. ನಕಲಿ ಜಿಎಸ್‌ಟಿ ಖಾತೆ ಹೊಂದಿ ತೆರಿಗೆ ವಂಚನೆ ಮಾಡುವವರನ್ನು ಇಲಾಖೆಯು ಪತ್ತೆ ಮಾಡುತ್ತದೆ. ಆದರೆ, ಕೆಲವು ಹಂತಗಳು ಮೀರಿದರೆ ಸರ್ಕಾರ ಮತ್ತು ಸಾರ್ವಜನಿಕರಿಗೆ ನಷ್ಟವಾಗುತ್ತದೆ. ಹೀಗಾಗಿ ಇಂಥವರ ಬಗ್ಗೆ ಎಚ್ಚರಿಕೆ ವಹಿಸಿ ಎಂದು ಸುರೇಶ್ ತಿಳಿಸಿದರು.

ಚಾಮರಾಜನಗರ ಜಿಲ್ಲಾ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷ ಸಿ.ಎಂ. ವೆಂಕಟೇಶ್ ಮಾತನಾಡಿ, ಲೆಕ್ಕ ಪರಿಶೋಧಕರಾದ ನಾವುಗಳು ಸಹ ಜಿಎಸ್‌ಟಿ ಬಗ್ಗೆ ತೆರಿಗೆದಾರರು ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸೋಣ. ಫೇಕ್ ಖಾತೆಗಳು ಬಂದಾಗ ಎಚ್‌ರಿಕೆ ವಹಿಸಿ, ದೇಶಕ್ಕಾಗಿ ಇಂಥವರಿಗೆ ಶಿಕ್ಷೆಯಾಗಬೇಕು. ತೆರಿಗೆ ವಂಚನೆ ಜಾಲ ಭಯೋತ್ಪಾದನೆಗಿಂತಲೂ ಹೆಚ್ಚು. ಹೀಗಾಗಿ ಇಂಥ ಫೇಕ್ ಜಿಎಸ್‌ಟಿ ಖಾತೆಗಳ ಬಗ್ಗೆ ಗಮನಕ್ಕೆ ಬಂದಾಗಲೇ ಎಚ್ಚರಿಕೆಯಿಂದ ಮುಂದುವರಿಯೋಣ. ಜಿಎಸ್‌ಟಿ ಅಧಿಕಾರಿಗಳ ಸಲಹೆ, ಮಾರ್ಗದರ್ಶನವನ್ನು ಪಾಲನೆ ಮಾಡೋಣ ಎಂದರು.

ಬಳಿಕ ನಡೆದ ಸಂವಾದಲ್ಲಿ ಜಿಎಸ್‌ಟಿಯನ್ನು ಇನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಸಾರ್ವಜನಿಕರು ಸಹ ಇದರ ಬಗ್ಗೆ ಅರಿವು ಮೂಡಬೇಕು. ಜಿಎಸ್‌ಟಿ ಎಂದರೆ ತೆರಿಗೆ ಕಟ್ಟುವರರಿಗೆ ಶ್ರೀಮಂತರು, ವ್ಯಾಪಾರಸ್ಥರಿಗೆ ಮಾತ್ರ ಎಂಬ ಭಾವನೆ ಇದೆ. ಹೀಗಾಗಿ ಕೂಲಿ ಕಾರ್ಮಿಕರು ಸಹ ಜಿಎಸ್‌ಟಿ ಬಗ್ಗೆ ಮನವರಿಕೆಯಾದಾಗ ಇಂಥ ನಕಲಿ ಜಿಎಸ್‌ಟಿ ಖಾತೆಗಳನ್ನು ತಡೆಯಲು ಸಾಧ್ಯವಿದೆ ಎಂಬ ಅಭಿಪ್ರಾಯ ತಿಳಿಸಿದರು.

ಜಿಎಸ್‌ಟಿ ಅಧೀಕ್ಷಕ ಪ್ರಸನ್ನಕುಮಾರ್ ಕುನಾಲ್. ನಿರೀಕ್ಷಕ ಜಗದೀಶ್ ಎಸ್. ಅರ್ಜುನ್, ಲೆಕ್ಕ ಪರಿಶೋಧಕರಾದ ಕೊಳ್ಳೇಗಾಲ ಪುಟ್ಟಮಾದಪ್ಪ, ಕಾರ್ಯದರ್ಶಿ ಮಂಜು, ಶ್ರೀಧರ್, ಮಣ ಕಂಠಸ್ವಾಮಿ, ಬಾಲು, ಶಿವರಾಜು, ರಂಗನಾಥ್, ಮನು, ಮಹೇಂದ್ರ, ಅಮೃತ್ ಕುಮಾರ್, ಸಂಪತ್ ಮೊದಲಾದವರು ಹಾಜರಿದ್ದರು.

## ಕಾರು ಮತ್ತು ಬೈಕ್ ನಡುವೆ ಡಿಕ್ಕಿ: ಬೈಕ್ ಸವಾರ ಸಾವು

ಗುಂಡ್ಲುಪೇಟೆ :–ರಾಷ್ಟ್ರೀಯ ಹೆದ್ದಾರಿ ವೀರನಪುರ ಕ್ರಾಸ್ ಬಳಿ ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಶುಕ್ರವಾರ ಬೆಳಿಗ್ಗೆ 8:30ರ ಸಮಯದಲ್ಲಿ ನಡೆದಿದೆ.



ತಾಲೂಕಿನ ವೀರನಪುರ ಗ್ರಾಮದ ಹೂನ್ನಪ್ಪ ನವರ ಮಗನಾದ ಮಹದೇವಪ್ಪ (60) ಮೃತ ವ್ಯಕ್ತಿ. ಗುಂಡ್ಲುಪೇಟೆ ಕಡೆಯಿಂದ ವೀರನಪುರ ಕಡೆ ಕ್ರಾಸ್ ತಿರುಗುವಾಗ ಮೈಸೂರು ಕಡೆಯಿಂದ ಬರುತ್ತಿದ್ದ ಮಹಾರಾಷ್ಟ್ರ ಮೂಲದ ಕಾರಿಗೆ ಡಿಕ್ಕಿ ಯಾಗಿ ಮಹದೇವಪ್ಪ ಎಂಬ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಮಾಹಿತಿ ತಿಳಿದ ಪಟ್ಟಣ ಪೋಲಿಸರು ಸ್ಥಳ ಪರಿಶೀಲನೆ ನಡೆಸಿ ಮೃತ ದೇಹವನ್ನು ತಾಲೂಕು ಸಾರ್ವಜನಿಕ ಆಸ್ಪತ್ರೆಯಾಗಿ ಶವ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಒಪ್ಪಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ

# ಕಸುಬಿಗೆ ತಕ್ಕ ಪೇಟೆ ಕಟ್ಟಿದ ಕೆಂಪೇಗೌಡರು: ಗಂಗಾಧರ್



ಮೈಸೂರು: ಕೆಂಪೇಗೌಡರು ಆಗಿನ ಕಾಲದಲ್ಲಿಯೇ ಎಲ್ಲಾ ವರ್ಗದ ಜನರಿಗೆ , ಅವರವರು ಮಾಡುವ ಕಸುಬುಗಳಿಗೆ ತಕ್ಕಂತೆ ಪೇಟೆಗಳನ್ನು ನಿರ್ಮಿಸಿ ಸಮಾನತೆ ತಂದಿದ್ದರು ಎಂದು ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್ ತಿಳಿಸಿದರು.

ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಸೇನಾ ಪಡೆವತಿಯಿಂದ ನಾಡಪ್ರಭು ಶ್ರೀ ಕೆಂಪೇಗೌಡರ 517 ನೇ ಜಯಂತಿಯನ್ನು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಕೆಂಪೇಗೌಡರ ಕೊಡುಗೆ ರಾಜ್ಯಕ್ಕೆ ದೇಶಕ್ಕೆ ಅಪಾರ. ಬಳೆ ಪೇಟೆ, ಕಾಟನ್ ಪೇಟೆ, ಚಿಕ್ಕಪೇಟೆ, ದೊಡ್ಡಪೇಟೆ, ಅಕ್ಕಿಪೇಟೆ, ಮುಸ್ಲಿಮರಿಗೆ ಸುಲ್ತಾನ್ ಪೇಟೆಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಎಲ್ಲಾ ಸಮುದಾಯವರಿಗೂ ಸುಮಾರು 64 ಕ್ಕೂ ಹೆಚ್ಚು ಪೇಟೆಗಳನ್ನು ನಿರ್ಮಿಸಿ ಕೊಟ್ಟರು. ಈಗ ನಾವೆಲ್ಲ ಕೆಂಪೇಗೌಡರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಜನರ, ಬಡವರ ಪರವಾಗಿ ಕೆಲಸ ಮಾಡಬೇಕು ಎಂದರು.

ನಂತರ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ ನಮ್ಮ ರಾಜ್ಯ ದೇಶವನ್ನಾಗಿದ ಹಲವಾರು ನಾಯಕರುಗಳಲ್ಲಿ ಮಹಾರಾಜರುಗಳು, ಸುಲ್ತಾನರು, ಮೊಘಲರು ಇವರೆಲ್ಲರುಗಳಲ್ಲಿ ಅತ್ಯಂತ ಕ್ರಿಯಾಶೀಲ ವ್ಯಕ್ತಿತ್ವವುಳ್ಳ, ಜನಪರ ಕಾಳಜಿ ಉಳ್ಳ ಮಹಾನ್ ವ್ಯಕ್ತಿ ನಾಡಪ್ರಭು ಕೆಂಪೇಗೌಡರು. ಎಲ್ಲಾ ವರ್ಗದವರನ್ನು ಸಮನಾಗಿ ಕಂಡು ಬೆಂಗಳೂರು ಸುತ್ತಮುತ್ತ ಸಾವಿರಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದರು. ಇಂತಹ ಮಹನೀಯರನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ನೆರೆದಿದ್ದವರಿಗೆ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಜಿ.ಮಂಜೇಗೌಡ ಸಿಹಿ ವಿತರಣೆಯನ್ನು ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಮಾಜ ಸೇವಕ ಡಾ.ರಘುರಾಂ ಕೆ.ವಾಜಪೇಯಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲಕ್ಷ್ಮೀ ದೇವಿ, ಲತ ರಂಗನಾಥ, ಮಂಜುಳಾ, ಚೇತನ್, ಹನುಮಂತಯ್ಯ, ನೇಹಾ., ಬೋಗಾದಿ ಸಿದ್ದೇಗೌಡ, ವನಜಾಕ್ಷಿ, ಕೃಷ್ಣಪ್ಪ, ಶಿವಲಿಂಗಯ್ಯ, ಸುಶೀಲ ನಂಜಪ್ಪ, ದರ್ಶನ್ ಗೌಡ, ಪ್ರದೀಪ್, ಕೃಷ್ಣೇಗೌಡ , ಕುಮಾರ್, ದರ್ಶನ್ ಗೌಡ, ನಂದಕುಮಾರ್, ಗಣೇಶ್ ಪ್ರಸಾದ್, ಪ್ರಭಾಕರ ಇನ್ನಿತರರು ಉಪಸ್ಥಿತರಿದ್ದರು.

# ಕಾಲಾವಧಿಯೊಳಗೆ ಇ-ಖಾತೆ ವಿತರಣೆ



ರಾಮನಗರ: ನಿಗದಿತ ಕಾಲಾವಧಿಯೊಳಗೆ ಇ-ಖಾತೆಗಳನ್ನು ವಿತರಿಸುತ್ತಿದ್ದೇವೆ ಎ. ಕೆಲವೊಮ್ಮೆ ದಾಖಲಾತಿಗಳ ಕೊರತೆಯಿಂದಾಗಿ ವಿಳಂಬವಾಗಿರಬಹುದು, ಇದ್ವರೆಗೆ 18 ಸಾವಿರಕ್ಕೂ ಅಧಿಕ ಸ್ವತ್ತಿನ ಮಾಲೀಕರಿಗೆ ಇ ಖಾತೆ ವಿತರಣೆ ಮಾಡಲಾಗಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ) ಹೇಳಿದರು.

27ನೇ ಇ - ಖಾತಾ ಆಂದೋಲನದ ಭಾಗವಾಗಿ ಸ್ವತ್ತಿನ ಮಾಲೀಕರಿಗೆ ನಗರಸಭೆಯ ಸಭಾಂಗಣದಲ್ಲಿ ಇ ಖಾತೆ ವಿತರಿಸಿ ಅವರು ಮಾತನಾಡಿದರು. ನಿಗದಿತ ಕಾಲಾವಧಿಯೊಳಗೆ ಇ ಖಾತೆಗಳನ್ನು ಪ್ರಾಮಾಣಿಕವಾಗಿ ವಿತರಣೆ ಮಾಡಿದ್ದೇವೆ ಎಂದರು. ಆಸ್ತಿ ಮಾಲೀಕರು ಕಂದಾಯ ಪಾವತಿ ಮಾಡದಿರುವುದು ಸಹ ವಿಳಂಬಕ್ಕೆ ಕಾರಣವಾಗಿರಬಹುದು ಎಂದರು. ಕಂದಾಯ ಅಧಿಕಾರಿಗಳು, ಆಡಳಿತ ಸಿಬ್ಬಂದಿ ಇ ಖಾತೆ ವಿತರಿಸಿ ಗುರಿಯತ್ತ ಸಾಗಲು ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.

ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಕಸ ವಿಲೇವಾರಿ ಘಟಕ ನಿರ್ಮಾಣ ಅಂತಿಮ ಹಂತ ತಲುಪಿದ್ದು, ನಗರದ ತ್ಯಾಜ್ಯವನ್ನು ಅಲ್ಲಿಗೆ ವಿಲೇವಾರಿ ಮಾಡಲು ಕ್ರಮ ವಹಿಸಲಾಗುವುದು ಎಂದು ಹೇಳಿದರು. ನಗರದಲ್ಲಿ ಎಲ್ಲೆಂದರಲ್ಲಿ ಕಸ ವಿಲೇವಾರಿ ಮಾಡದಂತೆ ಸಾಕಷ್ಟು ಜಾಗೃತಿ ಮೂಡಿಸಲಾಗಿದೆ. ಬ್ಲಾಕ್ ಸ್ಪಾಟ್ ಗಳನ್ನು ಗುರುತಿಸಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಕಸದ ಜಾಗಗಳನ್ನು ವೇಸ್ಟ್ ಟೂ ಪಾರ್ಕ್ ಗಳಾಗಿ ಸೌಂದರ್ಯೀಕರಣ ಮಾಡಲಾಗಿದೆ. ಆದರೂ ಎಚ್ಚೆತ್ತುಕೊಳ್ಳದ ನಾಗರೀಕರು ರಾತ್ರಿ ವೇಳೆ ಎಲ್ಲೆಂದರಲ್ಲಿ ಕಸ ವಿಲೇವಾರಿ ಮಾಡುತ್ತಿದ್ದಾರೆ. ಅದರಲ್ಲೂ ವಿದ್ಯಾವಂತರೆ ಹೆಚ್ಚಾಗಿ ಕಸವನ್ನು ರಸ್ತೆ ಬದಿಯಲ್ಲಿ ಎಸೆದು ಹೋಗುತ್ತಿರುವುದು ಗಮನಕ್ಕೆ ಬಂದಿದೆ. ಇನ್ನಾದರೂ ಜನರು ಎಚ್ಚೆತ್ತುಕೊಂಡು ಕಸವನ್ನು ನಗರಸಭೆ ವಾಹನಗಳಿಗೆ ನೀಡಬೇಕು. ದಂಡ ವಿಧಿಸಲು ಅವಕಾಶ ನೀಡಬಾರದು. ಸುಂದರ ನಗರ ನಿರ್ಮಾಣಕ್ಕೆ ಎಲ್ಲ ನಾಗರೀಕರು ಕೈ ಜೋಡಿಸಬೇಕು ಎಂದು ಕೆ.ಶೇಷಾದ್ರಿ ಮನವಿ ಮಾಡಿದರು. ನಗರಸಭೆ ಸದಸ್ಯರಾದ ಮಂಜುನಾಥ್, ಮೋಯಿನ್ ಖುರೇಷಿ, ಆಯುಕ್ತ ಜಯಣ್ಣ ಇದ್ದರು.

## 'ಉತ್ತಮ ಸೇವಕ ಸನ್ಮಾನ' ಕಾರ್ಯಕ್ರಮ



ಹನೂರು: ತಾಲೂಕಿನ ರಾಮಪುರ ಜೆಎಸ್ಎಸ್ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ, ಹನೂರು ಉಪ ವಿಭಾಗದ ಚೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಂಗಸ್ವಾಮಿ ಅವರ ನಿರಂತರ ಸಾರ್ವಜನಿಕ ಸೇವೆ ಮತ್ತು ಕರ್ತವ್ಯ ನಿಷ್ಠೆಯನ್ನು ಗುರುತಿಸಿ 'ಉತ್ತಮ ಸೇವಕ ಸನ್ಮಾನ' ನೀಡಿ ಗೌರವಿಸಲಾಯಿತು.

ರಾಮಾಪುರ ಹೋಬಳಿ ಕೇಂದ್ರದಲ್ಲಿ ನಡೆದ ಜಗಜ್ಯೋತಿ ಬಸವೇಶ್ವರರ ಜಯಂತಿ ಮಹೋತ್ಸವದ ವೇದಿಕೆಯಲ್ಲಿ ಪ್ರಮುಖ ಗಣ್ಯರು ಹಾಗೂ ವಿವಿಧ ಮಠಾಧೀಶರ ದಿವ್ಯ ಸಾನಿಧ್ಯದಲ್ಲಿ ಈ ಗೌರವ ಸಮರ್ಪಣೆ ನಡೆಯಿತು. ರಂಗಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

### ಸೇವೆಯನ್ನು ಶ್ಲಾಘಿಸಿದ ಗಣ್ಯರು

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯ ಅತಿಥಿಗಳು ಹಾಗೂ ಗಣ್ಯರು, "ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವಕ್ಕೆ ಪ್ರಸ್ತುತ ದಿನಗಳಲ್ಲಿ ಅಧಿಕಾರಿಯಾಗಿ ಮಾದರಿಯಾಗಿದ್ದಾರೆ . ಹನೂರು ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕದ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುತ್ತಾ, ಸಾರ್ವಜನಿಕರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವ ಮೂಲಕ, ಕಳೆದ 10 ವರ್ಷಗಳಿಂದಲೂ ಕರ್ತವ್ಯ ನಿರ್ವಹಿಸುತ್ತಿದ್ದು ಯಾವುದೇ ಆರೋಪಗಳಿಲ್ಲದೆ, ಇಲಾಖೆಯ ಕರ್ತವ್ಯದ ಜೊತೆಗೆ ಸಮಾಜ ಸೇವೆಗಳನ್ನು ಮಾಡುತ್ತಾ ಬರುತ್ತಿದ್ದು ಹಲವು ಸರ್ಕಾರಿ ಶಾಲೆಗಳಿಗೆ ಲ್ಯಾಪ್ಟಾಪ್, ಸ್ಮಾರ್ಟ್ ಟಿವಿ, ಸಮವಸ್ತ್ರ ಇತ್ಯಾದಿ ನೀಡುತ್ತಾ ಬಂದಿರುವುದಲ್ಲದೆ, ಹಲವು ಮಕ್ಕಳಿಗೆ ಶಾಲಾ ಶುಲ್ಕವನ್ನು ನೀಡುತ್ತಾ ಬಂದಿರುತ್ತಾರೆ. ಹಲವಾರು ಅನಾಥಶ್ರಮಗಳಿಗೆ ದವಸಧಾನ್ಯಗಳು, ಅಗತ್ಯ ವಸ್ತುಗಳನ್ನು ನೀಡುತ್ತಾ ಬಂದಿರುತ್ತಾರೆ. ಅಧಿಕಾರಿ ರಂಗಸ್ವಾಮಿ ಅವರು ಮಾದರಿ ಸೇವೆ ಸಲ್ಲಿಸುತ್ತಿದ್ದಾರೆ. ರೈತರು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಹಗಲಿರುಳು ಶ್ರಮಿಸುವ ಇಂತಹ ಪ್ರಾಮಾಣಿಕ ಅಧಿಕಾರಿಗಳಿಗೆ ಈ ಪ್ರಶಸ್ತಿ ಸಂದಿರುವುದು ಅತ್ಯಂತ ಸೂಕ್ತವಾಗಿದೆ" ಎಂದು ಶ್ಲಾಘಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಂಗಸ್ವಾಮಿ ಅವರು, "ವಿಶ್ವಗುರು ಬಸವಣ್ಣನವರ ಜಯಂತಿಯ ಪವಿತ್ರ ದಿನದಂದು ಈ ಗೌರವ ಸಿಕ್ಕಿರುವುದು ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಸಾರ್ವಜನಿಕರ (ಜನರ) ಸೇವೆಯೇ ಜನಾರ್ದನನ ಸೇವೆ ಎಂದು ಭಾವಿಸಿ ಕೆಲಸ ಮಾಡುತ್ತಿದ್ದೇನೆ. ನನ್ನ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಹನೂರು ತಾಲ್ಲೂಕಿನ ಸಾರ್ವಜನಿಕರ ಸಹಕಾರದಿಂದ ಈ ಉತ್ತಮ ಸೇವೆ ನೀಡಲು ಸಾಧ್ಯವಾಗಿದೆ. ಈ ಗೌರವವನ್ನು ನನ್ನ ಚೆಸ್ಕಾಂ ಇಲಾಖೆಗೆ ಅರ್ಪಿಸುತ್ತೇನೆ" ಎಂದು ಭಾವನಾತ್ಮಕವಾಗಿ ನುಡಿದರು. ಈ ಸಂದರ್ಭದಲ್ಲಿ ರಾ.ಅ.ಭಾ.ವೀ.ಲಿಂ.ಮ.ಅಧ್ಯಕ್ಷರಾದ ಶಂಕರ್ ಬಿದರಿ ಬೆಂಗಳೂರು,ರಾಷ್ಟ್ರಧ್ಯಕ್ಷರು ಅ.ಭಾ.ವೀ.ಲಿ.ಮಹಿಳಾ ಕಾಂಗ್ರೆಸ್ ಬಾಗಲಕೋಟೆ. ವೀಣಾ ಕಾಷಪ್ಪನವರ್, ಶಾಸಕರಾದ ಎಂ ಆರ್ ಮಂಜುನಾಥ್ ಮಾಜಿ ಶಾಸಕಿ , ಪರಿಮಳನಾಗಪ್ಪ , ಬಿಜೆಪಿ ಮುಖಂಡರಾದ ಡಾ.ದತ್ತೇಶ್ ಕುಮಾರ್ , ಯುವ ಮುಖಂಡ ಸಮಾಜ ಸೇವಕ ನಿಶಾಂತ್, ಅ.ಭಾ.ವಿ.ಲಿಂ.ಮಹಾಸಭೆಯ ಜಿಲ್ಲಾಧ್ಯಕ್ಷರು, ತಾಲೂಕು ಅಧ್ಯಕ್ಷರು, ತಾಲ್ಲೂಕು ಮಟ್ಟದ ಪ್ರಮುಖ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಪ್ರಮುಖ ಅಧಿಕಾರಿಗಳು, ವಿವಿಧ ಮಠಾದೀಶ ಸ್ವಾಮೀಜಿ ರವರು ಉಪಸ್ಥಿತರಿದ್ದರು .

## ವ್ಯಕ್ತಿ ಕಾಣೆ : ಸುಳಿವಿಗೆ ಸಹಕರಿಸಿ

ಚಾಮರಾಜನಗರ, ತಾಲೂಕಿನ ಕೆಲಸೂರು ಗ್ರಾಮದ ನಿವಾಸಿ ಮಂಜುನಾಥ ಎಂಬುವವರು ಕಾಣೆಯಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ.

42 ವರ್ಷದ ಮಂಜುನಾಥ, ಸಾಧಾರಣ ಶರೀರ, ಎಣ್ಣೆಗೆಂಪು ಮೈಬಣ್ಣ, ದುಂಡು ಮುಖ ಹೊಂದಿದ್ದು, ಎಡಗೈನಲ್ಲಿ ರಾಜಮ್ಮ ಎಂಬ ಹಚ್ಚೆ ಇರುತ್ತದೆ. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದರು. ಇವರ ಸುಳಿವು ದೊರೆತಲ್ಲಿ ತೆರಕಣಾಂಬಿ ಪೊಲೀಸ್ ಠಾಣೆ 9480804652, ಚಾಮರಾಜನಗರ ಜಿಲ್ಲಾ ನಿಸ್ತಂತು ಕೊಠಡಿ 08226-222383 ಸಂಪರ್ಕಿಸುವಂತೆ ತೆರಕಣಾಂಬಿ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ತಿಳಿಸಿದ್ದಾರೆ.

# ಡ್ರಗ್ಸ್ ಜಾಲ ಭೇದಿಸಲು ಎಸ್ಪಿ ಕರೆ

## ಮಾದಕ ವಸ್ತುಗಳ ಬಗ್ಗೆ ಮಾಹಿತಿ ನೀಡುವವರ ವಿವರ ಗೌಪ್ಯದ ಭರವಸೆ

## ಸಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಜಾಗೃತಿ ಮೂಡಿಸಿದ ಎಂ.ಮುತ್ತುರಾಜು

ಚಾಮರಾಜನಗರ: ಮಾದಕ ವಸ್ತುಗಳ ಸೇವನೆ, ಮಾರಾಟ ಹಾಗೂ ಸಾಗಾಣಿಕೆ ಮಾಡುವುದು ಕಾನೂನಿನ ಪ್ರಕಾರ ಗಂಭೀರ ಶಿಕ್ಷಾರ್ಹ ಅಪರಾಧವಾಗಿದೆ. ಇಂತಹ ಅಕ್ರಮ ಚಟುವಟಿಕೆಗಳು ಸಾರ್ವಜನಿಕರ ಅಥವಾ ವಿದ್ಯಾರ್ಥಿಗಳ ಗಮನಕ್ಕೆ ಬಂದರೆ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು. ಮಾಹಿತಿ ನೀಡಿದವರ ವಿವರಗಳನ್ನು ಅತ್ಯಂತ ಗೌಪ್ಯವಾಗಿಟ್ಟು ಈ ಮಾದಕ ಜಾಲವನ್ನು ಬೇರುಸಹಿತ ಭೇದಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ತಿಳಿಸಿದರು.



ನಗರದ ಹೊರವಲಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನ (ಸಿಮ್ಸ್) ಸೆಮಿನಾರ್ ಹಾಲ್ನಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಮಾದಕ ವ್ಯಸನ ತಡೆ ದಿನಾಚರಣೆ ಅಂಗವಾಗಿ ನಡೆದ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಸ್ನೇಹರಾಜ್, ಗ್ರಾಮಾಂತರ ಪೊಲೀಸ್ ಇನ್ಸ್ಪೆಕ್ಟರ್ ಶೇಷಾದ್ರಿ, ವೈದ್ಯಕೀಯ ಕಾಲೇಜಿನ ಅಧೀಕ್ಷಕ ಡಾ. ಮಾರುತಿ, ಡಾ. ಗಿರೀಶ್ ಪಾಟೀಲ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಭ್ರಮೆ ಹುಟ್ಟಿಸುವ ಡ್ರಗ್ಸ್ ಜಾಲ ಮತ್ತು ವಿದ್ಯಾರ್ಥಿಗಳು

ಇತ್ತೀಚಿನ ದಿನಗಳಲ್ಲಿ ಯುವಜನತೆಯಲ್ಲಿ ಡ್ರಗ್ಸ್ ಸೇವನೆ ಮಾಡುವುದು ಒಂದು ರೀತಿಯ ಫ್ಯಾಷನ್ ಆಗಿ ಮಾರ್ಪಡುತ್ತಿರುವುದು ಕಳವಳಕಾರಿ ಸಂಗತಿ ಯಾಗಿದೆ ಎಂದು ಎಸ್ಪಿ ಆತಂಕ ವ್ಯಕ್ತಪಡಿಸಿದರು. ಡ್ರಗ್ಸ್ ಹಾಗೂ ಸಿಂಥೆಟಿಕ್ ಮಾದಕ ವಸ್ತುಗಳನ್ನು ಸೇವಿಸಿದಾಗ ಆರಂಭದಲ್ಲಿ ತಾತ್ಕಾಲಿಕ ಖುಷಿ, ಉಲ್ಲಾಸ ಮತ್ತು ಭ್ರಮೆ ಮೂಡುತ್ತದೆ. ಇದೇ ಸುಳ್ಳು ಸಂತೋಷ ದಲ್ಲಿ ತೇಲುವ ಯುವಕರು ಕ್ರಮೇಣ ಅದಕ್ಕೆ ದಾಸ ರಾಗಿ ತೀವ್ರ ವ್ಯಸನಿಗಳಾಗುತ್ತಾರೆ. ಬಳಿಕ ಮಾದಕ ವಸ್ತುಗಳಿಲ್ಲದೆ ಬದುಕುವುದೇ ಅಸಾಧ್ಯ ಎನ್ನುವ ಮಟ್ಟಿಗೆ ದೇಹ ಹಾಗೂ ಮಾನಸಿಕ ಆರೋಗ್ಯದ ಮೇಲೆ ಇದು ಗಂಭೀರ ದುಷ್ಪರಿಣಾಮ ಬೀರುತ್ತದೆ. ದುರಂತವೆಂ ದರೆ, ಇಂದಿನ ದಿನಗಳಲ್ಲಿ ಸುಶಿಕ್ಷಿತರೇ ಇಂತಹ ದಂಧೆಗೆ ಹೆಚ್ಚು ಆಕರ್ಷಿತರಾಗುತ್ತಿದ್ದು, ವೈದ್ಯಕೀಯ ಮತ್ತು ಎಂಜಿನಿಯರಿಂಗ್ನಂತಹ ವೃತ್ತಿಪರ ಕೋರ್ಸ್ಗಳ ವಿದ್ಯಾರ್ಥಿಗಳು ಈ ಜಾಲಕ್ಕೆ ಸಿಲುಕುತ್ತಿದ್ದಾರೆ. ಕೆಲವು ಹಿರಿಯ ವಿದ್ಯಾರ್ಥಿಗಳು ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳುವ ನೆಪದಲ್ಲಿ ಚರಸ್, ಬ್ರೌನ್ ಶುಗರ್ನಂ ತಹ ಮಾದಕ ವಸ್ತುಗಳನ್ನು ತೆಗೆದುಕೊಳ್ಳುತ್ತಾ, ಕಿರಿಯ ವಿದ್ಯಾರ್ಥಿಗಳನ್ನೂ ಇದಕ್ಕೆ ಪ್ರೇರೇಪಿಸುತ್ತಿ ದ್ದಾರೆ. ಇಂತಹವರ ಬಗ್ಗೆ ತೀವ್ರ ಎಚ್ಚರ ವಹಿಸಬೇಕು ಹಾಗೂ ವ್ಯಸನಕ್ಕೆ ಒಳಗಾದವರನ್ನು ಪೋಷಕರ ಮತ್ತು ಪೊಲೀಸರ ನೆರವಿನಿಂದ ಸನ್ಮಾರ್ಗಕ್ಕೆ ತರಲು ಪ್ರಯತ್ನಿಸಬೇಕು ಎಂದು ಅವರು ಕರೆ ನೀಡಿದರು.

### ಕ್ಯಾಂಪಸ್ ಡ್ರಗ್ಸ್ ಮುಕವಾಗಿಸಲು ಸಂಕಲ್ಪ

ಈ ಮಾದಕ ಜಾಲವನ್ನು ಸಂಪೂರ್ಣವಾಗಿ ಕಿತ್ತುಹಾಕಿ ಇಡೀ ಕಾಲೇಜು ಆವರಣವನ್ನು ಡ್ರಗ್ಸ್ ಮುಕ್ತ ವಲಯವನ್ನಾಗಿ ಘೋಷಿಸಲು ವಿದ್ಯಾರ್ಥಿಗಳ ಸಹಕಾರ ಅತ್ಯಗತ್ಯವಾಗಿದೆ. ದೇಶದ ಅಭಿವೃದ್ಧಿಗೆ ಯುವಜನಾಂಗದ ಆರೋಗ್ಯ ಮತ್ತು ಸದೃಢತೆ ಮುಖ್ಯವಾಗಿರುವುದರಿಂದ ಯಾವುದೇ ಭಯವಿಲ್ಲದೆ ಮಾಹಿತಿಯನ್ನು ಹಂಚಿಕೊಳ್ಳಬೇಕು ಎಂದು ಎಸ್ಪಿ ಮನವಿ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಟಿ. ಅಜಯ್ ಮಾತನಾಡಿ, ಪ್ರಥಮ ವರ್ಷದ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ಬಂದಿರುವ ವಿದ್ಯಾರ್ಥಿಗಳು ಮುಂದಿನ ನಾಲ್ಕು ವರ್ಷಗಳ ಕಾಲ ಇದೇ ಕ್ಯಾಂಪಸ್ನಲ್ಲಿ ಇರಲಿದ್ದಾರೆ. ಆದ್ದರಿಂದ ಸುತ್ತಮುತ್ತ ಇಂತಹ ಅಕ್ರಮ ದಂಧೆಗಳು ಕಂಡುಬಂದಲ್ಲಿ ತಕ್ಷಣವೇ ಇಲಾಖೆಯ ಗಮನಕ್ಕೆ ತಂದು ಇಡೀ ಕಾಲೇಜನ್ನು ಮಾದಕ ಮುಕ್ತವಾಗಿಸಲು ಕೈಜೋಡಿಸಬೇಕು ಎಂದರು.

# ಇಲಾಖೆ ಬೋನಿನಲ್ಲಿ ಚಿರತೆ ಸೆರೆ

ಗುಂಡ್ಲುಪೇಟೆ: ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಕುಂದಕೆರೆ ವಲಯದ ಚಿರಕನಹಳ್ಳಿ ಗ್ರಾಮದಲ್ಲಿ ಪೋತರಾಜು ಎಂಬುವವರ ಜಮೀನಿನಲ್ಲಿ ಅರಣ್ಯ ಇಲಾಖೆ ಅಳವಡಿಸಿದ್ದ ಬೋನಿಗೆ ಸುಮಾರು ಹತ್ತು ವರ್ಷದ ಹುಲಿಯೊಂದು ಸೆರೆಯಾಗಿರುವ ಘಟನೆ ನಡೆದಿದೆ.

ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಹುಲಿ ಸಂಚಾರ ಕಂಡುಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಬೋನು ಅಳವಡಿಸಿತ್ತು. ಹುಲಿ ಬೋನಿಗೆ ಬಿದ್ದಿರುವ ವಿಷಯ ತಿಳಿದು ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಕಳೆದ ಹಲವು ದಿನಗಳಿಂದಲೂ ಹುಲಿ ದಾಳಿಯಿಂದಾಗಿ ಜಾನುವಾರುಗಳು ಬಲಿಯಾಗಿದ್ದು ಜನರಲ್ಲಿಯೂ ಆತಂಕ ಮೂಡಿಸಿತ್ತು ಜನರು ಜಮೀನುಗಳತ್ತ ಹೋಗಲು ಹಾಗೂ ಜಾನುವಾರುಗಳನ್ನು ಮೇಯಿಸಲು ತೆರಳಲು ಭಯ ಪಡುವಂತಹ ಸ್ಥಿತಿ ನಿರ್ಮಾಣವಾಗಿತ್ತು, ವಿಷಯ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹುಲಿಯ ಆರೋಗ್ಯ ತಪಾಸಣೆ ನಡೆಸಿದ ಬಳಿಕ ಮೇಲಾಧಿಕಾರಿಗಳ ಸೂಚನೆ ನಿಡಿದರೆ ಪುನರ್ವಸತಿ ಕೇಂದ್ರಕ್ಕೆ ಬಿಡುವುದ ಇಲ್ಲವೇ ಎಂಬ ಬಗ್ಗೆ ಚಿಂತಿಸಲಾಗುವುದು ಎಂದು ಕುಂದಕೆರೆ ಅರಣ್ಯ ವಲಯಾಧಿಕಾರಿ ನಾಗೇಂದ್ರ ನಾಯಕ್ ತಿಳಿಸಿದರು. ಹುಲಿ ಸೆರೆಯಿಂದಾಗಿ ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದು, ಅರಣ್ಯ ಇಲಾಖೆ ಸಾರ್ವಜನಿಕರು ಸ್ಥಳದಲ್ಲಿ ಅನಗತ್ಯವಾಗಿ ಗುಂಪುಗೂಡದಂತೆ ಹಾಗೂ ಸುರಕ್ಷತಾ ಸೂಚನೆಗಳನ್ನು ಪಾಲಿಸುವಂತೆ ಅರಣ್ಯಾಧಿಕಾರಿಗಳು ಸ್ಥಳೀಯರಿಗೆ ಮನವಿ ಮಾಡಿದರು.



# ಮಿತವಾಗಿ ನೀರು ಬಳಸಿ – ಕೆ.ಶೇಷಾದ್ರಿ ಕರೆ

## 24*7 ಕುಡಿಯುವ ನೀರು ಸರಬರಾಜು, 2 ವಾರ್ಡುಗಳಲ್ಲಿ ಪ್ರಾಯೋಗಿಕ ಕಾರ್ಯ ಯಶಸ್ವಿ

**ರಾಮನಗರ:** ದಿನದ 24 ಗಂಟೆಯೂ ಕಾವೇರಿ ನೀರು ಪೂರೈಸುವ ಕಾರ್ಯ ವಾರ್ಡ್ ಸಂಖ್ಯೆಗಳಾದ 25 ಮತ್ತು 27ರಲ್ಲಿ ಯಶಸ್ವಿಯಾಗಿದೆ. ಇದೀಗ ನಗರದ ಎಲ್ಲಾ ವಾರ್ಡುಗಳಿಗೂ ವಿಸ್ತರಿಸಲಾಗುವುದು ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರದ 25ನೇ ವಾರ್ಡಿನ ಮಂಜುನಾಥನಗರ ಮತ್ತು ಕೋಡಿಪುರದ ಮನೆಗಳಿಗೆ ಪ್ರಾಯೋಗಿಕವಾಗಿ ದಿನದ 24 ಗಂಟೆಯೂ ಕುಡಿಯುವ ನೀರು ಪೂರೈಸುತ್ತಿರುವ ಕಾರ್ಯವನ್ನು ಜಲಮಂಡಳಿ ಅಧಿಕಾರಿಗಳೊಂದಿಗೆ ಪರಿವೀಕ್ಷಣೆ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ರಾಮನಗರದ ಪ್ರತಿ ಮನೆಗೂ ದಿನದ 24 ಗಂಟೆ ನೀರು ಪೂರೈಸುತ್ತಿರುವುದು ರಾಜ್ಯದಲ್ಲಿಯೇ ವಿನೂತನ ಪ್ರಯೋಗವಾಗಿದ್ದು, ಅದು ಯಶಸ್ವಿಯಾಗಿದೆ ಎಂದರು. ನಗರದ 27 ನೇ ವಾರ್ಡಿನ ವ್ಯಾಪ್ತಿಗೆ ಬರುವ ವಿವೇಕಾನಂದ ನಗರ ಮತ್ತು ರಾಯರದೊಡ್ಡಿ ಬಡಾವಣೆಯಲ್ಲಿ ದಿನದ 24ಗಂಟೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿತ್ತು. ಅಲ್ಲಿ ಯಶಸ್ವಿಯಾದ ಬಳಿಕ 25ನೇ ವಾರ್ಡಿನ ಮಂಜುನಾಥನಗರ ಮತ್ತು ಕೋಡಿಪುರ ಬಡಾವಣೆಗಳಲ್ಲಿ ನಡೆಸಿದ ಪ್ರಾಯೋಗಿಕ ಪರೀಕ್ಷೆಯೂ ಯಶಸ್ವಿಯಾಗಿದೆ ಎಂದರು.

**ನೀರಿನ ಬಿಲ್ ಪಾವತಿಸುವುದು ಕಡ್ಡಾಯ:**

ನೆಟ್ಕಲ್ ಯೋಜನೆಗೆ ಸುಮಾರು 500 ಕೋಟಿ ರುಪಾಯಿಗಳಷ್ಟು ವೆಚ್ಚವಾಗಿದೆ. ನಾಗರೀಕರು ಮಿತವಾಗಿ ನೀರು ಬಳಸಬೇಕು. ಬೇರೆಡೆ ನೀರಿಗೆ ಹಾಹಾಕಾರ ಉಂಟಾಗುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನೀರು ಪೋಲಾಗುತ್ತಿದ್ದರೆ ಜಲಮಂಡಳಿ ಅಧಿಕಾರಿಗಳ ಗಮನಕ್ಕೆ ತರಬೇಕು. ಮಿತವಾಗಿ ನೀರು ಬಳಸಿ, ಕಡ್ಡಾಯವಾಗಿ ನೀರಿನ ಬಿಲ್ ಪಾವತಿಸಬೇಕು. ಆಗ ಮಾತ್ರ ಜಲಮಂಡಳಿ ನೀರು ಪೂರೈಸಲು ಸಾಧ್ಯವಾಗಲಿದೆ ಎಂದು ಶೇಷಾದ್ರಿ ಹೇಳಿದರು.



ಜಲ ಮಂಡಳಿ ಎಇಇ ಪುಟ್ಟಯ್ಯ ಮಾತನಾಡಿ, ಈ ಭಾಗದಲ್ಲಿ ಸುಮಾರು 2 ಸಾವಿರ ಮನೆಗಳಿದ್ದು, 1100 ಕೊಳಾಯಿ ಸಂಪರ್ಕಗಳಿದ್ದವು. ಇಲ್ಲಿಗೆ 40 ಲಕ್ಷ ಲೀಟರ್ ನೀರಿನ ಅವಶ್ಯಕತೆ ಇತ್ತು. ಆದರೀಗ ನೆಟ್ಕಲ್ ಯೋಜನೆ ಅನುಷ್ಠಾನಗೊಂಡು ಪ್ರತಿ ಮನೆಗೆ ಕೊಳಾಯಿ ಸಂಪರ್ಕ ಕಲ್ಪಿಸಿದ ಬಳಿಕ 20 ಲಕ್ಷ ಲೀಟರ್ ನೀರು ಸಾಕಾಗಿದೆ. ಪೋಲಾಗುತ್ತಿದ್ದ ಸುಮಾರು 20 ಲಕ್ಷ ಲೀಟರ್ ನೀರನ್ನು ಉಳಿತಾಯ ಮಾಡಿದ್ದೇವೆ ಎಂದು ತಿಳಿಸಿದರು. ಮಂಜುನಾಥ ನಗರ ಬಡಾವಣೆಯಲ್ಲಿ ಕೆ.ಶೇಷಾದ್ರಿ ಮತ್ತು ಪುಟ್ಟಯ್ಯರವರು ಕಾಲ್ನಡಿಗೆಯಲ್ಲಿ ಸಾಗಿ ನಿವಾಸಿಗಳಿಂದ ಕುಡಿಯುವ ನೀರು ಪೂರೈಕೆ ಸಂಬಂಧ ಸಮಾಲೋಚನೆ ನಡೆಸಿದರು. ಈ ವೇಳೆ ನಿವಾಸಿಗಳು ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿದೆ. ಕೆಲವೆಡೆ ನೀರು ಪೋಲಾಗುತ್ತಿದ್ದು, ಅದನ್ನು ತಡೆಯುವಂತೆ ಜಲಮಂಡಳಿ ಅಧಿಕಾರಿಗಳ ಗಮನ ಸೆಳೆದರು. ಎಂಜಿನಿಯರ್ ಗಳು ಕೂಡಲೇ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಮುತ್ತುರಾಜ್ , ಆಯುಕ್ತ ಜಯಣ್ಣ, ಜಲಮಂಡಳಿ ಜೆಇ ಶಿವರಾಜ್ ಮತ್ತಿತರರು ಹಾಜರಿದ್ದರು.

ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಬಣ್ಣನೆ

# ಪ್ರಧಾನ ಮಂತ್ರಿ ನರೇಂದ್ರ ಮೋದಿಯಿಂದ ಭಾರತ ವಿಶ್ವ ವಿಖ್ಯಾತಿ

ಚಾಮರಾಜನಗರ: ವಿಶ್ವವೇ ಭಾರತದತ್ತ ನೋಡುವಂತೆ ಮಾಡಿದ್ದು ಪ್ರಧಾನಿ ನರೇಂದ್ರ ಮೋದಿ ಅವರು ಸಾಧನೆಯಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಮಲ್ಲಿಕಾರ್ಜುನಪ್ಪ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ವಿಶ್ವಾಸ, ವಿಕಾಸ ಮತ್ತು ಜನಕಲ್ಯಾಣಕ್ಕೆ 12 ವರ್ಷದ ಅಂಗವಾಗಿ ವಿಕಸಿತ ಭಾರತ ಸಂಕಲ್ಪ ಸಮಾವೇಶ ಮತ್ತು ಜನಸಂಘದ ಸಂಸ್ಥಾಪಕರಾದ ಶ್ಯಾಪ್ರಕಾಶ್ ಮುಖರ್ಜಿ ಅವರ ಬಲಿದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 12 ವರ್ಷಗಳ ಬಿಜೆಪಿ ಅಧಿಕಾರದಲ್ಲಿ ವಿಶ್ವ ಶೇಷ್ಟವಾದ ಭಾರತವನ್ನು ನಾವು ನೋಡುತ್ತಿದ್ದೇವೆ. ಭ್ರಷ್ಟಚಾರ ರಹಿತ ಆಡಳಿತ ನೀಡುವ ಜೊತೆಗೆ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಯತ್ತ ಸಾಗುವಂತೆ ಮಾಡಿದ ಫಲವಾಗಿ ವಿಕಸಿತ ಭಾರತ ಪರಿಕಲ್ಪನೆಯೊಂದಿಗೆ ಹತ್ತು ಹಲವಾರು ಯೋಜನೆಗಳನ್ನು ಜಾರಿ ಮಾಡಿದ್ದಾರೆ. ಪ್ರತಿಯೊಂದು ಯೋಜನೆಯೂ ಪ್ರಾಮಾಣ ಕವಾಗಿ ಫಲಾನುಭವಿಗಳಿಗೆ ತಲುಪುವಂತೆ ಮಾಡಿದರು. ಜನ್‌ಧನ್ ಖಾತೆಗಳಿಗೆ ಲಕ್ಷಾಂತರ ಕೋಟಿ ರೂ.ಗಳನ್ನು ಖಾತೆಗೆ ಜಮ ಮಾಡಿದರು. ರೈತರ ಖಾತೆಗಳಿಗೆ ನೇರವಾಗಿ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದಂತೆ ಖಾತೆಗೆ ಹೋಗುತ್ತಿದೆ. ಇದು ಪ್ರಧಾನಿ ಮೋದಿ ಅವರ ಸಾಧನೆಯಾಗಿದೆ ಎಂದರು.




ಚಾಮರಾಜನಗರ ಜಿಲ್ಲಾ ಪಕ್ಷದ ಉಸ್ತುವಾರಿ ಹಾಗೂ ರಾಜ್ಯ ಕಾರ್ಯದರ್ಶಿ ಲಕ್ಷ್ಮಿ ಅಶ್ವಿನ್‌ಗೌಡ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲ ವರ್ಗಕ್ಕು ಸಹ ಸ್ಪಂದಿಸುವ ಮೂಲಕ ಸರ್ವವ್ಯಾಪಿ ಕಾರ್ಯಕ್ರಮ ನೀಡಿದ್ದಾರೆ. 12 ವರ್ಷಗಳು ಆಡಳಿತದಲ್ಲಿ ಕಾಂಗ್ರೆಸ್ ಪಕ್ಷದ ಮಾಡಲು ಸಾಧ್ಯವಿಲ್ಲ ಎಂಬ ಕಾರ್ಯವನ್ನು ಜಾರಿ ಮಾಡಿ, ವಿಶ್ವವೇ ಮೆಚ್ಚುವಂತೆ ಮಾಡಿದ್ಧಾರೆ. ಇಂಥ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಮೋದಿಗಾಗಿ ನಾವೆಲ್ಲರು ಒಂದಾಗಬೇಕು. ವಿಕಸಿತ ಭಾರತ ಸಂಕಲ್ಪ ವಿಶ್ವ ಗುರುವನ್ನಾಗಿಲು ನಾವೆಲ್ಲರು ದುಡಿಯೋಣ. ದೇಶದಲ್ಲಿ ಮೋದಿ ಇದ್ದರೆ ನಾವೆಲ್ಲರು ಕ್ಷೇಮ. ದೆಹಲಿ ಬಿಜೆಪಿ ಅಧಿಕಾರದಲ್ಲಿದ್ದರೆ ಪ್ರತಿ ಹಳ್ಳಿಯ ಜನರು ಜೀವನ ನೆಮ್ಮದಿಯಾಗಿರುತ್ತದೆ ಎಂಬುದನ್ನು ಈಗಾಗಲೇ ಸಾಬೀತು ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ್ಯಂತ ಪ್ರಧಾನಿ ಮೋದಿ ಅವರು ಮಾಡಿರುವ ದಾಖಲೆಗಳು ಬೆರಗು ಗೊಳಿಸಿದೆ. ಕಾಂಗ್ರೆಸ್ ಪಕ್ಷದ ಇಂದಿರಾಗಾಂಧಿ, ಜವರಹಾರ್ ಲಾಲ್ ನೆಹರು ಅವರು ಹೆಚ್ಚು ದಿನಗಳ ಕಾಲ ಅಧಿಕಾರ ನಡೆಸಿದ ದಾಖಲೆಯನ್ನು ನಮ್ಮ ಮೋದಿ ಅಳಿಸಿ ಹಾಕಿದ್ದಾರೆ. 370 ಕಾಯದೆಯನ್ನು ಜಾರಿ ಮಾಡಿ, ಏಕ್ ಭಾರತ್ ಏಕ್ ದೇಶ್ ಏಕ್ ಸಂವಿಧಾನ ಜಾರಿ ಮಾಡಿದ್ದರು. ಕೋವಿಡ್‌ನಲ್ಲಿ ಅವರು ತೋರಿದ ಆಸಕ್ತಿ ಮತ್ತು ದೇಶದ ರಕ್ಷಣೆಗೆ ಅವರು ಕೈಗೊಂಡ ಕಾರ್ಯಕ್ರಮಗಳು ಇನ್ನು ಸಹ ಜನ ಮಾನಸದಲ್ಲಿ ಇದೆ. ಹೀಗಾಗಿ ಪ್ರಧಾನಿ ಮೋದಿ ನೇತೃತ್ವ ಬಿಜೆಪಿ ಸದೃಢವಾಗಿದೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ ಮತ್ತೇ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಎಂ. ರಾಮಚಂದ್ರ, ವಿಭಾಗೀಯ ಪ್ರಭಾರಿ ಸ್ವಾಮಿ ಮರಳಾಪುರ, ನೂರೊಂದುಶೆಟ್ಟಿ, ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾದ ಹೊನ್ನಹಳ್ಳಿ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಡಾ. ಎ.ಆರ್. ಬಾಬು, ಎಸ್. ಬಾಲಸುಬ್ರಮಣ್ಯ, ಹನೂರು ವೆಂಕಟೇಶ್, ಮಂಡಲ ಅಧ್ಯಕ್ಷರಾದ ಕಾಡಹಳ್ಳಿ ಕುಮಾರ್, ಶಿವರಾಜು, ಕೂಸಣ್ಣ, ಕೆರೆಹಳ್ಳಿ ಮಹದೇವಸ್ವಾಮಿ, ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜು, ಕಿಲಗೆರೆ ಬಸವರಾಜು, ಚಾಮುಲ್ ಮಾಜಿ ಅಧ್ಯಕ್ಷ ವೈ.ಸಿ.ನಾಗೇಂದ್ರ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ, ಮಂಜುಕೋಡಿಉಗನೆ, ಎಚ್.ಎಂ. ಬಸವಣ?ಣ, ಮಾದಪ್ಪ, ಚಂದ್ರಶೇಖರ್, ನವೀನ್‌ಮೌರ್ಯ, ಪಿ.ರಂಗಸ್ವಾಮಿ, ಪುರುಷೋತ್ತಮ್, ಸುಂದರರಾಜ್ ಮೊದಲಾದವರು ಹಾಜರಿದ್ದರು.

# ಸರ್ಕಾರಿ ಸೌಲಭ್ಯ ಅರ್ಹ ಫಲಾನುಭವಿಗಳಿಗೆ ತಲುಪಲಿ




**ಕೆ.ಆರ್.ನಗರ:** ಸರ್ಕಾರದ ವಿವಿಧ ಸೌಲಭ್ಯಗಳು ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ತಲುಪುವಂತೆ ಮಾಡುವುದು ಸರ್ಕಾರಿ ನೌಕರರ ಕರ್ತವ್ಯವಾಗಿದೆ. ಪ್ರತಿಯೊಬ್ಬ ಅಧಿಕಾರಿಯೂ ಅದನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 2024-25ನೇ ಸಾಲಿನಲ್ಲಿ ಕ್ಷೇತ್ರದ ಒಟ್ಟು 30 ಫಲಾನುಭವಿಗಳನ್ನು ಉಚಿತ ಹೊಲಿಗೆ ಯಂತ್ರ ವಿತರಣೆಗೆ ಆಯ್ಕೆ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ನಾಲ್ವರು ಫಲಾನುಭವಿಗಳಿಗೆ ಸಾಂಕೇತಿಕವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಗಿದ್ದು, ಉಳಿದವರಿಗೆ ಇಲಾಖೆಯ ಅಧಿಕಾರಿಗಳ ಮೂಲಕ ವಿತರಿಸಲಾಗುವುದು ಎಂದು ತಿಳಿಸಿದರು.

ಫಲಾನುಭವಿಗಳು ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಸ್ವಾವಲಂಬಿ ಜೀವನ ನಡೆಸಬೇಕು. ಸರ್ಕಾರದ ಯೋಜನೆಗಳ ಯಶಸ್ಸಿಗೆ ಸಹಕರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಂ.ಎಸ್. ಮಹದೇವ್, ಉದಯಶಂಕರ್, ತಾಲೂಕು ವಕ್ತಾರ ಸೈಯದ್ ಜಾಬೀರ್, ತಾಲೂಕು ಪಂಚಾಯಿತಿ ಇಒ ವಿ.ಪಿ. ಕುಲದೀಪ್, ಎ.ಎನ್. ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಬಿ.ನಟರಾಜು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಹಾಯಕ ಅಭಿವೃದ್ಧಿ ಅಧಿಕಾರಿ ಎನ್.ರಂಗಸ್ವಾಮಿ, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ತಾಲೂಕು ಸಂಯೋಜಕ ಕೆ.ಎಲ್. ಹೇಮಂತ್‌ಕುಮಾರ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಎಲ್.ಎಂ.ಸಣ್ಣಪ್ಪ, ಕಾಂಗ್ರೆಸ್ ಮುಖಂಡರಾದ ಹುಚ್ಚೇಗೌಡ, ವಿ.ಸುರೇಶ್, ಎನ್.ಎಂ.ಶಂಕರಪ್ಪ, ತಿಮ್ಮಶೆಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಟಿಪಿಎಸ್‌ಎಂಎಸ್ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಪಾಂಡುರಂಗ ಆಯ್ಕೆ

# ಕೃಷಿ ಪತ್ತಿನ ಸಹಕಾರ ಸಂಘದಿಂದ ಅಭಿನಂದನೆ

**ಕೆ.ಆರ್.ನಗರ:** ತಾಲೂಕು ಮಟ್ಟದ ಟಿಎಪಿಸಿಎಂಎಸ್ ಸಹಕಾರ ಸಂಘಕ್ಕೆ ನಡೆಯಲಿರುವ ನಿರ್ದೇಶಕರ ಚುನಾವಣೆಯಲ್ಲಿ ಮತದಾನದ ಹಕ್ಕು ಚಲಾಯಿಸಲು ಹನಸೋಗೆ ಕೃಷಿ ಪತ್ತಿನ ಸಹಕಾರ ಸಂಘದಿಂದ ಕಾಂಗ್ರೆಸ್ ಬೆಂಬಲಿತ ನಿರ್ದೇಶಕ ಪಾಂಡುರಂಗ ಅವರಿಗೆ ಡೆಲಿ ಗೇಟ್ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿತ್ತು. ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಅಧ್ಯಕ್ಷ ಕೆ ವಿ ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು.

ಹನಸೋಗೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ನವೀನ್ ಮಾತನಾಡಿ ಪಾಂಡುರಂಗ ಅವರು ನಮ್ಮ ಸಂಘದ ನಿರ್ದೇಶಕರಾಗಿ ವ್ಯಾಪ್ತಿಯ ರೈತರಿಗೆ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಲ್ಲ ಸದಸ್ಯರೊಂದಿಗೆ ವಿಶ್ವಾಸದಿಂದ ಇದ್ದು ಅವರ ಸರಳತೆಯನ್ನು ಗಮನಿಸಿ ತಾಲೂಕು ಮಟ್ಟದಲ್ಲಿ ನಡೆಯಲಿರುವ ಟಿಎಪಿಸಿಎಂಎಸ್ ಸಹಕಾರ ಸಂಘದ ನಿರ್ದೇಶಕರ ಚುನಾವಣೆಗೆ ಹಕ್ಕು ಚಲಾಯಿಸಲು ಒಮ್ಮತ ದಿಂದ ಆಯ್ಕೆ ಮಾಡಿದ್ದೇವೆ ಎಂದು ತಿಳಿಸಿದರು.



ಮತದಾನದ ಹಕ್ಕು ಪಡೆದ ಪಾಂಡುರಂಗ ಮಾತನಾಡಿ ನನ್ನನ್ನು ಸಭೆಯಲ್ಲಿ ಆಯ್ಕೆ ಮಾಡಿದ ಎಲ್ಲ ನಿರ್ದೇಶಕರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ ನಿಮ್ಮೆಲ್ಲರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ ತಾಲೂಕು ಸಹಕಾರ ಸಂಘದಲ್ಲೂ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಲು ಮತ ಚಲಾಯಿಸುತ್ತೇನೆ ಎಂದರು. ನಂತರ ಎಲ್ಲ ನಿರ್ದೇಶಕರು ಪಾಂಡುರಂಗ ಅವರನ್ನು ಅಭಿನಂದಿಸಿ ಗೌರವಿಸಿದರು.

ಹನಸೋಗೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ ವಿ ಮಹದೇವಪ್ಪ, ನಿರ್ದೇಶಕರಾದ ಅಮ್ಜತ್ ಪಾಷಾ, ಕರಿಗೌಡ, ರಾಜೇಗೌಡ, ನಾಗರಾಜ ನಾಯಕ, ಕಾಂಗ್ರೆಸ್ ಮುಖಂಡ ಪರಮೇಶ್, ರಂಜಿತ್, ಗುಡ್ಡೆಹರೀಶ್, ದೀಪು, ಶಶಾಂಕ್ ಸೇರಿದಂತೆ ಇತರರು ಇದ್ದರು.

# ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ ರೈತರಿಗೆ ರೂ.19.69 ಕೋಟಿ ಪರಿಹಾರ



## ಅಪಪ್ರಚಾರ; ಪೊಲೀಸರಿಗೆ ದೂರು

**ಗಾಣಕಲ್ ನಟರಾಜು ಮಾತನಾಡಿ, ಜಿಬಿಡಿಎ ನೀಡಿದ ಭೂಸ್ವಾಧೀನ ಪರಿಹಾರದ ಚೆಕ್‌ಗಳು ನಕಲಿ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುತ್ತಿದ್ದಾರೆ ಎಂದು ಆರೋಪಿಸಿದರು. ಜೂ.19ರಂದು ವಿತರಿಸಿದ ಚೆಕ್‌ಗಳ ದಿನಾಂಕವನ್ನು ತಾಂತ್ರಿಕವಾಗಿ ಬದಲಾಯಿಸಿ ತಪ್ಪು ಮಾಹಿತಿ ಹರಡಲಾಗುತ್ತಿದೆ. ಇಂತಹ ಸುಳ್ಳು ಪ್ರಚಾರದಿಂದ ಸಾರ್ವಜನಿಕರನ್ನು ದಾರಿ ತಪ್ಪಿಸುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು. ಈ ಸಂಬಂಧ ರಾಮನಗರ ಪೊಲೀಸ್ ಸೈಬರ್ ವಿಭಾಗ ಹಾಗೂ ನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದ್ದು, ಸುಳ್ಳು ಮಾಹಿತಿ ಹರಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.**

**ರಾಮನಗರ:** ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಸಮಗ್ರ ಉಪನಗರ ಯೋಜನೆಗಾಗಿ ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ ಭೂ ಮಾಲೀಕರಿಗೆ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು ಪರಿಹಾರದ ಚೆಕ್‌ಗಳನ್ನು ವಿತರಿಸಿದರು.

ನಗರದ ಕಂದಾಯ ಭವನದಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂತಿಮ ಭೂಸ್ವಾಧೀನ ಅಧಿಸೂಚನೆ ಹೊರಡಿಸಿರುವ ಹಾರೋಹಳ್ಳಿ ತಾಲೂಕಿನ ವಡ್ಡೇರಹಳ್ಳಿ ಹಾಗೂ ಬಿಡದಿ ಹೋಬಳಿಯ ಕೆಂಪಯ್ಯನಪಾಳ್ಯ ಗ್ರಾಮಗಳ ವ್ಯಾಪ್ತಿಯ 10 ಭೂ ಮಾಲೀಕರು ಸ್ವಯಂಪ್ರೇರಿತವಾಗಿ ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದರು.

ಈ ಭೂ ಮಾಲೀಕರಿಗೆ ಒಟ್ಟು ರೂ.19,69,72,342 ಭೂ ಪರಿಹಾರ ಹಾಗೂ ಮರಗಳ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ ಎಂದು ಹೇಳಿದರು.

ಪ್ರಾಧಿಕಾರದ ಬಳಿ ಅಗತ್ಯ ಪ್ರಮಾಣದ ಅನುದಾನ ಲಭ್ಯವಿದೆ. ರೈತರು ಯಾವುದೇ ವದಂತಿಗಳಿಗೆ ಕಿವಿಗೊಡಬಾರದು. ನಿಗದಿತ ಅವಧಿಯಲ್ಲಿ ಭೂಸ್ವಾಧೀನಕ್ಕೆ ಒಪ್ಪಿಗೆ ನೀಡುವ ಎಲ್ಲರಿಗೂ ಒಂದೇ ಕಂತಿನಲ್ಲಿ ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಭೂ ಪರಿಹಾರ ವಿತರಣೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಅಪಪ್ರಚಾರಗಳನ್ನು ನಂಬಬಾರದು. ರೈತರು ಭೂ ಪರಿಹಾರದ ಬದಲಿಗೆ ಭೂ ಪಾಲುದಾರಿಕೆ ಯೋಜನೆಯನ್ನು ಆಯ್ಕೆ ಮಾಡಿಕೊಂಡರೆ ಭವಿಷ್ಯದಲ್ಲಿ ಹೆಚ್ಚಿನ ಲಾಭ ಪಡೆಯಬಹುದು. ಉಳಿದಿರುವ ಭೂಮಿಯ ಮೌಲ್ಯವೂ ಗಣನೀಯವಾಗಿ ಹೆಚ್ಚಾಗಲಿದೆ ಎಂದು ಹೇಳಿದರು.

ಕಳೆದ ವಾರ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಜಿಬಿಡಿಎ ಕಚೇರಿಯಲ್ಲಿ ರೈತರಿಗೆ ಸಾಂಕೇತಿಕವಾಗಿ ಪರಿಹಾರದ ಚೆಕ್‌ಗಳನ್ನು ವಿತರಿಸಿದ್ದರು. ಆ ಸಂದರ್ಭದಲ್ಲಿ ಏಳು ರೈತರ 2 ಎಕರೆ 9 ಗುಂಟೆ ಜಮೀನಿಗೆ ರೂ.4.14 ಕೋಟಿ ಭೂ ಪರಿಹಾರ ಹಾಗೂ ಮರಗಳ ಪರಿಹಾರ ಸೇರಿ ರೂ.5.23 ಕೋಟಿ ಮೊತ್ತದ ಚೆಕ್‌ಗಳನ್ನು ವಿತರಿಸಲಾಗಿತ್ತು ಎಂದು ತಿಳಿಸಿದರು.

# ಅಧ್ಯಕ್ಷ-ಉಪಾಧ್ಯಕ್ಷ ಅವಿರೋಧ ಆಯ್ಕೆ

**ಗಂಡಸಿ:** ಹೋಬಳಿಯ ಚಿಂದೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಧ್ಯಕ್ಷ-ಉಪಾಧ್ಯಕ್ಷರು ಅವಿರೋಧವಾಗಿ ಆಯ್ಕೆಯಾಗಿದರು.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮಾರಶೆಟ್ಟಹಳ್ಳಿಯ ಶಂಭು ಲಿಂಗಮೂರ್ತಿ ಅಧ್ಯಕ್ಷರಾಗಿ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ಕೆಂಕೆರೆಯ ಮಾದನಾಯಕ ಆಯ್ಕೆಯಾದರು.

ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಎಲ್ಲ ನಿರ್ದೇಶಕರು, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಉಪಾಧ್ಯಕ್ಷ ಕೆಂಕೆರ ಕೇಶವಮೂರ್ತಿ, ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗಂಗಾಧರ್ ಮೊದಲಾದವರು ಅಭಿನಂದಿಸಿದರು.



ಈ ವೇಳೆ ಮಾತನಾಡಿದ ಕೇಶವಮೂರ್ತಿ, ನಾವೆಲ್ಲರೂ ಒಟ್ಟಾಗಿ, ಸಂಘಟನಾತ್ಮಕವಾಗಿ ಕೆಲಸ ಮಾಡಿದರೆ ಗೆಲುವು ನಿಶ್ಚಿತ ಎಂಬುದಕ್ಕೆ ಈ ಚುನಾವಣೆಯೇ ಸಾಕ್ಷಿ. ಮುಂದಿನ ದಿನಗಳಲ್ಲೂ ಎಲ್ಲರೂ ಒಂದಾಗಿ ಕೆಲಸ ಮಾಡಿದರೆ ನಮ್ಮ ಜೆಡಿಎಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಉತ್ತಮ ಸಾಧನೆ ಮಾಡಬಹುದು. ಆ ಮೂಲಕ ನಮ್ಮ ನಾಯಕರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ರೇವಣ್ಣ ಅವರ ಕೈ ಬಲ ಪಡಿಸಬಹುದು ಎಂದರು.

ಹಾಗೆಯೇ ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲೂ ಮುಂದಿನ ಚುನಾವಣೆಯಲ್ಲಿ ನಮ್ಮ ವಿರೋಧಿಗಳನ್ನು ಸೋಲಿಸುವ ಮೂಲಕ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸಬಹುದು. ರಾಜ್ಯದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರುವುದರಿಂದ ನಮ್ಮ ಕ್ಷೇತ್ರ ಸೇರಿದಂತೆ ಜಿಲ್ಲೆಯಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸ ಆಗಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಜೂನ್ 14 ರಂದು ಸಂಘದ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಲ್ಲ 12 ಸ್ಥಾನಗಳಲ್ಲೂ ಜೆಡಿಎಸ್ ಬೆಂಬಲಿತರು ಗೆಲ್ಲುವ ಮೂಲಕ ಕ್ಲೀನ್ ಸ್ವೀಪ್ ಮಾಡಿದ್ದರು.

# ಪ್ರಯಾಣಿಕರ ಸುರಕ್ಷತೆಯನ್ನು ಹೆಚ್ಚಿಸಲು ಅನಿರೀಕ್ಷಿತ ಪರಿವೀಕ್ಷಣೆ

**ಮೈಸೂರು:** ರೈಲ್ವೆ ಮಂಡಳಿಯ ನಿರ್ದೇಶನಗಳ ಅನ್ವಯ, ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಶ್ರೀ ಮುದಿತ್ ಮಿತ್ತಲ್ ಅವರು ಶಾಖಾ ಅಧಿಕಾರಿಗಳೊಂದಿಗೆ ಸೇರಿ ರೈಲು ಸಂಖ್ಯೆ 16236 ಟುಟಿಕೋರಿನ್ ಎಕ್ಸ್‌ಪ್ರೆಸ್‌ನಲ್ಲಿ ಅನಿರೀಕ್ಷಿತ ಪರಿವೀಕ್ಷಣೆ ನಡೆಸಿದರು.

ಪರಿಶೀಲನೆಯ ವೇಳೆ ಅಗ್ನಿಶಾಮಕ ಉಪಕರಣಗಳ ಲಭ್ಯತೆ ಮತ್ತು ಸ್ಥಿತಿ, ಪ್ರಯಾಣಿಕರ ಸೌಲಭ್ಯಗಳು ಹಾಗೂ ಸುರಕ್ಷತಾ ವ್ಯವಸ್ಥೆಗಳನ್ನೂ ಸಮಗ್ರವಾಗಿ ಪರಿಶೀಲಿಸಲಾಯಿತು. ಈ ಪರಿಶೀಲನೆಯ ಉದ್ದೇಶ ಎಲ್ಲಾ ಸುರಕ್ಷತಾ ಕ್ರಮಗಳು ಸಮರ್ಪಕವಾಗಿ ಜಾರಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸೇವೆ ಹಾಗೂ ಆರಾಮದಾಯಕ ಪ್ರಯಾಣವನ್ನು ಒದಗಿಸುವುದಾಗಿದೆ.



ಡಿಆರ್‌ಎಂ ಅವರು ಸುರಕ್ಷತಾ ನಿಯಮಾವಳಿಗಳ ಕಟ್ಟುನಿಟ್ಟಿನ ಪಾಲನೆಯ ಅಗತ್ಯತೆಯನ್ನು ಒತ್ತಿಹೇಳಿ, ಸಂಬಂಧಿತ ಅಧಿಕಾರಿಗಳಿಗೆ ಪ್ರಯಾಣಿಕರ ಸೇವೆ ಮತ್ತು ಸುರಕ್ಷತಾ ವ್ಯವಸ್ಥೆಗಳಲ್ಲಿ ಉನ್ನತ ಮಟ್ಟವನ್ನು ಕಾಯ್ದುಕೊಳ್ಳುವಂತೆ ಸೂಚಿಸಿದರು.

ಇದು ಪ್ರಯಾಣಿಕರ ಸುರಕ್ಷತೆ, ಆರಾಮ ಹಾಗೂ ಒಟ್ಟು ಪ್ರಯಾಣ ಅನುಭವವನ್ನು ಹೆಚ್ಚಿಸುವತ್ತ ಭಾರತೀಯ ರೈಲ್ವೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

# ಸ್ವಂತ ಖರ್ಚಿನಲ್ಲಿ ಹಾಲು ಉತ್ಪಾದಕರ ಸಂಘದ ಕಟ್ಟಡ ನಿರ್ಮಾಣ ಯಲುವಳ್ಳಿ ಎನ್.ರಮೇಶ್ ಸಮಾಜಮುಖಿ ಕೆಲಸಕ್ಕೆ ಮೆಚ್ಚುಗೆ



**ಚಿಕ್ಕಬಳ್ಳಾಪುರ:** ಹಲವು ವರ್ಷಗಳಿಂದ ನಿರಂತರವಾಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿರುವ ಒಕ್ಕಲಿಗರ ಸಂಘದ ರಾಜ್ಯ ಗೌರವಾಧ್ಯಕ್ಷ ಯಲುವಳ್ಳಿ ಎನ್.ರಮೇಶ್ ಅವರು ಮತ್ತೊಂದು ಸಮಾಜಮುಖಿ ಕಾರ್ಯದ ಮೂಲಕ ಗಮನ ಸೆಳೆದಿದ್ದಾರೆ. ತಮ್ಮ ಸ್ವಗ್ರಾಮ ಯಲುವಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದ ಮೊದಲ ಮಹಡಿಯ ಕಟ್ಟಡವನ್ನು ಸ್ವಂತ ವೆಚ್ಚದಲ್ಲಿ ನಿರ್ಮಿಸಿ, ಗುರುವಾರ ಚಿಮುಲ್ ಅಧ್ಯಕ್ಷ ಮಂಜುನಾಥ್ ರೆಡ್ಡಿ ಅವರ ಸಮ್ಮುಖದಲ್ಲಿ ಉದ್ಘಾಟಿಸಿ ಗ್ರಾಮಸ್ಥರಿಗೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎನ್. ರಮೇಶ್, ಮನುಷ್ಯನು ಬರಿಗೈಯಲ್ಲಿ ಬರುತ್ತಾನೆ, ಬರಿಗೈಯಲ್ಲೇ ಹೋಗುತ್ತಾನೆ. ಆದ್ದರಿಂದ ನಮ್ಮ ಆದಾಯದ ಒಂದು ಭಾಗವನ್ನು ಸಮಾಜ ಸೇವೆಗೆ ಮೀಸಲಿಡಬೇಕು ಎಂಬುದು ನನ್ನ ನಂಬಿಕೆ. ಸಮಾಜ ಸೇವೆಯ ಭಾಗವಾಗಿ ಗ್ರಾಮದ ಹಾಲು ಉತ್ಪಾದಕರ ಸಂಘಕ್ಕೆ ಮೊದಲ ಮಹಡಿಯ ಕಟ್ಟಡ ನಿರ್ಮಿಸಿ ಸಮರ್ಪಿಸಿರುವುದು ಸಂತಸ ತಂದಿದೆ. ಇದರಿಂದ ಸಂಘಕ್ಕೆ ಶಾಶ್ವತ ಪ್ರಯೋಜನವಾಗಲಿದೆ, ಎಂದು ಹೇಳಿದರು. ಕೋಲಾರ-ಚಿಕ್ಕಬಳ್ಳಾಪುರ ಭಾಗದ ರೈತ ಧುರೀಣ ಕೆ.ಬಿ.ಪಿಳ್ಳಪ್ಪ ಅವರು ತಮ್ಮ ರಾಜಕೀಯ ಮಾರ್ಗದರ್ಶಕರಾಗಿದ್ದು, ಅವರ ಪ್ರೇರಣೆಯಿಂದಲೇ ಜನಸೇವೆ ಮಾಡಲು ಅವಕಾಶ ದೊರೆತಿದೆ ಎಂದು ಸ್ಮರಿಸಿದರು. ಇದೇ ವೇಳೆ ಯಲುವಳ್ಳಿಯಲ್ಲಿ ಹಾಲು ಡೈರಿ ಸ್ಥಾಪನೆಯ ಹಿಂದಿನ ಹೋರಾಟ ಮತ್ತು ಆರಂಭಿಕ ದಿನಗಳ ಸವಾಲುಗಳನ್ನೂ ವಿವರಿಸಿದರು.

ಚಿಮುಲ್ ಅಧ್ಯಕ್ಷ ಮಂಜುನಾಥ್ ರೆಡ್ಡಿ ಮಾತನಾಡಿ, ಬಲಗೈ ಮಾಡಿದ ಸೇವೆ ಎಡಗೈಗೂ ಗೊತ್ತಾಗಬಾರದು ಎಂಬಂತೆ ರಮೇಶ್ ಅವರು ಸಮಾಜಸೇವೆ ಮಾಡುತ್ತಿದ್ದಾರೆ. ಒಕ್ಕಲಿಗರ ಸಂಘದಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿರುವ ಅವರು ಸ್ವಂತ ಹಣದಲ್ಲಿ ಹಾಲು ಉತ್ಪಾದಕರ ಸಂಘದ ಕಟ್ಟಡ ನಿರ್ಮಿಸಿರುವುದು ಶ್ಲಾಘನೀಯ. ಡೈರಿ ಅಧ್ಯಕ್ಷರಾಗಿದ್ದರೂ ವೈಯಕ್ತಿಕ ಲಾಭಕ್ಕಾಗಿ ಅಲ್ಲದೆ, ಸಂಘದ ಅಭಿವೃದ್ಧಿಗಾಗಿ ಎರಡು ಬೆಡ್‌ರೂಮ್‌ಗಳ ಮನೆಯನ್ನು ನಿರ್ಮಿಸಿ ಅದರ ಬಾಡಿಗೆ ಆದಾಯವನ್ನು ಡೈರಿಗೆ ಶಾಶ್ವತವಾಗಿ ಮೀಸಲಿಟ್ಟಿರುವುದು ಮಾದರಿ ಕಾರ್ಯ, ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಗ್ರಾಮಸ್ಥರು ಮೇಘಾ ಡೈರಿ ಮುಂಭಾಗದಲ್ಲಿ ರಾತ್ರಿ ವೇಳೆ ಕತ್ತಲೆ ಇರುವುದರಿಂದ ಹೈಮಾಸ್ಟ್ ದೀಪ ಅಳವಡಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಂಜುನಾಥ್ ರೆಡ್ಡಿ, ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಶೀಘ್ರವೇ ಹೈಮಾಸ್ಟ್ ದೀಪ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಎನ್.ರಮೇಶ್ ಅವರ ಸೊಸೆ ಹೇಮಲತಾ ಜನಾರ್ದನ್ ಮಾತನಾಡಿ, ರಮೇಶ್ ಅಣ್ಣನ ಜೀವನವೇ ನಮಗೆ ಸ್ಫೂರ್ತಿ. ಅವರು ಆರಂಭಿಸಿರುವ ಜನಸೇವೆಯ ಕಾರ್ಯಗಳನ್ನು ಮುಂದುವರಿಸುತ್ತೇವೆ. ಶಿಕ್ಷಣ, ಆರೋಗ್ಯ ಸೇರಿದಂತೆ ಯಾವುದೇ ಸಮಸ್ಯೆಯೊಂದಿಗೆ ಬರುವವರನ್ನು ಖಾಲಿಹಸ್ತದಿಂದ ಕಳುಹಿಸುವುದಿಲ್ಲ. ಇಡೀ ಕುಟುಂಬವನ್ನೇ ಸಮಾಜಸೇವೆಯತ್ತ ಪ್ರೇರೇಪಿಸುತ್ತಿದ್ದಾರೆ, ಎಂದರು.

ಕಾರ್ಯಕ್ರಮದಲ್ಲಿ ಮೇಘಾ ಡೈರಿ ವ್ಯವಸ್ಥಾಪಕ ನಾಗೇಶ್, ಸೂಪರ್‌ವೈಸರ್ ಮಂಜುನಾಥ್, ಕೊಂಡೇನಹಳ್ಳಿ ಚಂದ್ರಪ್ಪ, ಅನ್ನದಾನಿ ಸತೀಶ್, ಕಾರ್ಯದರ್ಶಿ ಮುನಿಸ್ವಾಮಿ, ಯಲುವಳ್ಳಿ ಜನಾರ್ದನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಾದಕ ವ್ಯಸನದಿಂದ ದೂರವಿರಿ: ರವಿಪ್ರಸಾದ್



**ಮೈಸೂರು:** ಮಾದಕ ವಸ್ತುಗಳ ಸೇವನೆಯು ವ್ಯಕ್ತಿಯ ಆರೋಗ್ಯ, ಶಿಕ್ಷಣ, ಕುಟುಂಬ ಹಾಗೂ ಸಮಾಜದ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಉಂಟುಮಾಡುವುದರ ಜೊತೆಗೆ ಅಪರಾಧ ಚಟುವಟಿಕೆಗಳಿಗೆ ದಾರಿಮಾಡಿಕೊಡುತ್ತದೆ ಎಂದು ವಿಜಯನಗರ ಉಪವಿಭಾಗದ ಎಸಿಪಿ( ಉಪ ಪೊಲೀಸ್ ಆಯುಕ್ತ) ರವಿಪ್ರಸಾದ್ ಹೇಳಿದರು.

ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ, ಮೈಸೂರು ನಗರ ಪೊಲೀಸ್ ಸಹಯೋಗದೊಂದಿಗೆ ವಿಜಯನಗರ ಪೊಲೀಸ್ ಠಾಣಾ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ ಜಾಗೃತಿ ಸಪ್ತಾಹ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾರ್ವಜನಿಕರು ವಿಶೇಷವಾಗಿ ಯುವಜನತೆ ಮತ್ತು ವಿದ್ಯಾರ್ಥಿಗಳು ಮಾದಕ ವ್ಯಸನದ ದುಷ್ಪರಿಣಾಮಗಳ ಬಗ್ಗೆ ಅರಿವು ಹೊಂದಿ, ಇಂತಹ ದುಷ್ಚಟಗಳಿಂದ ದೂರವಿದ್ದು ಆರೋಗ್ಯಕರ ಹಾಗೂ ಶಿಸ್ತುಬದ್ಧ ಜೀವನವನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು.


ಪ್ರತಿ ವರ್ಷ ಜೂ.26ರಂದು ಆಚರಿಸಲಾಗುವ ?ಅಂತರರಾಷ್ಟ್ರೀಯ ಮಾದಕ ವಸ್ತುಗಳ ದುರ್ಬಳಕೆ ಮತ್ತು ಅಕ್ರಮ ಸಾಗಣಿಕೆ ವಿರೋಧಿ ದಿನಾಚರಣೆ? ಅಂಗವಾಗಿ ಈ ವಾರವನ್ನು ಮಾದಕ ವಸ್ತುಗಳ ವಿರೋಧಿ ಸಪ್ತಾಹ-2026 ಎಂದು ಆಚರಿಸುತ್ತಿದ್ದು,ಅಂತೆಯೇ ಇಂದು ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಾರ್ವಜನಿಕರಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಡ್ರಗ್ ನಂತಹ ಮಾರಕ ವ್ಯಸನಗಳಿಗೆ ಬಲಿಯಾಗುತ್ತಿರುವ ಯುವಕರನ್ನು ರಕ್ಷಿಸುವುದು ಇದರ ಮುಖ್ಯ ಗುರಿಯಾಗಿದ್ದು,ಮಾದಕ ವಸ್ತುಗಳನ್ನು ನಾಶಪಡಿಸುವ ಮೂಲಕ ಕಠಿಣ ಸಂದೇಶವನ್ನು ರವಾನಿಸಲಾಗುತ್ತದೆ. ಹಾಗೂ ಮಾದಕ ವ್ಯಸನಿಗಳಿಗೆ ಪುನರ್ವಸತಿ ಕೇಂದ್ರಗಳ ಮೂಲಕ ಸೂಕ್ತ ಚಿಕಿತ್ಸೆ ನೀಡಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳನ್ನು ನಗರ ಪೊಲೀಸ್ ಇಲಾಖೆ ವತಿಯಿಂದ ಉತ್ತೇಜಿಸಲಾಗುತ್ತಿದೆ ಎಂದ ಅವರು, ಯುವಜನತೆ ಇಂತಹ ದುಶ್ಚಟದಿಂದ ದೂರವಿದ್ದು, ಕ್ರೀಡೆ ಮತ್ತು ಉತ್ತಮ ಶೈಲಿಯ ಜೀವನದತ್ತ ಗಮನ ಹರಿಸಬೇಕೆಂಬುದು ಇಂದಿನ ಜಾಗೃತಿ ಜಾಥಾದ ಆಶಯವಾಗಿದೆ ಎಂದು ಹೇಳಿದರು.

ಮಾದಕ ವಸ್ತುಗಳ ಮಾರಾಟ, ಸಾಗಣೆ ಅಥವಾ ಬಳಕೆಯ ಬಗ್ಗೆ ಯಾವುದೇ ಮಾಹಿತಿ ಕಂಡುಬಂದಲ್ಲಿ ಸಾರ್ವಜನಿಕರು ತಕ್ಷಣ ಸಮೀಪದ ಪೊಲೀಸ್ ಠಾಣೆಗೆ ಅಥವಾ ಪೊಲೀಸ್ ಸಹಾಯವಾಣಿ ಸಂಖ್ಯೆ 112, ಮಾಹಿತಿ ನೀಡುವ ಮೂಲಕ ?ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಸಹಕರಿಸುವಂತೆ ಕೋರಿದರು.

ಹೆಬ್ಬಾಳಿನ ಸೂರ್ಯ ಬೇಕರಿಯಿಂದ ಶುರುವಾದ ಜಾಗೃತಿ ಜಾಥಾ ಶ್ರೀಯೋಗಾನರಸಿಂಹ ಸ್ವಾಮಿ ದೇವಾಲಯದಲ್ಲಿ ಅಂತ್ಯಗೊಂಡಿತು. ಈ ಸಂದರ್ಭದಲ್ಲಿ ದೇವಾಲಯದ ಆಡಳಿತಾಧಿಕಾರಿ ಎನ್, ಶ್ರೀನಿವಾಸನ್, ವಿಜಯನಗರ ಠಾಣಾ ಇನ್ಸ್ ಪೆಕ್ಟರ್ ಲವ, ಮೇಟಗಳ್ಳಿ ಠಾಣಾ ಇನ್ಸ್ ಪೆಕ್ಟರ್ ಅರುಣ್ ಕುಮಾರ್, ಸರಸ್ವತಿಪುರಂ ಠಾಣೆಯ ರವಿಕಿರಣ್, ಹೆಬ್ಬಾಳು ಠಾಣೆಯ ಲಕ್ಷ್ಮೀಕಾಂತ್ ಸೇರಿದಂತೆ ನೂರಕ್ಕೂ ಅಧಿಕ ಮಂದಿ ಆರಕ್ಷಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಕಾರ್ಮಿಕರ ಮೇಲಿನ ಹಿಂಸೆ ಪ್ರಕರಣ: 28 ಕಾರ್ಮಿಕರು ಬಿಡುಗಡೆ



**ತಿ.ನರಸೀಪುರ:** ಜೀತಪದ್ಧತಿಯಲ್ಲಿ ಬಲವಂತವಾಗಿ ದುಡಿಯುತ್ತಿದ್ದ 28 ಜನ ಕಾರ್ಮಿಕರನ್ನು ಬಿಡುಗಡೆಗೊಳಿಸಿ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿ ನಿಲಯಕ್ಕೆ ಭೇಟಿ ನೀಡಿದ ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಆಶ್ರಯ ಪಡೆಯುತ್ತಿದ್ದ ಕಾರ್ಮಿಕರನ್ನು ಭೇಟಿಯಾಗ ಆತ್ಮಸ್ಥೈರ್ಯ ತುಂಬಿದದರು.

ಪಟ್ಟಣದ ನಂಜನಗೂಡು ರಸ್ತೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆಯುತ್ತಿರುವ 19 ಜನ ವಯಸ್ಕರು ಹಾಗೂ 9 ಮಕ್ಕಳನ್ನು ಬೇಟಿ ಮಾಡಿ ನಂತರ ಮಾತನಾಡಿ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಹೊರವಲಯದಲ್ಲಿ ಸುಮಾರು 7 ವರ್ಷಗಳಿಂದ ಇದೇ ಗ್ರಾಮದ ಗಿರೀಶ ಮಹದೇವ್ ಮತ್ತು ಯತಿರಾಜ್ ಎಂಬುವವರು ಇಟ್ಟಿಗೆ ಗೂಡಿನಲ್ಲಿ ಜೀತದಹಾಳಾಗಿ ಬಲವಂತವಾಗಿ ದುಡಿದುಕೊಳ್ಳುತ್ತಿದ್ದಲ್ಲದೆ ಒಡೆದು ಬಡೆದು ಹಿಂಸೆ ಕೊಡುತ್ತಿದ್ದು ಈ ಮಾಹಿತಿ ಐಜೆಎಂ ಸಂಸ್ಥೆ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮಾಹಿತಿ ತಿಳಿದ ಮೇಲೆ ತಹಸಿಲ್ದಾರ್ ಹಾಗೂ ಕಾರ್ಮಿಕ ಇಲಾಖೆ ಮತ್ತು ಸಾಮಾಜಿಕ ಇಲಾಖೆ ಕಾರ್ಯಾಚರಣೆ ನಡೆಸಿ ಜೀತದಿಂದ ಮುಕ್ತಿ ಗೊಳಿಸಿದ್ದಾರೆ ಗೊಳಿಸಿದ್ದಾರೆ ಎಂದು ಹೇಳಿದರು.

ಇವರಲ್ಲಿ 9 ಜನ ಮಕ್ಕಳು ಶಾಲೆಗೆ ಹೋಗುತ್ತಿದ್ದು ಈ ಘಟನೆಯಿಂದ ಶಾಲೆಯಿಂದ ಹೊರಗಿದ್ದಾರೆ. ಆದ್ದರಿಂದ ಇವರ ತಂದೆ ತಾಯಿಗಳು ಎಲ್ಲಿಗೆ ಹೋಗಿ ಉಳಿಯುತ್ತಾರೆ. ಆ ಅಕ್ಕಪಕ್ಕದ ಶಾಲೆಗಳಿಗೆ ಸೇರಿಸಿ ಹಾಸ್ಟೆಲ್ ಅಲ್ಲಿ ವಿದ್ಯಾಭ್ಯಾಸ ಮಾಡುವಂತೆ ಮಾಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ, ಏಕೆಂದರೆ ಹುಟ್ಟಿದ ಪ್ರತಿಯೊಂದು ಮಗುವಿಗೂ ಶಿಕ್ಷಣವನ್ನ ಕೊಡಲೇಬೇಕು. ಶಿಕ್ಷಣದಿಂದ ವಂಚಿತರಾಗಬಾರದು, ಈ ನಿಟ್ಟಿನಲ್ಲಿ ಅಧಿಕಾರಿಗಳು ಜಾಗೃತರಾಗಬೇಕು. ಈ ವಿಚಾರವಾಗಿ ನಾನು ಈಗಾಗಲೇ ಜಿಲ್ಲಾ ಮತ್ತು ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಹಾಗೂ ತಹಸೀಲ್ದಾರ್ ಜೊತೆ ಮಾತನಾಡಿದ್ದೇನೆ ಎಂದರು.

ಇವರಲ್ಲಿ ಕೆಲವು ಮಂದಿ ತಮಿಳುನಾಡಿನವರು, ಹಾಗೂ ಮಂಡ್ಯ ಜಿಲ್ಲೆಯ ಹೊಳಲು ಗ್ರಾಮ ಮತ್ತು ಪಾಂಡವಪುರ ಮೂಲದವರೆಂದು ಹೇಳುತ್ತಿದ್ದಾರೆ ಎಂದು ಹೇಳಿದರು.

# 27ರಂದು ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಜೂ. 27ರ ಶನಿವಾರ ಆಯೋಜಿಸಲಾಗಿದೆ.

ಜೂ. 27ರ ಶನಿವಾರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡರವರ ಪ್ರತಿಮೆಗೆ ಪುಷ್ಪಾರ್ಚನೆ ಹಾಗೂ ಬೆಳ್ಳಿ ರಥದಲ್ಲಿ ಮೆರವಣಿಗೆ ಆಯೋಜಿಸಲಾಗಿದೆ. ನಂತರ ಬೆಳಿಗ್ಗೆ 10.30ಕ್ಕೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಎ. ಇಕ್ಬಾಲ್ ಹುಸೇನ್ ಅವರು ಅಧ್ಯಕ್ಷತೆ ವಹಿಸುವರು.

# ವಲಸೆ: ಗಡಿ ದಾಟುವ ಬದುಕು, ಜಗತ್ತನ್ನು ಬೆಸೆಯುವ ಜೀವಾಳ



ಮೈಸೂರಿನಿಂದ ಬೆಂಗಳೂರಿಗೆ ಹಿಂದಿರುಗುವ ಆ ಹೆದ್ದಾರಿ ಪ್ರಯಾಣದಲ್ಲಿ ಅಂದು ಎಂದಿನ ಗಡಿಬಿಡಿ ಇರಲಿಲ್ಲ. ಸಂಜೆಯ ತಂಪು ಗಾಳಿಗೆ ಮೈಯೊಡ್ಡಿ, ದಣಿವು ಆರಿಸಿಕೊಳ್ಳಲು ಹೆದ್ದಾರಿಯ ಒಂದು ಹೋಟೆಲ್ ಎದುರು ಗಾಡಿ ನಿಲ್ಲಿಸಿದೆವು. ನಮ್ಮ ಮೇಜಿನ ಬಳಿ ಬಂದು ವಿನಮ್ರತೆಯಿಂದ ಕಾಫಿ ಲೋಟಗಳನ್ನು ಇರಿಸಿದ ಆ ಮಹಿಳೆಯ ಮುಖದಲ್ಲಿ ಸೌಮ್ಯತೆ ಇತ್ತು. ಕುತೂಹಲ ತಡೆಯಲಾರದೆ, "ನಿಮ್ಮೂರು ಯಾವುದು?" ಎಂದು ಕೇಳಿದೆ. ಆಕೆ ಮಂದಹಾಸ ಬೀರುತ್ತಾ, "ವೆಸ್ಟ್ ಬೆಂಗಾಲ್" ಎಂದಳು.

ಆ ಒಂದು ಸಣ್ಣ ಉತ್ತರ ನನ್ನನ್ನು ಕ್ಷಣಕಾಲ ದಿಗ್ಭ್ರಮೆಗೊಳಿಸಿತು. ಭಾಷೆ, ಆಹಾರ, ಆಚಾರಗಳ ಸಂಪೂರ್ಣ ಭಿನ್ನತೆಯಿರುವ ಕಲ್ಕತ್ತಾದ ಗಡಿಯಿಂದ ಹೊರಟು, ಕರ್ನಾಟಕದ ಈ ಯಾವುದೋ ಒಂದು ಹೆದ್ದಾರಿಯ ಹೋಟೆಲ್‌ಗೆ ಬಂದು ಆಕೆ ನಿಂತಿದ್ದಾಳೆ! ಪ್ರಯಾಣದ ಬಾಕಿ ಹಾದಿಯುದ್ದಕ್ಕೂ ನಾನೂ ನನ್ನ ಪತ್ನಿಯೂ ಇದೇ ವಿಷಯದ ಬಗ್ಗೆ ಆಳವಾದ ಚರ್ಚೆಯಲ್ಲಿ ಮುಳುಗಿದ್ದೆವು. ರಾತ್ರಿ ಊಟ ಮುಗಿಸಿ ಕುಳಿತಾಗಲೂ ಆಕೆಯ ಮುಖವೇ ಕಣ್ಣಮುಂದೆ ಸುಳಿದಾಡುತ್ತಿತ್ತು. ಆತ್ಮೀಯತೆಯಿಂದ ಹಸನ್ಮುಖಿಯಾಗಿ ಕಾಫಿ ನೀಡಿದ ಆ ಶ್ರಮಜೀವಿ, ನನ್ನನ್ನು ಮಾನವ ಇತಿಹಾಸದ ಅತ್ಯಂತ ಪ್ರಬಲ ಸತ್ಯವೊಂದರ ಕಡೆಗೆ ಮುಖಮಾಡುವಂತೆ ಮಾಡಿದ್ದಳು. ಅದುವೇ?ವಲಸೆ (Migration).

**ವಲಸೆಯ ಉಗಮ ಮತ್ತು ಇತಿಹಾಸ**

ಮಾನವ ಇತಿಹಾಸ ಎನ್ನುವುದೇ ಮೂಲಭೂತವಾಗಿ ವಲಸೆಯ ಇತಿಹಾಸ. ಇಂದು ನಾವು ಸ್ಥಿರವಾಗಿ ಮನೆಗಳನ್ನು ಕಟ್ಟಿ ಒಂದೆಡೆ ಬದುಕುತ್ತಿದ್ದೇವೆ ಎಂದರೆ, ಅದಕ್ಕೆ ಕಾರಣ ನಮ್ಮ ಪೂರ್ವಜರು ನಡೆಸಿದ ನಿರಂತರ ಜಾಗತಿಕ ಪ್ರಯಾಣಗಳು. ಇತಿಹಾಸಕಾರರ ಪ್ರಕಾರ, ಸುಮಾರು ಅರವತ್ತು ಸಾವಿರ ವರ್ಷಗಳ ಹಿಂದೆ ಆಧುನಿಕ ಮಾನವ (Homo sapiens) ಆಫ್ರಿಕಾ ಖಂಡದ ತನ್ನ ಮೂಲ ನೆಲೆಯಿಂದ ಹೊರಟು ಜಗತ್ತಿನ ಬೇರೆ ಬೇರೆ ಮೂಲೆಗಳಿಗೆ ವಲಸೆ ಹೋದನು.

ಕಾಡಿನ ಪ್ರಾಣಿಗಳ ಬೇಟೆ ಮತ್ತು ಹಣ್ಣು-ಹಂಪಲುಗಳ ಹುಡುಕಾಟಕ್ಕಾಗಿ ಅಲೆದಾಡುತ್ತಿದ್ದ ಆ ಕಾಲದ ಮನುಷ್ಯನಿಗೆ ಯಾವುದೇ ಭೌಗೋಳಿಕ ಗಡಿಗಳಿರಲಿಲ್ಲ. ಪ್ರಕೃತಿಯ ಕಠಿಣ ಬದಲಾವಣೆಗಳಿಗೆ ತಕ್ಕಂತೆ ಬದುಕುಳಿಯಲು ಆತ ನಿರಂತರವಾಗಿ ಜಾಗ ಬದಲಾಯಿಸುತ್ತಲೇ ಇದ್ದನು. ಹೀಗೆ ನಡೆದ ಅಲೆಮಾರಿ ಬದುಕೇ ಇಂದಿನ ಆಧುನಿಕ ಪ್ರಪಂಚದ ಅಡಿಪಾಯ.

**ಸಿಂಧೂ ನಾಗರಿಕತೆ ಮತ್ತು ವಲಸೆಯ ವಿಕಾಸ**

ನಮ್ಮ ಭಾರತೀಯ ಉಪಖಂಡದ ಇತಿಹಾಸವನ್ನು ಗಮನಿಸಿದರೆ, ಜಗತ್ತಿನ ಶ್ರೇಷ್ಠ ಹಾಗೂ ಅತ್ಯಂತ ವ್ಯವಸ್ಥಿತ ನಾಗರಿಕತೆಯಾದ ಹರಪ್ಪ ಮತ್ತು ಮೊಹೆಂಜೋದಾರೋ (ಸಿಂಧೂ ಬಯಲಿನ ನಾಗರಿಕತೆ) ವಲಸೆಯ ತಳಹದಿಯ ಮೇಲೆಯೇ ನಿರ್ಮಾಣವಾಯಿತು.

ವಿವಿಧ ಪ್ರಾಕೃತಿಕ ಕಾರಣಗಳಿಂದಾಗಿ ಮಧ್ಯ ಏಷ್ಯಾ ಹಾಗೂ ಇರಾನಿನ ಪ್ರಸ್ಥಭೂಮಿಯಿಂದ ವಲಸೆ ಬಂದ ಕೃಷಿಕರು ಮತ್ತು ಕುರಿಗಾಹಿಗಳು ಸಿಂಧೂ ನದಿಯ ಫಲವತ್ತಾದ ತೀರದಲ್ಲಿ ಬಂದು ಒಟ್ಟಿಗೆ ನೆಲೆಸಿದರು. ಹೀಗೆ ಬೇರೆ ಬೇರೆ ಕಡೆಯಿಂದ ಬಂದ ಜನರ ಜ್ಞಾನ, ತಂತ್ರಜ್ಞಾನ ಮತ್ತು ಶ್ರಮ ಸಂಗಮವಾದಾಗ ಅಲ್ಲಿ ವ್ಯವಸ್ಥಿತ ನಗರಗಳು, ಅದ್ಭುತ ಒಳಚರಂಡಿ ವ್ಯವಸ್ಥೆ ಮತ್ತು ಜಾಗತಿಕ ವ್ಯಾಪಾರ ಜಾಲಗಳು ರೂಪುಗೊಂಡವು. ವಲಸೆ ಎನ್ನುವುದು ನಾಗರಿಕತೆಯನ್ನು ವಿನಾಶದ ಕಡೆಗೆ ತಳ್ಳುವುದಿಲ್ಲ, ಬದಲಿಗೆ ಹೊಸ ವಿಕಾಸಕ್ಕೆ ನಾಂದಿ ಹಾಡುತ್ತದೆ ಎಂಬುದಕ್ಕೆ ಸಿಂಧೂ ನಾಗರಿಕತೆಯೇ ಸಾಕ್ಷಿ.

**ಪ್ರಕೃತಿಯ ಸಹಜ ನಿಯಮ: ಪ್ರಾಣಿ-ಪಕ್ಷಿಗಳ ವಲಸೆ**

ಕೇವಲ ಮನುಷ್ಯ ಮಾತ್ರವಲ್ಲ, ಈ ಭೂಮಿಯ ಮೇಲಿನ ಜೀವಸಂಕುಲಕ್ಕೆ ವಲಸೆ ಎನ್ನುವುದು ಅಸ್ತಿತ್ವದ ಹೋರಾಟ ಮತ್ತು ಸಹಜ ಪ್ರವೃತ್ತಿ. ಹವಾಮಾನ ಬದಲಾದಾಗ ಆಹಾರ ಮತ್ತು ಸಂತಾನೋತ್ಪತ್ತಿಗಾಗಿ ಪಕ್ಷಿಗಳು ಮತ್ತು ಪ್ರಾಣಿಗಳು ಇಡೀ ಖಂಡಗಳನ್ನೇ ದಾಟಿ ಸಾವಿರಾರು ಮೈಲಿ ಕ್ರಮಿಸುತ್ತವೆ.

ಪಟ್ಟೆತಲೆ ಹೆಬ್ಬಾತುಗಳು (Bar-headed geese): ಪ್ರತಿ ಚಳಿಗಾಲದಲ್ಲಿ ಮಂಗೋಲಿಯಾ ಮತ್ತು ಸೈಬೀರಿಯಾದ ತೀವ್ರ ಚಳಿಯಿಂದ ಪಾರಾಗಲು ಇವು ಹೊರಡುತ್ತವೆ. ಜಗತ್ತಿನ ಅತಿ ಎತ್ತರದ, ಆಮ್ಲಜನಕವೇ ಇರದ ಹಿಮಾಲಯ ಪರ್ವತ ಶ್ರೇಣಿಗಳ ಮೇಲಿಂದಲೇ ಹಾರಿ ಬಂದು ನಮ್ಮ ಮೈಸೂರಿನ ಕೆರೆಗಳಲ್ಲಿ ಇವು ಆಶ್ರಯ ಪಡೆಯುತ್ತವೆ.

ಮೊನಾರ್ಕ್ ಚಿಟ್ಟೆಗಳು (Monarch Butterflies): ಕೇವಲ ಎರಡು ಗ್ರಾಂ ತೂಕದ ಈ ಪುಟ್ಟ ಚಿಟ್ಟೆಗಳು ಕೆನಡಾದಿಂದ ಮೆಕ್ಸಿಕೋಗೆ ಸುಮಾರು 4,000 ಕಿಲೋಮೀಟರ್ ದೂರ ವಲಸೆ ಹೋಗುತ್ತವೆ.

ಆಫ್ರಿಕಾದ ಕಾಡುಕೋಣಗಳು (Wildebeests): ಆಫ್ರಿಕಾದ ಸೆರೆಂಗೆಟಿಯಿಂದ ಮಸಾಯಿ ಮಾರಾ ನಡುವೆ ಲಕ್ಷಾಂತರ ಕಾಡುಕೋಣಗಳು, ಜೀಬ್ರಾಗಳು ನೀರಿನ ಹಸಿರು ಹುಲ್ಲಿನ ಹುಡುಕಾಟದಲ್ಲಿ ನೈಲ್ ಮೊಸಳೆಗಳಿರುವ ನದಿಗಳನ್ನು ದಾಟಿ ನಡೆಸುವ ವಲಸೆ ಪ್ರಕೃತಿಯ ಅತ್ಯಂತ ರೋಮಾಂಚಕ ದೃಶ್ಯಗಳಲ್ಲೊಂದು.

ಆರ್ಕ್ಟಿಕ್ ಟರ್ನ್ (Arctic Tern): ಈ ಪುಟ್ಟ ಹಕ್ಕಿ ಜಗತ್ತಿನಲ್ಲೇ ಅತಿ ಉದ್ದದ ವಲಸೆ ಕೈಗೊಳ್ಳುತ್ತದೆ. ಆರ್ಕ್ಟಿಕ್‌ನಿಂದ ಅಂಟಾರ್ಕ್ಟಿಕಾ ಧ್ರುವದವರೆಗೆ ವರ್ಷಕ್ಕೆ ಸುಮಾರು 70,000 ಕಿಲೋಮೀಟರ್ ಹಾರುವ ಈ ಹಕ್ಕಿ, ತನ್ನ ಜೀವಿತಾವಧಿಯಲ್ಲಿ ಭೂಮಿಯಿಂದ ಚಂದ್ರನಿಗೆ ಮೂರು ಬಾರಿ ಹೋಗಿ ಬರುವಷ್ಟು ದೂರ ಕ್ರಮಿಸುತ್ತದೆ!

ವಲಸೆಯ ಅನಿವಾರ್ಯತೆ ಮತ್ತು ಕಾರಣಗಳು

ಮನುಷ್ಯ ಏಕೆ ವಲಸೆ ಹೋಗುತ್ತಾನೆ? ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರದಲ್ಲಿ ಇದನ್ನು ಪ್ರಮುಖವಾಗಿ ಎರಡು ಅಂಶಗಳಾಗಿ ವಿಂಗಡಿಸುತ್ತಾರೆ:

**ಪುಶ್ ಫ್ಯಾಕ್ಟರ್ಸ್ (ತಳ್ಳುವ ಅಂಶಗಳು):** ಸ್ವಂತ ಊರಿನಲ್ಲಿ ಎದುರಾಗುವ ಕಡು ಬಡತನ, ಉದ್ಯೋಗದ ಕೊರತೆ, ರಾಜಕೀಯ ಅಸ್ಥಿರತೆ, ಯುದ್ಧ ಅಥವಾ ಹವಾಮಾನ ವೈಪರೀತ್ಯದಂತಹ ನೈಸರ್ಗಿಕ ವಿಕೋಪಗಳು ಮನುಷ್ಯನನ್ನು ಆ ನೆಲದಿಂದ ಹೊರಹೋಗುವಂತೆ ಒತ್ತಾಯಿಸುತ್ತವೆ. ಇತಿಹಾಸದಲ್ಲಿ ರೋಮನ್ ಸಾಮ್ರಾಜ್ಯದ ಪತನದ ಕಾಲದ ಜರ್ಮನಿಕ್ ಬುಡಕಟ್ಟುಗಳ ವಲಸೆ ಅಥವಾ 1947ರ ಭಾರತದ ದೇಶ ವಿಭಜನೆಯ ಸಂದರ್ಭದಲ್ಲಿ ಕೋಟ್ಯಂತರ ಜನರು ಕಣ್ಣೀರಿನಲ್ಲಿ ನಡೆಸಿದ ವಲಸೆ ಇದಕ್ಕೆ ಉದಾಹರಣೆ.

ಪುಲ್ ಫ್ಯಾಕ್ಟರ್ಸ್ (ಸೆಳೆಯುವ ಅಂಶಗಳು): ಉತ್ತಮ ಆರ್ಥಿಕ ಅವಕಾಶಗಳು, ಸುರಕ್ಷಿತ ವಾತಾವರಣ, ಉನ್ನತ ಶಿಕ್ಷಣ ಮತ್ತು ಬದುಕಿನ ಭರವಸೆಗಳು ಜನರನ್ನು ಹೊಸ ಜಾಗದ ಕಡೆಗೆ ಆಕರ್ಷಿಸುತ್ತವೆ. 19ನೇ ಶತಮಾನದಲ್ಲಿ ಲಕ್ಷಾಂತರ ಯುರೋಪಿಯನ್ನರು ಅವಕಾಶಗಳ ಹುಡುಕಾಟದಲ್ಲಿ ಅಮೆರಿಕಕ್ಕೆ ವಲಸೆ ಹೋದದ್ದು ಇದೇ ಕಾರಣಕ್ಕಾಗಿ.

**ಆಧುನಿಕ ಭಾರತದ ಎರಡು ಮುಖಗಳು**

ಇಂದಿನ ಜಾಗತೀಕರಣದ ಯುಗದಲ್ಲಿ ಭಾರತದ ವಲಸೆಗೆ ಎರಡು ವಿಭಿನ್ನ ಮುಖಗಳಿವೆ. ಒಂದು?ಬದುಕುಳಿಯಲು ಶ್ರಮಪಡುವ ದೈಹಿಕ ಕಾರ್ಮಿಕರ ವಲಸೆ; ಮತ್ತೊಂದು?ಉತ್ತಮ ವೃತ್ತಿಜೀವನಕ್ಕಾಗಿ ಮೆಟ್ರೋ ನಗರಗಳಿಗೆ ಬರುವ ಐಟಿ-ಬಿಟಿ ವೃತ್ತಿಪರರ 'ವೈಟ್ ಕಾಲರ್' (White-collar) ವಲಸೆ.

ನಮ್ಮ ಹೆದ್ದಾರಿಯ ಹೋಟೆಲ್‌ನಲ್ಲಿ ಸಿಕ್ಕ ಬಂಗಾಳಿ ಮಹಿಳೆ ಒಂದು ಮುಖವಾದರೆ, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುವ ದಿಲ್ಲಿಯ ಅಥವಾ ಮುಂಬೈನ ಯುವಕ ಮತ್ತೊಂದು ಮುಖ. ಇಬ್ಬರ ಸಾಮಾಜಿಕ ಮತ್ತು ಭೌಗೋಳಿಕ ಹಿನ್ನೆಲೆ ಸಂಪೂರ್ಣ ಬೇರೆಯಾಗಿರಬಹುದು, ಆದರೆ ಇಬ್ಬರನ್ನೂ ಮುನ್ನಡೆಸುತ್ತಿರುವುದು ಮಾತ್ರ ಒಂದೇ ಆಕಾಂಕ್ಷೆ: 'ಆರ್ಥಿಕ ಭದ್ರತೆ ಮತ್ತು ಪ್ರಗತಿ'.

**ವಲಸಿಗರು ಎದುರಿಸುವ ಮಾನಸಿಕ ಮತ್ತು ಸಾಮಾಜಿಕ ಸವಾಲುಗಳು**

ಆದರೆ, ಈ ಸ್ಥಿತ್ಯಂತರ ಅಷ್ಟು ಸುಲಭದ್ದಲ್ಲ. ಹೊಸದೊಂದು ಮಣ್ಣಿಗೆ ಬಂದಾಗ ಎದುರಾಗುವ ಭಾಷೆಯ ಗೋಡೆ, ಸಾಂಸ್ಕೃತಿಕ ಭಿನ್ನತೆ, ಅಪರಿಚಿತ ಆಹಾರ ಪದ್ಧತಿ ಮತ್ತು ಸ್ಥಳೀಯರ ಕಣ್ಣಿನಲ್ಲಿ ಕಾಣುವ 'ಹೊರಗಿನವರು' ಎಂಬ ಸಂಶಯದ ಭಾವನೆ ವಲಸಿಗರನ್ನು ಮಾನಸಿಕವಾಗಿ ತೀವ್ರವಾಗಿ ಕಾಡುತ್ತದೆ. ತಾಯ್ನಾಡಿನ ನೆನಪು, ಹಬ್ಬ ಹರಿದಿನಗಳಲ್ಲಿ ಕಾಡುವ ಒಂಟಿತನ ಸುಲಭವಾಗಿ ಭರಿಸುವಂತದ್ದಲ್ಲ. ಆ ಹೆದ್ದಾರಿಯ ಹೋಟೆಲ್ ಮಹಿಳೆ ಕೂಡ ತನ್ನೂರಿನ ದುರ್ಗಾ ಪೂಜೆಯನ್ನು ನೆನೆದು ಕಣ್ಣೀರಿಟ್ಟಿರಬಹುದು, ಇಲ್ಲಿನ ಭಾಷೆ ತಿಳಿಯದೇ ಮೌನಕ್ಕೆ ಶರಣಾಗಿರಬಹುದು. ಆದರೂ ಆಕೆಯ ಮುಖದ ಮೇಲಿನ ಸೌಮ್ಯವಾದ ನಗು, ಮನುಷ್ಯನ ಅಪ್ರತಿಮ ಹೊಂದಾಣಿಕೆಯ ಗುಣಕ್ಕೆ ಸಾಕ್ಷಿ.

ವಲಸೆ ಎನ್ನುವುದು ಕೇವಲ ಜನರ ಸ್ಥಳಾಂತರವಲ್ಲ; ಅದು ಸಂಸ್ಕೃತಿ, ಭಾಷೆ, ವಿಚಾರ ಮತ್ತು ವಿಭಿನ್ನ ಕೌಶಲ್ಯಗಳ ಅಪೂರ್ವ ಸಮ್ಮಿಲನ.

ಸ್ವೀಕಾರ ಮನೋಭಾವ ಮತ್ತು ಸಾಂಸ್ಕೃತಿಕ ಕೊಡುಗೆ

ಯಾವಾಗಲೂ ವಲಸೆ ಬಂದವರು ಸ್ಥಳೀಯ ಆರ್ಥಿಕತೆಗೆ ದೊಡ್ಡ ಇಂಧನವಾಗುತ್ತಾರೆ. ಕಟ್ಟಡ ನಿರ್ಮಾಣ, ಹೋಟೆಲ್ ಉದ್ಯಮ, ಕೃಷಿ, ರಸ್ತೆ ಕಾಮಗಾರಿ?ಹೀಗೆ ಸ್ಥಳೀಯ ಸಮಾಜದಲ್ಲಿ ಜನಶಕ್ತಿಯ ಕೊರತೆ ಇರುವ ಕಡೆಗಳಲ್ಲಿ ಇವರ ಶ್ರಮವೇ ದೇಶವನ್ನು ಮುನ್ನಡೆಸುತ್ತದೆ. ನಮ್ಮ ಮೆಟ್ರೋ ರೈಲು ಹಳಿಗಳಿಂದ ಹಿಡಿದು ಹೋಟೆಲ್‌ನ ತಟ್ಟೆಯ ಮೇಲಿನ ಅನ್ನದವರೆಗೆ ಎಲ್ಲದರಲ್ಲೂ ಇವರ ಅದೃಶ್ಯ ಶ್ರಮದ ಹನಿಗಳಿವೆ.

ಪ್ರಕೃತಿಯಲ್ಲಿ ಹಕ್ಕಿಗಳು ಹೇಗೆ ಒಂದು ಮರದಿಂದ ಮತ್ತೊಂದು ಮರಕ್ಕೆ ಹಾರಿ ಪರಾಗಸ್ಪರ್ಶ ಮಾಡಿ ಇಡೀ ಕಾಡನ್ನು ಶ್ರೀಮಂತಗೊಳಿಸುತ್ತವೆಯೋ, ಹಾಗೆಯೇ ಮನುಷ್ಯರ ವಲಸೆಯೂ ಸಮಾಜವನ್ನು ಸಾಂಸ್ಕೃತಿಕವಾಗಿ ವಿಸ್ತರಿಸುತ್ತದೆ. ಹೊಸ ಆಹಾರ, ಹೊಸ ಆಚಾರಗಳು ಸ್ಥಳೀಯ ಸಂಸ್ಕೃತಿಯನ್ನು ಮತ್ತಷ್ಟು ವೈವಿಧ್ಯಮಯವಾಗಿಸುತ್ತವೆ.

ಬೆಂಗಳೂರು ಮೈಸೂರು ರಸ್ತೆಯ ಹೆದ್ದಾರಿಯ ಆ ಹೋಟೆಲ್ ನನಗೆ ಇಡೀ ಭಾರತದ ಒಂದು ಸಣ್ಣ ರೂಪದಂತೆ ಕಂಡಿತು. ಅಲ್ಲಿ ಕನ್ನಡದ ಮಣ್ಣಿನಲ್ಲಿ, ಬಂಗಾಳದ ಶ್ರಮವಿತ್ತು. ಮನುಷ್ಯನಿಗೆ ಹಕ್ಕಿಗಳಂತೆ ರೆಕ್ಕೆಗಳಿಲ್ಲದೇ ಇರಬಹುದು, ಆದರೆ ಬದುಕನ್ನು ಭರವಸೆಯಿಂದ ಕಟ್ಟಿಕೊಳ್ಳಬೇಕೆಂಬ ಆಕೆಯ ಆಸೆ ಮತ್ತು ಅದಕ್ಕಾಗಿ ಕೈಗೊಂಡ ಸುದೀರ್ಘ ಪ್ರಯಾಣ, ಹಿಮಾಲಯ ದಾಟಿ ಬರುವ ಪಕ್ಷಿಗಳಿಗಿಂತ ಭಿನ್ನವೇನಲ್ಲ.

ವಲಸಿಗರನ್ನು ಕೇವಲ 'ಅಪರಿಚಿತರು' ಎಂದು ದೂರವಿಡದೆ, ನಮ್ಮದೇ ಸಮಾಜದ ಚಾಲಕ ಶಕ್ತಿಯಾಗಿ ಗೌರವದಿಂದ ಸ್ವೀಕರಿಸುವುದರಲ್ಲೇ ನಾಗರಿಕತೆಯ ನಿಜವಾದ ಪ್ರಬುದ್ಧತೆ ಅಡಗಿದೆ. ವಲಸೆ ಎನ್ನುವುದು ಜಗತ್ತನ್ನು ಬೆಸೆಯುವ, ಮಾನವೀಯತೆಯನ್ನು ಜೀವಂತವಾಗಿಡುವ ಒಂದು ನಿರಂತರ ಪ್ರಕೃತಿ ನಿಯಮ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

---

# ಖಾಲಿ ಕೈಗಳ ಪ್ರಯಾಣ ? ಭಗವಂತನ ಲೀಲೆ



| ಶಿವಬಸಪ್ಪ ಗು. ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಈ ಭೂಮಿಯ ಮೇಲೆ ಮನುಷ್ಯನ ಆಗಮನವೇ ಒಂದು ಅದ್ಭುತ. ತಾಯಿಯ ಗರ್ಭದಿಂದ ಹೊರಬರುವ ಮಗು ತನ್ನೊಂದಿಗೆ ಏನನ್ನೂ ತರುವುದಿಲ್ಲ. ಅದರ ಕೈಗಳು ಖಾಲಿ, ಮನಸ್ಸು ಖಾಲಿ, ಬದುಕಿನ ಪುಸ್ತಕದ ಪುಟಗಳೂ ಖಾಲಿ. ಆದರೆ ಆ ಖಾಲಿತನದೊಳಗೆ ಅನಂತ ಸಾಧ್ಯತೆಗಳು ಅಡಗಿರುತ್ತವೆ. ಇದೇ ಭಗವಂತನ ಆಟ. ಪ್ರತಿಯೊಬ್ಬ ಮನುಷ್ಯನಿಗೂ ದೇವರು ಸಮಾನವಾದ ಆರಂಭವನ್ನು ನೀಡಿದ್ದಾನೆ. ಜನನದ ಕ್ಷಣದಲ್ಲಿ ಯಾರೂ ಶ್ರೀಮಂತರಲ್ಲ, ಯಾರೂ ಬಡವರಲ್ಲ; ಯಾರೂ ರಾಜರಲ್ಲ, ಯಾರೂ ಸಾಮಾನ್ಯರಲ್ಲ. ಎಲ್ಲರೂ ಒಂದೇ ರೀತಿಯ ಖಾಲಿತನದೊಂದಿಗೆ ಈ ಲೋಕಕ್ಕೆ ಕಾಲಿಡುತ್ತಾರೆ.

**ಬದುಕಿನ ಸಂಗ್ರಹದ ಪಯಣ:** ಹುಟ್ಟುವಾಗ ಖಾಲಿ ಕೈಯಲ್ಲಿ ಬಂದ ಮನುಷ್ಯ, ಬೆಳೆಯುತ್ತಾ ಅನೇಕ ಕನಸುಗಳನ್ನು ಕಟ್ಟಿಕೊಳ್ಳುತ್ತಾನೆ. ಶಿಕ್ಷಣ ಪಡೆಯುತ್ತಾನೆ, ಉದ್ಯೋಗ ಮಾಡುತ್ತಾನೆ, ಹಣ ಸಂಪಾದಿಸುತ್ತಾನೆ, ಮನೆ ಕಟ್ಟುತ್ತಾನೆ, ಆಸ್ತಿ ಗಳಿಸುತ್ತಾನೆ, ಸಮಾಜದಲ್ಲಿ ಹೆಸರು ಮಾಡುತ್ತಾನೆ. ತನ್ನ ಸುತ್ತಲೂ ಒಂದು ಪ್ರಪಂಚವನ್ನೇ ನಿರ್ಮಿಸಿಕೊಳ್ಳುತ್ತಾನೆ. ಈ ಸಾಧನೆಗಳೆಲ್ಲವೂ ಬದುಕಿನ ಒಂದು ಭಾಗ. ಆದರೆ ಅನೇಕ ಬಾರಿ ಮನುಷ್ಯ ಅವುಗಳನ್ನೇ ಬದುಕಿನ ಸಂಪೂರ್ಣ ಅರ್ಥವೆಂದು ಭಾವಿಸುತ್ತಾನೆ.

ಒಂದು ಗುರಿ ತಲುಪಿದ ತಕ್ಷಣ ಮತ್ತೊಂದು ಗುರಿಯ ಹಿಂದೆ ಓಡುತ್ತಾನೆ. ಒಂದು ಮನೆ ಇದ್ದರೆ ಮತ್ತೊಂದು ದೊಡ್ಡ ಮನೆ ಬೇಕೆಂದು ಬಯಸುತ್ತಾನೆ. ಒಂದು ಸಾಧನೆ ಮಾಡಿದರೆ ಇನ್ನಷ್ಟು ಪ್ರಶಂಸೆ ಪಡೆಯಬೇಕೆಂದು ಹಂಬಲಿಸುತ್ತಾನೆ. ಹೀಗೆ "ಇನ್ನೂ ಸ್ವಲ್ಪ" ಎಂಬ ಆಸೆಯ ಹಿಂದೆ ಓಡುತ್ತಾ ಬದುಕಿನ ನಿಜವಾದ ಸೌಂದರ್ಯವನ್ನು ಕಳೆದುಕೊಳ್ಳುತ್ತಾನೆ.

**ಮರಳಿನ ಕೋಟೆಯಂತಿರುವ ವೈಭವ:** ಮನುಷ್ಯನ ಬದುಕು ಸಮುದ್ರ ತೀರದಲ್ಲಿ ಮಕ್ಕಳ ಕಟ್ಟುವ ಮರಳಿನ ಕೋಟೆಯಂತೆ. ಕಟ್ಟುವಾಗ ಅದು ಅರಮನೆಯಂತೆ ಕಾಣುತ್ತದೆ. ಅದನ್ನು ನೋಡಿ ಮಕ್ಕಳು ಸಂತೋಷಪಡುತ್ತಾರೆ. ಆದರೆ ಒಂದು ಅಲೆ ಬಂದರೆ ಸಾಕು, ಆ ಕೋಟೆ ಕ್ಷಣಾರ್ಧದಲ್ಲಿ ಮಾಯವಾಗುತ್ತದೆ.

ಹಾಗೆಯೇ ನಮ್ಮ ಸಂಪತ್ತು, ಅಧಿಕಾರ, ಅಹಂಕಾರ, ವೈಭವ, ಖ್ಯಾತಿ ಇವೆಲ್ಲವೂ ಕಾಲದ ಮುಂದೆ ಶಾಶ್ವತವಲ್ಲ. ಇಂದು ನಮ್ಮದಾಗಿರುವುದು ನಾಳೆ ಮತ್ತೊಬ್ಬರದಾಗಬಹುದು. ನಾವು ಹೆಮ್ಮೆಪಡುವ ಎಲ್ಲವೂ ಒಂದು ದಿನ ನೆನಪುಗಳಾಗಿ ಉಳಿಯಬಹುದು. ಈ ಸತ್ಯವನ್ನು ಅರಿತಾಗಲೇ ಮನುಷ್ಯನಿಗೆ ವಿನಯದ ಮಹತ್ವ ಅರ್ಥವಾಗುತ್ತದೆ.

**ನಾವು ಕೇವಲ ಪ್ರಯಾಣಿಕರು:** ಭಗವಂತನು ಈ ಲೋಕವನ್ನು ಶಾಶ್ವತ ವಾಸಸ್ಥಳವಾಗಿ ನೀಡಿಲ್ಲ. ಇದು ಕೇವಲ ಒಂದು ತಂಗುದಾಣ. ಇಲ್ಲಿ ನಾವು ಪ್ರಯಾಣಿಕರು ಮಾತ್ರ. ರೈಲಿನಲ್ಲಿ ಕೆಲವೇ ಗಂಟೆಗಳ ಕಾಲ ಒಟ್ಟಿಗೆ ಪ್ರಯಾಣಿಸುವವರಂತೆ, ಈ ಜೀವನದ ಪಯಣದಲ್ಲೂ ನಾವು ಕೆಲಕಾಲ ಮಾತ್ರ ಜೊತೆಯಾಗಿರುತ್ತೇವೆ.

ಕೆಲವರು ಮೊದಲು ಇಳಿಯುತ್ತಾರೆ, ಕೆಲವರು ನಂತರ ಇಳಿಯುತ್ತಾರೆ. ಆದರೆ ಎಲ್ಲರ ಗಮ್ಯ ಒಂದೇ. ಈ ಸತ್ಯವನ್ನು ಮರೆತು ಮನುಷ್ಯ ಶಾಶ್ವತತೆಯ ಭ್ರಮೆಯಲ್ಲಿ ಬದುಕುತ್ತಾನೆ. ಸಂಬಂಧಗಳು, ಸಂಪತ್ತು, ಅಧಿಕಾರ ಇವೆಲ್ಲವೂ ಶಾಶ್ವತವೆಂದು ಭಾವಿಸುತ್ತಾನೆ. ಆದರೆ ಕಾಲ ಎಲ್ಲರಿಗೂ ಒಂದೇ ಉತ್ತರವನ್ನು ನೀಡುತ್ತದೆ.

**ನೆನಪಾಗುವುದು ಸಂಪತ್ತಲ್ಲ, ಮಾನವೀಯತೆ:** ಹಣದ ಹಿಂದೆ ಓಡುವ ಮನುಷ್ಯ ಅನೇಕ ಬಾರಿ ಜೀವನದ ನಿಜವಾದ ಸಂತೋಷವನ್ನು ಕಳೆದುಕೊಳ್ಳುತ್ತಾನೆ. ಪ್ರೀತಿಸುವವರ ಜೊತೆ ಕಳೆಯಬೇಕಾದ ಕ್ಷಣಗಳನ್ನು ಮುಂದೂಡುತ್ತಾನೆ. ಕುಟುಂಬದವರೊಂದಿಗೆ ಹಂಚಿಕೊಳ್ಳಬೇಕಾದ ಸಮಯವನ್ನು ಕೆಲಸದ ಒತ್ತಡಕ್ಕೆ ಅರ್ಪಿಸುತ್ತಾನೆ.

ಆದರೆ ಜೀವನದ ಸಂಜೆಯ ವೇಳೆಯಲ್ಲಿ ನೆನಪಾಗುವುದು ಬ್ಯಾಂಕ್ ಖಾತೆಯ ಅಂಕೆಗಳು ಅಲ್ಲ. ನೆನಪಾಗುವುದು ತಾಯಿಯ ಪ್ರೀತಿ, ತಂದೆಯ ತ್ಯಾಗ, ಸ್ನೇಹಿತರ ನಗು, ಮಕ್ಕಳ ಮಮತೆ, ಯಾರಿಗಾದರೂ ಮಾಡಿದ ಒಂದು ಸಣ್ಣ ಸಹಾಯ. ಹೃದಯಗಳನ್ನು ಮುಟ್ಟಿದ ಕ್ಷಣಗಳೇ ಜೀವನದ ನಿಜವಾದ ಸಂಪತ್ತು.




**ಗುಣವೇ ನಿಜವಾದ ಶ್ರೀಮಂತಿಕೆ:** ಒಬ್ಬ ಬಡವನ ಬಳಿ ಹಣ ಕಡಿಮೆ ಇರಬಹುದು. ಆದರೆ ಅವನ ಹೃದಯದಲ್ಲಿ ಕರುಣೆ ಮತ್ತು ಮಾನವೀಯತೆ ತುಂಬಿರಬಹುದು. ಮತ್ತೊಬ್ಬ ಶ್ರೀಮಂತನ ಬಳಿ ಕೋಟ್ಯಂತರ ರೂಪಾಯಿ ಇರಬಹುದು. ಆದರೆ ಅವನಲ್ಲಿ ಪ್ರೀತಿ, ಸಹಾನುಭೂತಿ ಮತ್ತು ಕರುಣೆ ಇಲ್ಲದಿದ್ದರೆ ಅವನು ಒಳಗಿನಿಂದ ಬಡವನಾಗಿಯೇ ಉಳಿಯುತ್ತಾನೆ.

ಆದ್ದರಿಂದ ಮನುಷ್ಯನ ನಿಜವಾದ ಶ್ರೀಮಂತಿಕೆ ಅವನ ಬ್ಯಾಂಕ್ ಖಾತೆಯಲ್ಲಿ ಇಲ್ಲ; ಅವನ ಗುಣದಲ್ಲಿ ಅಡಗಿದೆ. ಒಳ್ಳೆಯತನ, ಪ್ರಾಮಾಣಿಕತೆ, ವಿನಯ, ಕರುಣೆ ಮತ್ತು ಸತ್ಯನಿಷ್ಠೆ ಇವೇ ಮನುಷ್ಯನ ನಿಜವಾದ ಆಭರಣಗಳು.

**ಕಾಲ ಕಲಿಸುವ ಮಹಾಪಾಠ:** ಕಾಲವು ಎಲ್ಲರಿಗೂ ಒಂದೇ ಪಾಠವನ್ನು ಕಲಿಸುತ್ತದೆ. ರಾಜನಾಗಲಿ, ಸಾಮಾನ್ಯನಾಗಲಿ, ಪಂಡಿತನಾಗಲಿ, ಕೂಲಿಕಾರನಾಗಲಿ ಕೊನೆಯಲ್ಲಿ ಎಲ್ಲರೂ ಒಂದೇ ದಾರಿಯಲ್ಲಿ ನಡೆಯಬೇಕು. ಆ ದಾರಿಯಲ್ಲಿ ಹಣಕ್ಕೆ ಬೆಲೆ ಇಲ್ಲ, ಅಧಿಕಾರಕ್ಕೆ ಸ್ಥಾನ ಇಲ್ಲ.

ಯೌವನದಲ್ಲಿ ನಾವು ಅಜೇಯರೆಂದು ಭಾವಿಸುತ್ತೇವೆ. ಆದರೆ ಕಾಲದ ಹೆಜ್ಜೆಗಳು ಮೌನವಾಗಿದ್ದರೂ ಅತ್ಯಂತ ಶಕ್ತಿಶಾಲಿ. ಒಂದು ದಿನ ಕನ್ನಡಿಯ ಮುಂದೆ ನಿಂತಾಗ ಕಪ್ಪು ಕೂದಲು ಬೆಳ್ಳಗಾಗಿರುತ್ತದೆ. ಚುರುಕಾಗಿದ್ದ ಹೆಜ್ಜೆಗಳು ನಿಧಾನವಾಗಿರುತ್ತವೆ. ಕನಸುಗಳು ನೆನಪುಗಳಾಗಿ ಉಳಿದಿರುತ್ತವೆ. ಆಗ ಬದುಕಿನ ನಿಜವಾದ ಅರ್ಥ ಸ್ಪಷ್ಟವಾಗಲು ಆರಂಭವಾಗುತ್ತದೆ.

**ಕೊಡುವುದೇ ಬದುಕಿನ ಸೌಂದರ್ಯ:** ಮರವು ತನ್ನ ಹಣ್ಣನ್ನು ತಾನೇ ತಿನ್ನುವುದಿಲ್ಲ. ನದಿಯು ತನ್ನ ನೀರನ್ನು ತಾನೇ ಕುಡಿಯುವುದಿಲ್ಲ. ಸೂರ್ಯನು ತನ್ನ ಬೆಳಕನ್ನು ತನ್ನಿಗಾಗಿಯೇ ಹರಿಸುವುದಿಲ್ಲ. ಪ್ರಕೃತಿಯ ಪ್ರತಿಯೊಂದು ಅಂಶವೂ ಕೊಡುವುದನ್ನು ಕಲಿಸುತ್ತದೆ.

ಮನುಷ್ಯ ಮಾತ್ರ ಸಂಗ್ರಹಿಸುವುದರಲ್ಲಿ ಸಂತೋಷ ಹುಡುಕುತ್ತಾನೆ. ಆದರೆ ಕೊಡುವುದರಲ್ಲಿ ಇರುವ ಆನಂದವನ್ನು ಅರಿತಾಗಲೇ ಜೀವನದ ನಿಜವಾದ ಅರ್ಥ ತಿಳಿಯುತ್ತದೆ. ಹಂಚಿದ ಪ್ರೀತಿ ಕಡಿಮೆಯಾಗುವುದಿಲ್ಲ; ಅದು ಇನ್ನಷ್ಟು ಹೆಚ್ಚಾಗುತ್ತದೆ. ಮಾಡಿದ ಸಹಾಯ ವ್ಯರ್ಥವಾಗುವುದಿಲ್ಲ; ಅದು ಮತ್ತೊಬ್ಬರ ಬದುಕಿನಲ್ಲಿ ಬೆಳಕಾಗುತ್ತದೆ.

**ಕಷ್ಟಗಳೂ ಬದುಕಿನ ಶಿಕ್ಷಕರು:** ಜೀವನದಲ್ಲಿ ಎಲ್ಲವೂ ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ. ಕೆಲವೊಮ್ಮೆ ನಷ್ಟಗಳು ಎದುರಾಗುತ್ತವೆ. ನಾವು ಬಹಳ ಅಮೂಲ್ಯವೆಂದು ಭಾವಿಸಿದ್ದವು ಕಣ್ಮರೆಯಾಗುತ್ತವೆ. ಆಗ ನಿರಾಶೆಯಾಗುವ ಬದಲು ಒಂದು ಸತ್ಯವನ್ನು ನೆನಪಿಸಿಕೊಳ್ಳಬೇಕು ? ನಮ್ಮ ಕೈಗಳು ಆರಂಭದಿಂದಲೇ ಖಾಲಿಯಾಗಿದ್ದವು.

ಆದ್ದರಿಂದ ಕಳೆದುಕೊಂಡದ್ದಕ್ಕಾಗಿ ಅತಿಯಾಗಿ ದುಃಖಿಸುವುದಕ್ಕಿಂತ ಉಳಿದಿರುವ ಬದುಕನ್ನು ಸುಂದರಗೊಳಿಸುವ ಪ್ರಯತ್ನ ಮಾಡಬೇಕು. ಪ್ರತಿಯೊಂದು ಕಷ್ಟವೂ ಒಂದು ಪಾಠವನ್ನು ನೀಡುತ್ತದೆ. ಪ್ರತಿಯೊಂದು ನಷ್ಟವೂ ಒಂದು ಹೊಸ ಅರಿವನ್ನು ಹುಟ್ಟಿಸುತ್ತದೆ.

**ಉಳಿಯುವುದು ಒಳ್ಳೆಯತನ ಮಾತ್ರ:** ಮನುಷ್ಯನ ಕೊನೆಯ ಪ್ರಯಾಣದಲ್ಲಿ ಅವನೊಂದಿಗೆ ಸಾಗುವುದು ಕೇವಲ ನಾಲ್ಕು ಜನರ ಹೆಗಲು. ಆದರೆ ಅವನು ಬದುಕಿದ್ದಾಗ ಮಾಡಿದ ಒಳ್ಳೆಯ ಕಾರ್ಯಗಳು ಸಾವಿರಾರು ಹೃದಯಗಳಲ್ಲಿ ಜೀವಂತವಾಗಿರುತ್ತವೆ. ಅದಕ್ಕಾಗಿಯೇ ಮಹನೀಯರು ಸತ್ತ ಮೇಲೆಯೂ ಬದುಕಿರುತ್ತಾರೆ. ಅವರ ದೇಹವಲ್ಲ, ಅವರ ಮೌಲ್ಯಗಳು.

ನಾವು ಬಿಟ್ಟು ಹೋಗುವ ಮನೆಗಳು, ಜಮೀನುಗಳು, ಹಣ, ಆಸ್ತಿ ಇವೆಲ್ಲವೂ ಒಂದು ದಿನ ಬೇರೆಯವರ ಕೈ ಸೇರುತ್ತವೆ. ಆದರೆ ನಾವು ಮಾಡಿದ ಒಂದು ಸಣ್ಣ ಸಹಾಯ, ಒಂದು ಪ್ರೋತ್ಸಾಹದ ಮಾತು, ಒಂದು ಪ್ರೀತಿಯ ಸ್ಪರ್ಶ ಮಾತ್ರ ವರ್ಷಗಳವರೆಗೆ ಜನರ ಮನಸ್ಸಿನಲ್ಲಿ ಉಳಿಯುತ್ತದೆ.

**ಭಗವಂತನ ಲೀಲೆಯ ಸಂದೇಶ:** ಭಗವಂತನ ಈ ಆಟ ವಿಚಿತ್ರವಾದರೂ ಅದರಲ್ಲಿ ಒಂದು ಮಹತ್ತರ ಸಂದೇಶ ಅಡಗಿದೆ. ಅದು ನಮಗೆ ವಿನಯವನ್ನು ಕಲಿಸುತ್ತದೆ. ನಾವು ಯಾವುದಕ್ಕೂ ಶಾಶ್ವತ ಮಾಲೀಕರಲ್ಲ ಎಂಬುದನ್ನು ನೆನಪಿಸುತ್ತದೆ. ಇಂದು ನಮ್ಮದಾಗಿರುವುದು ನಾಳೆ ಇನ್ನೊಬ್ಬರದಾಗಬಹುದು.

ಆದ್ದರಿಂದ ಬದುಕನ್ನು ಪ್ರೀತಿಸೋಣ. ಅಹಂಕಾರವನ್ನು ಬಿಟ್ಟು ಮಾನವೀಯತೆಯನ್ನು ಅಪ್ಪಿಕೊಳ್ಳೋಣ. ಸಂಗ್ರಹಿಸುವುದಕ್ಕಿಂತ ಹಂಚಿಕೊಳ್ಳುವುದನ್ನು ಕಲಿಯೋಣ. ಏಕೆಂದರೆ ಈ ಪ್ರಯಾಣದ ಆರಂಭವು ಖಾಲಿ ಕೈ, ಅಂತ್ಯವು ಖಾಲಿ ಕೈ.

ಹಣ, ಆಸ್ತಿ, ಅಧಿಕಾರ, ವೈಭವ ಇವೆಲ್ಲವೂ ಕಾಲದ ಮುಂದೆ ತಲೆಬಾಗಲೇಬೇಕು. ಆದರೆ ಒಂದು ಒಳ್ಳೆಯ ಹೃದಯ, ಒಂದು ನಿಸ್ವಾರ್ಥ ಸೇವೆ, ಒಂದು ಪ್ರೀತಿಯ ನೆನಪು ಮಾತ್ರ ಕಾಲವನ್ನೂ ಮೀರಿ ಉಳಿಯುತ್ತದೆ. ಅದೇ ಮನುಷ್ಯನ ನಿಜವಾದ ಗೆಲುವು.

ಹುಟ್ಟುವಾಗ ಖಾಲಿ ಕೈ, ಸಾಯುವಾಗ ಖಾಲಿ ಕೈ. ಈ ಎರಡು ಸತ್ಯಗಳ ಮಧ್ಯೆ ನಡೆಯುವ ಜೀವನವೇ ಭಗವಂತನ ಅದ್ಭುತ ಲೀಲೆ. ಆ ಲೀಲೆಯಲ್ಲಿ ಗೆಲ್ಲುವುದು ಹಣದಿಂದಲ್ಲ, ಮಾನವೀಯತೆಯಿಂದ; ಸಂಪತ್ತಿನಿಂದಲ್ಲ, ಸತ್ಪ್ರವೃತ್ತಿಯಿಂದ; ಅಧಿಕಾರದಿಂದಲ್ಲ, ಪ್ರೀತಿಯಿಂದ.

---

# ಅಕ್ಷತೆಯ ಮಹತ್ವ



| ಗಿರಿಜಾ.ಎಸ್. ದೇಶಪಾಂಡೆ.
ಬೆಂಗಳೂರು.

ಅಕ್ಷತ ಎಂದರೆ ಸಂಸ್ಕೃತದಲ್ಲಿ ತುಂಡಾಗದ ಎಂದರ್ಥ. ಕನ್ನಡದಲ್ಲಿ ಅಕ್ಷತೆ ಎಂದಾಗಿದೆ. ಅಕ್ಷತೆ ಶಬ್ದದ ಅರ್ಥ ಯಾವುದು 'ಕ್ಷತ' ವಾಗುವದೋ ಅದು ಎಂದರ್ಥ. ಅಕ್ಷತೆಯು ಹಳದಿ ಮತ್ತು ಕೆಂಪು ಬಣ್ಣಗಳಲ್ಲಿ ದೇವರಿಗೆ ಅರ್ಪಿಸುವ ಪೂಜಾದ್ರವ್ಯವಾಗಿ ಬಳಕೆಯಾಗುತ್ತದೆ.ದೇವತಾನುಗ್ರಹಕ್ಕೆ ,ಗುರುಹಿರಿಯರ ಆಶೀರವಚನಕ್ಕೆ ವಸ್ತುರೂಪವಾಗಿ ಕಾರ್ಯನಿರ್ವಹಿಸುತ್ತದೆ. ಅರ್ಪಣೆ ಮತ್ತು ಅನುಗ್ರಹಗಳ ದ್ವಿಮುಖ ಸಂವಹನೆಯನ್ನು ಅಕ್ಷತೆ ನಿಭಾಯಿಸುತ್ತದೆ. ಇದು ಫಲಾಪೇಕ್ಷೆಯ ಬೀಜವೂ ಹೌದು.ಬೀಜ ಮೊಳೆತು ಪಕ್ವವಾಗಿ ಸಿಗುವ ಫಲವೂ ಆಗಿದೆ. ಮದುವೆ,ಮುಂಜಿ ವಿಶೇಷ ಕಾರ್ಯಕ್ರಮಗಳಿಗೆ ಅಕ್ಷತೆ ಬಳಕೆಯಲ್ಲಿದೆ.ಮದುವೆಯಲ್ಲಿ ಗಂಡುಹೆಣ್ಣಿಗೆ ಅಕ್ಷತೆ ಹಾಕಿದರೆ ಮುಂಜಿಯಲ್ಲಿ ವಟುವಿಗೆ ಅಕ್ಷತೆ ಹಾಕುತ್ತಾರೆ.ಅಂತಃಪಟ ಸರಿಯುವ ಮುನ್ನ ವಧುವರರು ಎದುರು ಬದುರಾಗಿ ನಿಲ್ಲುವದು ಅಕ್ಕಿರಾಶಿಯ ಮೇಲೆ.ಸಪ್ತಪದಿ ತುಳಿಯುವದೂ ಅಕ್ಕಿಯಿಂದ ಮಾಡಿದ ಏಳು ರಾಶಿಯ ಮೇಲೆ. ಅದರ ಮೇಲೆ ಹೆಜ್ಜೆ ಇಟ್ಟು ಗಂಡನ ಮನೆಯನ್ನು ಪ್ರವೇಶಿಸುವದೂ ಮನೆಯ ಹೊಸ್ತಿಲ ಮೇಲಿಟ್ಟ ಸೇರನ್ನು ಒದ್ದು ಒಳಗೆ ಪ್ರವೇಶಿಸುತ್ತಾಳೆ.

ಮದುವೆಯಾಗುವಾಗ ಅಕ್ಷತೆಗಳನ್ನು ಹಾಕಿ ಹಾರೈಸಿದರೆ ಭಕ್ತರು ಅಥವಾ ಶಿಷ್ಯರು ಕಾಲಿಗೆರಗಿದಾಗ ಗುರುಗಳು ಅಕ್ಷತೆ ನೀಡಿ ಆಶೀರವದಿಸುತ್ತಾರೆ.ದೇವಿ ಪೂಜೆಯ ಸಮಯಕ್ಕೆ ಕಲಶಕ್ಕೆ ಅಕ್ಷತೆ ಹಾಕಲಾಗುತ್ತದೆ.ದಂಪತಿಗಳಿಗೆ ಅಕ್ಷತೆ ಹಾಕಿದಾಗ ರಕ್ತದ ಕಣಕಣದಲ್ಲೂ ಪ್ರೀತಿ,ಸಾಮರಸ್ಯ ಒಡಮೂಡಿ ದಾಂಪತ್ಯ ಜೀವನ ನಲಿವು ,ಗೆಲುವನ್ನು ಪೋಷಿಸಿ ಸಮೃದ್ಧಗೊಳಿಸಲಿ ಎಂಬ ಹರಕೆ,ಹಾರೈಕೆ ಪ್ರತಿನಿಧಿಸುತ್ತದೆ.ಹಳದೀ ಬಣ್ಣವು ದೇವರ ಕೃಪೆಯ ಪ್ರತೀಕವಾಗಿದ್ದು ದೇಹದ ಕಣಕಣದಲ್ಲೂ ಹಾಸುಹೊಕ್ಕಾಗಿ ಶ್ರೇಯೋಭಿವೃದ್ಧಿಯನ್ನು ಪೋಷಿಸಲಿ ಎಂಬ ಹರಕೆ,ಹಾರೈಕೆಯನ್ನು ಧ್ವನಿಸುತ್ತದೆ.



ಅಕ್ಷತೆಯ ಮಹತ್ವ- ಅಕ್ಕಿ ಚಂದ್ರನಿಗೆ ಸೇರಿದ ಧಾನ್ಯವಾಗಿದೆ.ಮನುಷ್ಯನ ಗುಣದ ಮೇಲೆ ಚಂದ್ರನ ಪ್ರಭಾವವಿರುತ್ತದೆ.ಅದೇ ರೀತಿ ಅಕ್ಷತೆ ನಮ್ಮ ಮೇಲೆ ಬೀಳುವದರಿಂದ ,ಮಂತ್ರಾಕ್ಷತೆ ಪಡೆಯುವದರಿಂದ ನಮ್ಮ ಆರೋಗ್ಯದ ಮೇಲೆ,ಬುದ್ಧಿಯ ಮೇಲೆ ಪರಿಣಾಮ ಬೀರುತ್ತದೆ. ಅಕ್ಷತೆ ನೀಡಿ ಆಶೀರವದಿಸಿದವರ ಉತ್ತಮ ಗುಣಗಳು ನಮಗೆ ಪ್ರಾಪ್ತವಾಗುತ್ತವೆ.

ಗಣಪತಿ ಪೂಜೆಯಲ್ಲಿ ಅಕ್ಷತೆಯ ಮಹತ್ವ- ಗಣೇಶನ ಹಬ್ಬದಲ್ಲಿ ಗಣೇಶನನ್ನು ಮನೆಗೆ ತರುವಾಗ ಅರಿಷಿಣ,ಕುಂಕುಮ ಮಿಶ್ರಿತ ಅಕ್ಷತೆ ಬಳಸುತ್ತಾರೆ.ಗಣಪತಿಯನ್ನು 'ಶುಭಕರ್ತಾ' ಎಂದು ಪರಿಗಣಿಸಲಾಗುತ್ತದೆ.ಅಕ್ಷತೆ ಖುಷಿ ಮತ್ತು ಸಮೃದ್ಧಿಯ ಸಂಕೇತ. ಗಣೇಶನಿಗೆ ಅಕ್ಷತೆ ಹಾಕಿದರೆ ಮನೆಯಲ್ಲಿಯ ಎಲ್ಲ ಬಾಧೆಗಳುದೂರಾಗಿ ಶುಭ ಮೂಡಿ ಸಮೃದ್ಧಿ ನೆಲೆಸುತ್ತದೆ.ಇದಲ್ಲದೇ ಗಣೇಶನ ಜೊತೆಗೆ ಎಲ್ಲ ದೇವಿ ದೇವತೆಗಳ ಆಶೀರ್ವಾದ ಲಭಿಸುತ್ತದೆ.ಮನೆಯಲ್ಲಿ ಇದರಿಂದ ಸಕಾರಾತ್ಮಕ ಭಾವ ಬೆಳೆಯುತ್ತದೆ.

---

# ಹಿಮಶಿಖರದಲ್ಲಿ ಮಿನುಗಿದ ಗದಗದ ಹೆಮ್ಮೆ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 53

ಗದಗ ಜಿಲ್ಲೆಯ ಜಕ್ಕಲಿ ಗ್ರಾಮದ ಮಣ್ಣಿನ ಸೊಗಡನ್ನು ಹೊತ್ತ ಹೆಮ್ಮೆಯ ಪುತ್ರಿ,ಎನ್‌ಸಿಸಿ ಕೆಡೆಟ್‌ಗಳಾದ ಕುಮಾರಿ ಸೃಷ್ಟಿ ಉಮೇಶ್ ಮೇಟಿ ಅವರು, ಉತ್ತರಾಖಂಡದ 15,500 ಅಡಿ ಎತ್ತರದ ಹುರ್ರಾ ಟಾಪ್ ಶಿಖರವನ್ನು ಏರಿ ಚರಿತ್ರೆಯನ್ನು ರಚಿಸಿದ್ದಾರೆ. ಮೈಕೊರೆಯುವ ಚಳಿ, ಉಸಿರುಗಟ್ಟಿಸುವ ವಿರಳ ಗಾಳಿ, ದಾರಿ ತಪ್ಪಿಸುವ ಹಿಮದ ಬಿರುಗಾಳಿಯನ್ನು ಮೆಟ್ಟಿನಿಂತು, ಗದಗದ ಕೀರ್ತಿಪತಾಕೆಯನ್ನು ಹಿಮಾಲಯದ ತುತ್ತತುದಿಯಲ್ಲಿ ಹೆಮ್ಮೆಯಿಂದ ನೆಟ್ಟಿದ್ದಾರೆ.

ಹಳ್ಳಿಯ ಸರಳ ಪರಿಸರದಲ್ಲಿ ಕನಸುಗಳನ್ನು ಕಟ್ಟಿಕೊಂಡವರು, ಎನ್‌ಸಿಸಿ ಸಮವಸ್ತ್ರದ ಶಿಸ್ತಿನಲ್ಲಿ ಪಳಗಿದವರು. ನಸುಕಿನ ಮಂಜು ಕರಗುವ ಮುನ್ನವೇ ಮೈದಾನದಲ್ಲಿ ಬೆವರು ಸುರಿಸಿದರು. ಕ್ಲೈಂಬಿಂಗ್, ಮ್ಯಾಪ್ ರೀಡಿಂಗ್, ತಾಳ್ಮೆಯ ತರಬೇತಿ ಪ್ರತಿಯೊಂದು ಹಂತವೂ ಇವರನ್ನು ಶಿಖರದತ್ತ ಸಜ್ಜುಗೊಳಿಸಿತು.ನಾನು ಏರಿದರೆ ನಮ್ಮ ಊರು ಏರುತ್ತದೆ ಎಂಬ ಛಲವೇ ಇವರಿಗೆ ದಾರಿದೀಪವಾಯಿತು. ಹುರ್ರಾ ಟಾಪ್‌ನ ದುರ್ಗಮ ಹಾದಿಯಲ್ಲಿ ಪ್ರತಿ ಹೆಜ್ಜೆಯೂ ಅಗ್ನಿಪರೀಕ್ಷೆಯಾಗಿತ್ತು. ಆದರೂ ಜಕ್ಕಲಿಯ ಮಣ್ಣಿನ ಋಣ, ತಾಯ್ನಾಡಿನ ಮೇಲಿನ ಪ್ರೀತಿ ಇವರನ್ನು ಮುನ್ನಡೆಸಿತು.ಶಿಖರದ ಮೇಲೆ ತ್ರಿವರ್ಣದೊಂದಿಗೆ ನಿಂತಾಗ, ಅದು ಒಬ್ಬರ ಗೆಲುವಾಗಿರಲಿಲ್ಲ; ಗ್ರಾಮೀಣ ಹೆಣ್ಣುಮಕ್ಕಳ ಆತ್ಮವಿಶ್ವಾಸದ ಸಾಮೂಹಿಕ ಉದ್ಘೋಷವಾಗಿತ್ತು. ಸೃಷ್ಟಿ ಅವರ ಸಾಧನೆ ಸಾರುತ್ತದೆ ಕನಸಿಗೆ ಪರಿಶ್ರಮದ ರೆಕ್ಕೆ ಕಟ್ಟಿದರೆ ಹಳ್ಳಿಯ ಹೆಣ್ಣುಮಕ್ಕಳೂ ಹಿಮಾಲಯವನ್ನು ಮುತ್ತಿಡಬಲ್ಲರು. ಗದಗದ ಈ ಹೆಮ್ಮೆಯ ಪುತ್ರಿಗೆ ಹೃತ್ಪೂರ್ವಕ ಅಭಿನಂದನೆಗಳು. ಇವರ ಹೆಜ್ಜೆಗುರುತುಗಳು ಸಾವಿರಾರು ಮನಗಳಲ್ಲಿ ಸ್ಫೂರ್ತಿಯ ಹೊಸ ಹಾದಿಯನ್ನು ತೆರೆದಿವೆ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,